

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 4 ಸೋಮವಾರ 2023

ಸಂಪುಟ: 44 | ಸಂಚಿಕೆ: 140 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ದಿಕ್ಕು ದೆಸೆಯಿಲ್ಲದ 'INDIA'

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ವ್ಯಂಗ್ಯೋಕ್ತಿ



- ಚುನಾವಣೆಯೊಳಗೆ ಮೈತ್ರಿಕೂಟ ಏನಾಗುತ್ತೋ ನೋಡೋಣ
- ಮೈತ್ರಿಕೂಟದ ಸದಸ್ಯರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ
- ಪ್ರಧಾನಿ ಅಭ್ಯರ್ಥಿ ಯಾರು ಎಂದು ಇನ್ನೂ ಹೇಳಿಲ್ಲ
- ಮೈತ್ರಿಕೂಟದ ಸಮಿತಿ ಅಧ್ಯಕ್ಷರು ಯಾರೆಂದು ತಿಳಿಸಿಲ್ಲ
- ಕಮಿಟಿಗೆ ಕಾಮನ್ ಮಿನಿಮಮ್ ಪ್ರೋಗ್ರಾಂ ಇಲ್ಲ

ಹಾಸನ, ಸೆ.3–ವಿಪಕ್ಷಗಳ ಮೈತ್ರಿಕೂಟವಾದ **India ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಲೋಕಸಭಾ ಚುನಾವಣೆಗೆ ಇನ್ನು ಏಳೆಂಟು ತಿಂಗಳಿದೆ. ಅಲ್ಲಿವರೆಗೂ ಏನಾಗುತ್ತೆ ನೋಡೋಣ. ನಾನೂ ಬದುಕಿರುತ್ತೇನೆ ಎಂದು ಮಾರ್ಮಿಕವಾಗಿ ಹೇಳಿದರು.**


ಇಂದಿಲ್ಲಿ ಸುದ್ದಿಗಾರರ ಜೊತೆ ಮಾತನಾಡುತ್ತಿದ್ದ ಅವರು, ಲೋಕಸಭೆಗೆ ಅವಧಿ ಪೂರ್ವ ಚುನಾವಣೆ ನಡೆಸಲು ಬಿಜೆಪಿ ಪ್ಲಾನ್ ಮಾಡಿದೆ ಎಂಬ ಮಮತಾ ಬ್ಯಾನರ್ಜಿ ಹೇಳಿಕೆಗೆ ಪ್ರತಿಕ್ರಿಯಿಸಿ, ಇಂಡಿಯಾ ಮೈತ್ರಿಕೂಟದ ಸದಸ್ಯರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ. ಮುಂಬೈನಲ್ಲಿ 28 ಗುಂಪಿನ ಒಂದು ದೊಡ್ಡ ಮಹಾಸಭೆ ನಡೆಯಿತು. ಆ.30ರೊಳಗೆ ಸೀಟು ಹಂಚಿಕೆ ಮಾಡುತ್ತೇವೆ ಎಂದು ಹೇಳಿದ್ದರು. ಅದು ಏನಾಯಿತು ಎಂದು ದೇವೇಗೌಡರು ಪ್ರಶ್ನಿಸಿದರು.

ಈ ಮೈತ್ರಿಕೂಟಕ್ಕೆ ಒಂದು ಸಮಿತಿ ಮಾಡಿದ್ದಾರೆ. ಅದರ ಅಧ್ಯಕ್ಷರು ಯಾರು? ಈ ಮೈತ್ರಿಕೂಟದಿಂದ ಪ್ರಧಾನಮಂತ್ರಿ ಅಭ್ಯರ್ಥಿ ಯಾರು? ಸಂಚಾಲಕರಾದರೂ ಯಾರು ಎಂದು ಹೇಳಿದ್ದಾರಾ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು. ಈ ಮೈತ್ರಿಕೂಟ ರಚಿಸಿರುವ ಕಮಿಟಿಯವರು ಸಾಮಾನ್ಯ ಕನಿಷ್ಠ ಕಾರ್ಯಕ್ರಮ (ಕಾಮನ್ ಮಿನಿಮಮ್ ಪ್ರೋಗ್ರಾಂ) ರೂಪಿಸಿದ್ದಾರಾ? ಎಂದ ಅವರು, ಚುನಾವಣೆಗೆ ಇನ್ನು ಏಳೆಂಟು ತಿಂಗಳು ಬಾಕಿ ಇದೆ. ಈ ಮೈತ್ರಿಕೂಟ ಏನಾಗುತ್ತೆ ನೋಡೋಣ. ನಾನೂ ಬದುಕಿರುತ್ತೇನೆ ಎಂದರು. ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆ ಬಗ್ಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಚಾಮುಂಡೇಶ್ವರಿ ತಾಯಿಗೂ ಗೃಹಲಕ್ಷ್ಮಿ ಯೋಜನೆಯ ಎರಡು ಸಾವಿರ ರೂ. ಕೊಟ್ಟು 'ನಮಗೆ ಶಕ್ತಿ ಕೊಡು' ಎಂದು ಕೇಳಿದ್ದಾರೆ. ಆ ಗ್ಯಾರಂಟಿ ಹೇಗೆ ನಡೆಯುತ್ತೋ ನೋಡೋಣ. ಗೃಹಲಕ್ಷ್ಮಿ ಯೋಜನೆ ಎಷ್ಟು ದಿನ ನಡೆಯುತ್ತದೆ ಎಂದು ಹೇಳಲಾಗುವುದಿಲ್ಲ. ಮೂರ್‍ನಾಲ್ಕು ತಿಂಗಳು ಕಾಯೋಣ. ನಂತರ ಅದು ಹೇಗೆ ಮುಂದುವರೆಯುತ್ತದೆ ನೋಡೋಣ ಎಂದು ಹೆಚ್.ಡಿ.ದೇವೇಗೌಡರು ಹೇಳಿದರು.

ಬಿಜೆಪಿಯವರು ಮಾಡಿರುವ ಎಲ್ಲಾ ಅಕ್ರಮಗಳ ಬಗ್ಗೆ ತನಿಖೆ ಮಾಡುತ್ತೇವೆ ಎಂದು ಕಳೆದ ಮೂರು ತಿಂಗಳಿಂದ ಪ್ರತೀ ದಿನ ತಮಟೆ ಹೊಡೆಯುತ್ತಿದ್ದಾರೆ. ತನಿಖೆ ಮಾಡಬೇಡಿ ಎಂದು ಅವರನ್ನು ಹಿಡಿದುಕೊಂಡಿರುವವರು ಯಾರು? ಬಿಟ್ ಕಾಯಿನ್ ಬಗ್ಗೆಯೂ ತನಿಖೆ ನಡೆಸಲಿ ಎಂದು ಗುಡುಗಿದರು.


ಕಾವೇರಿ ನೀರಿನ ವಿಚಾರವಾಗಿ ನನಗೆ ಏನೂ ಹೇಳಲು ಶಕ್ತಿ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದ ಸಭೆಯಲ್ಲಿ ಕುಮಾರಸ್ವಾಮಿ ಮಾತನಾಡಿ, ಎಲ್ಲಾ ವಿಚಾರವನ್ನು ಹೇಳಿದ್ದಾರೆ. ಒಂದು ಕಡೆ ಸುಪ್ರೀಂಕೋರ್ಟ್ ತೀರ್ಪು ನೀಡಿಲ್ಲ ಮತ್ತೊಂದು ಕಡೆ ಮಂಡ್ಯದಲ್ಲಿ ಹೋರಾಟ ನಡೆಯುತ್ತಿದೆ ಎಂದ ಅವರು, ಕಾವೇರಿ ವಿಚಾರವಾಗಿ ಮಾತನಾಡುವುದು ನನ್ನ ಜವಾಬ್ದಾರಿ. ಆದರೆ ಅದಕ್ಕೆ ಇನ್ನೂ ಟೈಂ ಬರಬೇಕು. ಟೈಂ ಬಂದಾಗ ಮಾತನಾಡುತ್ತೇನೆ ಎಂದರಲ್ಲದೆ, ಪ್ರಧಾನಮಂತ್ರಿಗಳ ಬಳಿ ಹೋಗಬೇಕು ಎನ್ನುವ ಸನ್ನಿವೇಶ ಬಂದರೆ ನಾನೇ ಹೋಗುತ್ತೇನೆ ಎಂದರು.

ನಾಳೆ 'ಇಂಡಿಯಾ' ಸಂಸದರ ಸಭೆ



ನವದೆಹಲಿ: ಸಂಸತ್ ವಿಶೇಷ ಅಧಿವೇಶನಕ್ಕೆ ಮುಂಚಿತವಾಗಿ 'ಇಂಡಿಯಾ' ಮೈತ್ರಿಕೂಟದ ಸಂಸದರ ಸಭೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆದಿದ್ದಾರೆ. ಸೆ.5ರಂದು ದೆಹಲಿಯ ರಾಜಾಜಿ ಮಾರ್ಗದಲ್ಲಿರುವ ತಮ್ಮ ನಿವಾಸದಲ್ಲಿ ಸಭೆ ನಡೆಸಲು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸೆ.18ರಿಂದ 22ರವರೆಗೆ ನಡೆಯಲಿರುವ ವಿಶೇಷ ಅಧಿವೇಶನಕ್ಕೆ ಸಜ್ಜಾಗಿರುವ ಇಂಡಿಯಾ ಮೈತ್ರಿಕೂಟ, ಕಾರ್ಯತಂತ್ರ ರೂಪಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಏತನ್ಮಧ್ಯೆ ಸಂಸತ್ತಿನ 5 ದಿನಗಳ ವಿಶೇಷ ಅಧಿವೇಶನ ನಡೆಸುವ ಕುರಿತು ಕೇಂದ್ರ ಸರ್ಕಾರ ಇನ್ನೂ ಸ್ಪಷ್ಟಪಡಿಸಿಲ್ಲ. 2024ರ ಲೋಕಸಭೆಯಲ್ಲಿ ಬಿಜೆಪಿಯನ್ನು ಒಗ್ಗಟ್ಟಿನಿಂದ ಮಣಿಸಲು ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ನಾಯಕರು ಪಣ ತೊಟ್ಟಿದ್ದಾರೆ. ಇತ್ತೀಚೆಗೆ ನಡೆದ ಸಂಸತ್ತಿನ ಮುಂಗಾರು ಅಧಿವೇಶನದಲ್ಲೂ ಮೈತ್ರಿಕೂಟ 'ಇಂಡಿಯಾ' ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದೆ.

ಇಂದು ಬರಪೀಡಿತ ತಾಲೂಕುಗಳ ಘೋಷಣೆ



ಕೋಲಾರ: ಬರಪೀಡಿತ ತಾಲೂಕು ಘೋಷಣೆ ಸಂಬಂಧ ನಾಳೆ (ಸೋಮವಾರ) ಸಚಿವ ಸಂಪುಟ ಉಪ ಸಮಿತಿ ಸಭೆ ನಡೆಯಲಿದ್ದು, ಕೇಂದ್ರ ಸರ್ಕಾರದ ಮಾನದಂಡದ ಅನ್ವಯ ಬರಪೀಡಿತ ತಾಲೂಕು ಘೋಷಣೆ ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ತಿಳಿಸಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆ.18ರಂದು ಸುಮಾರು 113 ತಾಲೂಕುಗಳನ್ನು ತಾತ್ಕಾಲಿಕ ಬರಪೀಡಿತ ಎಂದು ಪಟ್ಟಿ ಮಾಡಿಕೊಂಡಿದ್ದೇವೆ. ಆ.31ರಂದು ಸುಮಾರು 75 ತಾಲೂಕುಗಳ ಪಟ್ಟಿ ಸಿದ್ಧ ಮಾಡಿದ್ದೇವೆ. ಯಾವ ತಾಲೂಕು ಅರ್ಹವಾಗುತ್ತವೆ ಎಂಬುದನ್ನು ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗುವುದು, ಅವಶ್ಯವಿದ್ದರೆ ಸಚಿವ ಸಂಪುಟದ ಗಮನಕ್ಕೂ ತರಲಾಗುವುದು ಎಂದರು.

ಆಯಾಯ ತಾಲೂಕು ಬೆಳೆ ಸಮೀಕ್ಷೆ ನಡೆಸಿ ಅದರ ಆಧಾರದ ಮೇಲೆ ಸೋಮವಾರ ಬರಪೀಡಿತ ತಾಲೂಕುಗಳ ಮೊದಲ ಪಟ್ಟಿ ಘೋಷಿಸಲಾಗುವುದು. ಮುಂದಿನ 1 ವಾರ ಅಥವಾ 10 ದಿನಗಳಲ್ಲಿ 2ನೇ ಪಟ್ಟಿ ಘೋಷಣೆ ಮಾಡಲಾಗುವುದು. ಮಳೆ ಪರಿಸ್ಥಿತಿ ಆಧಾರದ ಮೇಲೆ 3ನೇ ಪಟ್ಟಿ ಸಿದ್ಧಪಡಿಸಲೂ ಸರ್ಕಾರ ಚಿಂತನೆ ನಡೆಸಿದೆ. ಮೊದಲ ಹಾಗೂ ಎರಡನೇ ಪಟ್ಟಿಯಲ್ಲಿ ಬಿಟ್ಟುಹೋದ ತಾಲೂಕುಗಳನ್ನು 3ನೇ ಪಟ್ಟಿಯಲ್ಲಿ ಪರಿಗಣಿಸಲಾಗುವುದು ಎಂದರು.

ಸೋನಿಯಾ ಗಾಂಧಿ ಆಸ್ಪತ್ರೆಗೆ ದಾಖಲು




ನವದೆಹಲಿ: ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ಮತ್ತೆ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಎದೆ ಭಾಗದ ಸೋಂಕಿನ ಸಮಸ್ಯೆಯಿಂದಾಗಿ ಸೋನಿಯಾ ಗಾಂಧಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರ ಆರೋಗ್ಯದ ಬಗ್ಗೆ ವೈದ್ಯರ ತಂಡ ನಿಗಾ ಇರಿಸಿದ್ದು, ಆರೋಗ್ಯ ಸ್ಥಿರವಾಗಿದೆ. ಮೂಲಗಳ ಪ್ರಕಾರ ಸೋನಿಯಾ ಅವರನ್ನು ದೆಹಲಿಯ ಸರ್ ಗಂಗಾರಾಮ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸಣ್ಣಗಿನ ಜ್ವರ ಕಾಣಿಸಿಕೊಂಡ ಬಳಿಕ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳಿಕ ಅವರನ್ನು ಪರೀಕ್ಷೆ ನಡೆಸಿದ ವೈದ್ಯರು ಅವರಿಗೆ ಎದೆ ಭಾಗದ ಸೋಂಕಿನ ಸಮಸ್ಯೆ ಇರುವುದಾಗಿ ಹೇಳಿದ್ದಾರೆ.

ಈ ವರ್ಷದ ಮಾರ್ಚ್‌ನಲ್ಲಿಯೂ ಜ್ವರದ ಕಾರಣ ಸೋನಿಯಾ ಗಾಂಧಿ ದೆಹಲಿಯ ಆಸ್ಪತ್ರೆಗೆ ದಾಖಲಾಗಿದ್ದರು. ಗಂಗಾರಾಮ್ ಆಸ್ಪತ್ರೆಯಲ್ಲಿಯೇ ಅವರು ಸದಾ ಚಿಕಿತ್ಸೆಯನ್ನು ಪಡೆಯುತ್ತಾರೆ. ಈ ವರ್ಷದ ಜನವರಿಯಲ್ಲಿ ಸೋನಿಯಾ ಗಾಂಧಿ ಉಸಿರಾಟದ ತೊಂದರೆಯ ಕಾರಣ ಗಂಗಾರಾಮ್ ಆಸ್ಪತ್ರೆಗೆ ದಾಖಲಾಗಿದ್ದರು. ಶ್ವಾಸಕೋಶದಲ್ಲಿನ ವೈರಾಣು ಸೋಂಕಿನಿಂದ ಬಳಲುತ್ತಿದ್ದರು. ಆಗ ಆಸ್ಪತ್ರೆಯ ಡಾ. ಅನುಪ್ ಬಸು ತಂಡ ಸೋನಿಯಾ ಗಾಂಧಿಗೆ ಚಿಕಿತ್ಸೆ ನೀಡಿತ್ತು.

ಐದು ಬಾರಿ ಮರುಜನ್ಮ ಪಡೆದಿದ್ದೇನೆ

- ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಮಾಜಿ ಸಿಎಂ ಕುಮಾರಸ್ವಾಮಿ ಹೇಳಿಕೆ
- ಆರೋಗ್ಯದ ಬಗ್ಗೆ ಜಾಗ್ರತೆ ವಹಿಸಿ, ನನ್ನ ಜೀವನವನ್ನು ಕನಿಕರದಿಂದ ನೋಡಿ



ಬೆಂಗಳೂರು,ಸೆ.3– ನಾನು 5 ಬಾರಿ ಮರುಜನ್ಮ ಪಡೆದಿದ್ದೇನೆ, ಈ ಬಾರಿ ಸ್ವಲ್ಪ ತಡ ಮಾಡಿದ್ದರೂ ಇವತ್ತು ನಿಮ್ಮ ಜೊತೆ ಮಾತನಾಡಲು ಆಗುತ್ತಿರಲಿಲ್ಲ ಎಂದು ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಆಘಾತಕಾರಿ ಅನುಭವಗಳನ್ನು ಹಂಚಿಕೊಂಡಿದ್ದಾರೆ

ಪಾರ್ಶ್ವವಾಯು ಸಮಸ್ಯೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಹೆಚ್.ಡಿ ಕುಮಾರಸ್ವಾಮಿ ಇಂದು ಡಿಸ್ಚಾರ್ಜ್ ಆಗಿದ್ದಾರೆ. ಬಳಿಕ ಆಸ್ಪತ್ರೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ತಂದೆ–ತಾಯಿ ಆಶೀರ್ವಾದದಿಂದ ನಾನು ಇಲ್ಲಿದ್ದೇನೆ, ನನಗೆ ಪುನರ್ಜನ್ಮ ಬಂದಿದೆ. ದೇವರ ದಯೆಯಿಂದ ಆರೋಗ್ಯವಾಗಿದ್ದೇನೆ ಎಂದು ಹೇಳಿದ್ದಾರೆ. ಅಂದು ರಾತ್ರಿ 2 ಗಂಟೆ ವೇಳೆಗೆ ನನಗೆ ಎಚ್ಚರವಾಯ್ತು, ತಕ್ಷಣ ನನ್ನ ದೇಹದಲ್ಲಿ ಬದಲಾವಣೆ ಕಂಡುಬಂತು. ಧ್ವನಿಯಲ್ಲೂ ಬದಲಾವಣೆ ಕಂಡು ಬಂತು. ಕೂಡಲೇ ಡಾ.ಮಂಜುನಾಥ್ ಹಾಗೂ ಡಾ.ಯತೀಶ್ ಅವರಿಗೆ ಕರೆ ಮಾಡಿ, ಬಿಡದಿಯ ತೋಟದಿಂದ ಇಪ್ಪತ್ತೇ ನಿಮಿಷಕ್ಕೆ ಆಸ್ಪತ್ರೆಗೆ ಬಂದೆ ಎಂದು ಆ ಕ್ಷಣದಲ್ಲಾದ ಕಹಿ ಅನುಭವವನ್ನು ಹಂಚಿಕೊಂಡಿದ್ದಾರೆ. ನಾನಿಂದು ರಾಜಕೀಯ ಬಿಟ್ಟು ಕೆಲ ಮಾತನ್ನು ಮಾತನಾಡಬೇಕಿದೆ, ▶ 5ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ, ಸಾವಿನ ಸಂಖ್ಯೆ ಇಳಿಕೆ






ಎಡಿಜಿಪಿ ಅಲೋಕ್ ಕುಮಾರ್ ಮಾಹಿತಿ

ಬೆಂಗಳೂರು, ಸೆ.3– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸೂಕ್ತ ರಸ್ತೆ ಸುರಕ್ಷತಾ ಕ್ರಮ ಕೈಗೊಂಡಿದ್ದರಿಂದ ಕಳೆದ ಆಗಸ್ಟ್ ತಿಂಗಳಲ್ಲಿ ಅಪಘಾತಗಳು ಮತ್ತು ಸಾವಿನ ಸಂಖ್ಯೆಯಲ್ಲಿ ಇಳಿಕೆ ಕಂಡಿದೆ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಸಂಚಾರ ಮತ್ತು ಸುರಕ್ಷತೆ) ಅಲೋಕ್ ಕುಮಾರ್ ತಿಳಿಸಿದ್ದಾರೆ.

ಭಾನುವಾರ ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಟ್ವೀಟ್ ಮಾಡಿರುವ ಅವರು, ಅಪಘಾತ ಮತ್ತು ಸಾವಿನ ಸಂಖ್ಯೆಗಳ ಮಾಹಿತಿ ನೀಡಿದ್ದಾರೆ. ಈ ಎಕ್ಸ್‌ಪ್ರೆಸ್ ವೇನಲ್ಲಿ ರಸ್ತೆ ಅಪಘಾತಗಳು, ಸಾವು–ನೋವುಗಳು ಹೆಚ್ಚಾಗಿದ್ದವು. ಇದರಿಂದ ಪೊಲೀಸ್ ಇಲಾಖೆ ಜೊತೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೈಗೊಂಡಿದ್ದ ಕ್ರಮಗಳಿಂದ ▶ 5ನೇ ಪುಟಕ್ಕೆ

ಆದಿತ್ಯ ಎಲ್–1 ಬಾಹ್ಯಾಕಾಶ ನೌಕೆ ಕಕ್ಷೆಗೆ ಏರಿಸುವ ಮೊದಲ ಪ್ರಕ್ರಿಯೆ ಯಶಸ್ವಿ



ಬೆಂಗಳೂರು: ಭಾರತದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋ ತನ್ನ ಮೊದಲ ಸೂರ್ಯ ಯೋಜನೆ ಆದಿತ್ಯಾ ಎಲ್–1ರ ಮೊದಲ ಹಂತದ ಕಾರ್ಯಾಚರಣೆ ಯಶಸ್ವಿಯಾಗಿದೆ.

ಆದಿತ್ಯ ಎಲ್–1 ಬಾಹ್ಯಾಕಾಶ ನೌಕೆಯನ್ನು ಕಕ್ಷೆಗೆ ಏರಿಸುವ ಮೊದಲ ಹಂತದ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ. ಮೈಕ್ರೋ ಬ್ಲಾಗಿಂಗ್ ಜಾಲತಾಣ ಟ್ವಿಟರ್‌ನಲ್ಲಿ ಇಸ್ರೋ ಈ ಬಗ್ಗೆ ಮಾಹಿತಿ ನೀಡಿದ್ದು, ಆದಿತ್ಯ L1 ನೌಕೆಯ ಮೊದಲ ಭೂ–ಆಧಾರಿತ ಕುಶಲತೆ (ಮೆನೋವರ್)ಯನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು ಎಂದು ತಿಳಿಸಿದೆ.

ಈ ಪ್ರಕ್ರಿಯೆಯನ್ನು ಬೆಂಗಳೂರಿನಲ್ಲಿರುವ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್ ಎಸಿ) ಕೇಂದ್ರದಿಂದ ಯಶಸ್ವಿಯಾಗಿ ನಿರ್ವಹಿಸಲಾಗಿದೆ. ಬಾಹ್ಯಾಕಾಶ ನೌಕೆ ಸುಸ್ಥಿತಿಯಲ್ಲಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದೆ. ಬಾಹ್ಯಾಕಾಶ ನೌಕೆ ಈಗ 245 ಕಿ.ಮೀ x 22459 ಕಿ.ಮೀ. ಕಕ್ಷೆ ತಲುಪಿದ್ದು, ಮುಂದಿನ ಹಂತದ ಕಕ್ಷೆ ಬದಲಾವಣೆ ಸೆಪ್ಟೆಂಬರ್ 5ರಂದು ಮಧ್ಯಾಹ್ನ 3 ಗಂಟೆಗೆ ನಿಗದಿಯಾಗಿದೆ. ಸೂರ್ಯನ ಅಧ್ಯಯನದ ಉದ್ದೇಶದ ಭಾರತದ ಮಹತ್ವಾಕಾಂಕ್ಷೆಯ ಆದಿತ್ಯ ಎಲ್–1 ವೀಕ್ಷಣಾಲಯವನ್ನು ಹೊತ್ತ ಪಿಎಸ್‌ಎಲ್‌ವಿ ರಾಕೆಟ್ ಅನ್ನು ಶ್ರೀಹರಿಕೋಟದ ಉಡಾವಣಾ ಕೇಂದ್ರದಿಂದ ಶನಿವಾರ ಯಶಸ್ವಿಯಾಗಿ ಉಡ್ಡಯನ ಮಾಡಲಾಗಿತ್ತು. ಭೂಮಿಯಿಂದ 15 ಲಕ್ಷ ಕಿ.ಮೀ ದೂರದಲ್ಲಿರುವ ಲಗ್ರಾಂಜಿಯನ್ ಬಿಂದುವಿನಲ್ಲಿ ಆದಿತ್ಯ ಎಲ್–1 ಅಂತರಿಕ್ಷ ವೀಕ್ಷಣಾಲಯವನ್ನು ಇರಿಸಲಾಗುವುದು. 125 ದಿನಗಳಲ್ಲಿ ಎಲ್–1 ಬಿಂದುವಿಗೆ ಸೇರಿಸಲಾಗುತ್ತದೆ.

ಕಾಡಾನೆ ದಾಳಿಯಿಂದ ಗಾಯಗೊಂಡಿದ್ದ ರೈತ ಸಾವು

ಸರಗೂರು ಬಳಿ ಗ್ರಾಮಸ್ಥರಿಂದ ಪ್ರತಿಭಟನೆ



ಕಾಡಾನೆ ದಾಳಿಗೆ ಬಲಿಯಾದ ರೈತ ಸಿದ್ದರಾಜನಾಯಕ ಶವವನ್ನು ಸ್ಮಶಾನದಲ್ಲಿ ಇರಿಸಿ, ಅರಣ್ಯ ಇಲಾಖೆ ವಿರುದ್ಧ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಸರಗೂರು,ಸೆ.3–ಕಾಡಾನೆ ದಾಳಿಯಿಂದ ತೀವ್ರವಾಗಿ ಗಾಯಗೊಂಡಿದ್ದ ರೈತ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದು, ಈ ಹಿನ್ನೆಲೆಯಲ್ಲಿ ತಾಲೂಕಿನ ಕುಂದೂರು ಗ್ರಾಮದಲ್ಲಿ ಅರಣ್ಯಾಧಿಕಾರಿಗಳ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಯಿತು.



ಸಿದ್ದರಾಜನಾಯಕ

ಗ್ರಾಮದ ಸಿದ್ದರಾಜನಾಯಕ (36) ಕಾಡಾನೆ ದಾಳಿಗೆ ಬಲಿಯಾದ ರೈತ. ಬಾಳೆ ತೋಟ ಕಾವಲಿಗೆ ಹೋಗಿದ್ದ ಇವರ ಮೇಲೆ ಶುಕ್ರವಾರ ರಾತ್ರಿ ಕಾಡಾನೆ ದಾಳಿ ನಡೆಸಿತ್ತು. ಕುಟುಂಬದವರು ಶನಿವಾರ ಬೆಳಗ್ಗೆ ತೋಟಕ್ಕೆ ಹೋದಾಗ ಘಟನೆ ಬೆಳಕಿಗೆ ಬಂದಿತ್ತು. ತೀವ್ರವಾಗಿ ಗಾಯಗೊಂಡಿದ್ದ ಸಿದ್ದರಾಜನಾಯಕ ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಭಾನುವಾರ ಮುಂಜಾನೆ ಸಾವನ್ನಪ್ಪಿದರು.

ರೊಚ್ಚಿಗೆದ್ದ ಗ್ರಾಮಸ್ಥರು: ಸಿದ್ದರಾಜನಾಯಕ ಅವರ ಶವವನ್ನು ಗ್ರಾಮದ ಸ್ಮಶಾನಕ್ಕೆ ತಂದಾಗ ಗ್ರಾಮಸ್ಥರ ತಾಳ್ಮೆ ಕಟ್ಟೆ ಒಡೆದಿತ್ತು. ಶವ ಮುಂದಿಟ್ಟುಕೊಂಡು ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆಗಿಳಿದರು. ಈ ಸಾವಿಗೆ ಅರಣ್ಯಾಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿ, ಘೋಷಣೆ ಕೂಗಿದರು. ಕಾಡಂಚಿನಲ್ಲಿ ಆನೆ ಕಂದಕ, ರೈಲ್ವೆ ಬ್ಯಾರಿಕೇಡ್, ಸೋಲಾರ್ ತಂತಿಯನ್ನು ಅಳವಡಿಸದ ಕಾರಣ ಕಾಡಾನೆಗಳು ಮೇವನ್ನರಸಿ ನಾಡಿಗೆ ಬರುತ್ತಿವೆ. ಪರಿಹಾರ ಕ್ರಮಕ್ಕೆ ಹಲವು ಬಾರಿ ಮನವಿ ಮಾಡಿದರೂ ಇಲಾಖೆ ಸ್ಪಂದಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಯ ವೈಫಲ್ಯ ಆರೋಪ: ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಸಮರ್ಪಕವಾಗಿ ಕಾವಲು ಕಾಯುತ್ತಿಲ್ಲ. ಮೇಲಧಿಕಾರಿಗಳಿಗೆ ಸುಳ್ಳು ಮಾಹಿತಿ ನೀಡಿ, ಕಾಲಹರಣ ಮಾಡುತ್ತಾರೆ. ಇದರ ಪರಿಣಾಮವನ್ನು ರೈತರು ಅನುಭವಿಸುವಂತಾಗಿದೆ. ಅರಣ್ಯ ಇಲಾಖೆ ವೈಫಲ್ಯದಿಂದ ರೈತರು ಜೀವ ಕಳೆದುಕೊಳ್ಳುತ್ತಿದ್ದಾರೆ. ಬೆಳೆ ಉಳಿಸಿಕೊಳ್ಳಲು ಅನಿವಾರ್ಯವಾಗಿ ರಾತ್ರಿ ವೇಳೆ ಜಮೀನಿಗೆ ಬಂದು ಕಾಡಾನೆಗಳಿಗೆ ಬಲಿಯಾಗುತ್ತಿದ್ದಾರೆ. ಘಟನಾ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸುವ ಸೌಜನ್ಯವನ್ನೂ ತೋರಿಸಿಲ್ಲ. ನಿರ್ಲಕ್ಷ್ಯಧೋರಣೆ ಹೊಂದಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಕೂಡಲೇ ವರ್ಗಾವಣೆ ಮಾಡಿ ಎಂದು ಆಗ್ರಹಿಸಿದರು.

ರೈತ ಮುಖಂಡರ ಆಕ್ರೋಶ: ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದ ಕರ್ನಾಟಕ ರಾಜ್ಯ ಕಲ್ಯಾಣ ರೈತ ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ, ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾಡಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳ ಹಾವಳಿ ವಿಪರೀತವಾಗಿದೆ. ರೈತರು ವರ್ಷವಿಡೀ ಕಷ್ಟಪಟ್ಟು ಬೆಳೆದ ಬೆಳೆಯನ್ನು ಮನೆಗೆ ಕೊಂಡೊಯ್ಯುವುದು ಕಷ್ಟಕರವಾಗಿದೆ. ಸಾಲ ತೀರಿಸಲಾಗದೆ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ರೈತ ಕುಟುಂಬಗಳ ಸ್ಥಿತಿ ಶೋಚನೀಯವಾಗಿದೆ. ಆದರೆ ಅರಣ್ಯಾಧಿಕಾರಿಗಳಿಗೆ ಇದ್ಯಾವುದೂ ಕಾಣಿಸುವುದಿಲ್ಲ. ಕಾಡುಪ್ರಾಣಿಗಳ ನಿಯಂತ್ರಣಕ್ಕೆ ತ್ವರಿತ ಕ್ರಮವಹಿಸದಿದ್ದರೆ ಹೋರಾಟ ▶ 5ನೇ ಪುಟಕ್ಕೆ

ತಮಿಳುನಾಡಿಗೆ ಕಾವೇರಿ ನೀರು: ಮಂಡ್ಯದಲ್ಲಿ ಮುಂದುವರೆದ ಪ್ರತಿಭಟನೆ







ಮಂಡ್ಯ,ಸೆ.3– ತಮಿಳುನಾಡಿಗೆ ನಿತ್ಯ ಐದು ಸಾವಿರ ಕ್ಯೂಸೆಕ್ ನೀರನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿರುವ ಕ್ರಮ ಖಂಡಿಸಿ ರೈತ ಹಿತರಕ್ಷಣಾ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳು ಹಾಗೂ ರಾಜಕೀಯ ಪಕ್ಷಗಳಿಂದ ನಡೆಯುತ್ತಿರುವ ಪ್ರತಿಭಟನಾ ಧರಣಿ ಭಾನುವಾರವು ಮುಂದುವರೆಯಿತು.

ಕನ್ನಡ ಸೇನೆಯಿಂದ ಕಲ್ಲು ಹೊತ್ತು ಧರಣಿ: ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಕನ್ನಡ ಸೇನೆ ಕಾರ್ಯಕರ್ತರು ತಲೆ ಮೇಲೆ ಕಲ್ಲು ಹೊತ್ತು ಪ್ರತಿಭಟನೆ ನಡೆಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ತಲೆ ಮೇಲೆ ಕಲ್ಲು ಹೊತ್ತು ಧರಣಿ ನಡೆಸಿದ ಸೇನೆಯ ಕಾರ್ಯಕರ್ತರು, ಕಾವೇರಿ ಹೋರಾಟಕ್ಕೆ ಇಳಿಯದ ಮಂಡ್ಯ ಜಿಲ್ಲೆಯ ಶಾಸಕರು ಮತ್ತು ಸಂಸದರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದ ಪ್ರತಿಭಟನಾಕಾರರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಹರಿಹಾಯ್ದರು. ಮಂಡ್ಯ ಜಿಲ್ಲೆಯ ಶಾಸಕ, ಸಂಸದರು ಕಾವೇರಿ ನೀರು ಉಳಿವಿಗಾಗಿ ಬೀದಿಗಿಳಿದು ಹೋರಾಟ ಮಾಡಬೇಕು. ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ತಕ್ಷಣ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಕನ್ನಡ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ್, ಸೇನೆಯ ಮಹಾಂತಪ್ಪ.ಶಿ ವಾಲಿ, ನಂದೀಶ್, ಮಂಜುನಾಥ್ ಬೆಟ್ಟಳ್ಳಿ, ಅರಕೆರೆ ರಘು, ಗುತ್ತಲು ಚಂದ್ರು, ಜಯಮ್ಮ, ದರ್ಶನ್, ರಾಜೇಶ್, ನಂದೀಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಬಿಜೆಪಿಯಿಂದ ವಿನೂತನ ಪ್ರತಿಭಟನೆ: ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪಕ್ಷದ ಕಾರ್ಯಕರ್ತರು ಭಾನುವಾರ ಕಾವೇರಿ ಮಾತೆ ಪ್ರತಿಮೆ ಅಪ್ಪಿಕೊಂಡು ಕಾವೇರಿ ತಾಯಿ ನಮ್ಮ ಬಿಟ್ಟು ಹೋಗಬೇಡಮ್ಮ ಎಂಬ ವಿನೂತನ ಚಳವಳಿ ನಡೆಸಿದರು. ಪಕ್ಷದ ಕಾರ್ಯಕರ್ತರು ನಗರದ ಕಾವೇರಿ ನೀರಾವರಿ ನಿಗಮ ಕಚೇರಿ ಎದುರು ಕಾವೇರಿ ಪ್ರತಿಮೆಗೆ ವಿಶೇಷ ಪೂಜೆ ಸಲ್ಲಿಸಿ ಪಾದ ಸ್ಪರ್ಶ ಮಾಡಿ ಅಪ್ಪಿಕೊಳ್ಳುವ ಮೂಲಕ ನಮ್ಮ ಬಿಟ್ಟು ಹೋಗಬೇಡಮ್ಮ ಎಂದು ಪ್ರಾರ್ಥಿಸಿದರು.

'ಹೋಗಬೇಡ ತಾಯಿ ಹೋಗಬೇಡ ನಮ್ಮ ಬಿಟ್ಟು ಹೋಗಬೇಡ, ಹೋಗಬೇಡಮ್ಮ ಹೋಗಬೇಡ ನಮ್ಮ ಬಿಟ್ಟು ಹೋಗಬೇಡಮ್ಮ' ಎಂಬ ಘೋಷವಾಕ್ಯದೊಂದಿಗೆ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ರೈತರ ವಿರೋಧದ ನಡುವೆಯೂ ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ನಿರಂತರ ನೀರು ಹರಿಸುತ್ತಿದ್ದು, ಇದರಿಂದ ಕಾವೇರಿ ಒಡಲು ಬರಿದಾಗುತ್ತಿದೆ. ದೇಶದ ಅಧಿಕಾರದ ಚುಕ್ಕಾಣಿ ಹಿಡಿಯಲು ಕಾಂಗ್ರೆಸ್ ಸೇರಿ ಹಲವು ಪಕ್ಷಗಳು ಮಾಡಿಕೊಂಡಿರುವ ಇಂಡಿಯಾ ಒಕ್ಕೂಟದ ರಾಜಕೀಯ ಒಳಿತಿಗೆ ರೈತರನ್ನು ಬಲಿಕೊಟ್ಟು ನೆರೆ ರಾಜ್ಯಕ್ಕೆ ನೀರು ಹರಿಸಲಾಗುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಶಿವಕುಮಾರ್ ಆರಾಧ್ಯ, ಸಿದ್ದರಾಜುಗೌಡ, ಹೊಸಹಳ್ಳಿ ಶಿವು ಸೇರಿದಂತೆ ಇತರರಿದ್ದರು.

ಧರಣಿಗೆ ಕನ್ನಡಪರ ಸಂಘಟನೆಗಳ ಬೆಂಬಲ: ಕಾವೇರಿ ನದಿ ನೀರು ಪ್ರಾಧಿಕಾರದ ಆದೇಶ ವಿರೋಧಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಪ್ರತಿಭಟನಾ ಧರಣಿಗೆ ವ್ಯಾಪಕ ಬೆಂಬಲ ವ್ಯಕ್ತವಾಗಿದ್ದು, 4ನೇ ದಿನದ ಹೋರಾಟದಲ್ಲಿ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಬೆಂಬಲ ಸೂಚಿಸಿದರು. ಬೆಂಗಳೂರಿನ ಕನ್ನಡಪರ ಸಂಘಟನೆಗಳಾದ ಕರ್ನಾಟಕ ರಕ್ಷಣಾ ವೇದಿಕೆ, ▶ 5ನೇ ಪುಟಕ್ಕೆ



ಕಾವೇರಿ ವಿವಾದ ಶಾಶ್ವತ ಪರಿಹಾರಕ್ಕೆ ಮೇಕೆದಾಟು ಯೋಜನೆ ಅನುಷ್ಠಾನ ಅನಿವಾರ್ಯ

ಕಾವೇರಿ ದುಂಡು ಮೇಜಿನ ಸಭೆಯಲ್ಲಿ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಅಭಿಮತ

ಮೈಸೂರು,ಸೆ.3(ಎಂಟಿವೈ)-ಕಾವೇರಿ ವಿವಾದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾದರೆ 'ಮೇಕೆದಾಟು' ಯೋಜನೆ ಅನುಷ್ಠಾನಗೊಳಿಸುವುದು ಅನಿವಾರ್ಯವಾಗಿದ್ದು, ಈ ಸಂಬಂಧ ತಮಿಳುನಾಡಿನಲ್ಲಿರುವ ಪ್ರಜ್ಞಾವಂತರೂ ಸೇರಿದಂತೆ ಸುಪ್ರಿಂಕೋರ್ಟ್‌ಗೆ ಮನವರಿಕೆ ಮಾಡಿಕೊಡುವ ಅಗತ್ಯವಿದೆ ಎಂದು ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ಕನ್ನಡ ಚಳವಳಿ ಕೇಂದ್ರ ಸಮಿತಿ ಆಯೋಜಿಸಿದ್ದ ಕಾವೇರಿ ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಯಾವುದೇ ಸರ್ಕಾರವಿದ್ದರೂ ಕಾವೇರಿ ವಿಚಾರದಲ್ಲಿ ಮೊದಲಿನಿಂದಲೂ ರಾಜ್ಯಕ್ಕೆ ಅನ್ಯಾಯವಾಗುತ್ತಲೇ ಇದೆ. 1924ರಲ್ಲಿ ಆದ ಒಪ್ಪಂದ ರಾಜ್ಯಕ್ಕೆ ಮಾರಕವಾಗುತ್ತಲೇ ಇದೆ. 50 ವರ್ಷದ ಅವಧಿಗಾಗಿ ಮಾಡಿಕೊಂಡ ಒಪ್ಪಂದ 1974ರಲ್ಲಿ ಮುಗಿದಿತ್ತು. ಆ ವೇಳೆ ಈ ಹಿಂದೆ ಮಾಡಿಕೊಂಡ ಒಪ್ಪಂದವನ್ನು ತೊಡೆದು ಹಾಕಬೇಕಾಗಿತ್ತು. ಆದರೆ, ಕೆಲ ಕಾರಣದಿಂದ ಅದನ್ನು ಇಂದಿಗೂ ಮುಂದುವರೆಸಿಕೊಂಡು ಬರಲಾಗುತ್ತಿದ್ದು, ನಮ್ಮ ರೈತರಿಗೆ ಕೃಷಿ ಚಟುವಟಿಕೆಗೆ ನೀರುಣಿಸಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾದಿಸಿದರು.

ರಾಜ್ಯದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರ ಕಾಲದಲ್ಲಿ ನೀರು ಹಂಚಿಕೆ ವಿಚಾರ ಕುರಿತಂತೆ ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಒಪ್ಪಂದ ಅಂತ್ಯಗೊಳಿಸಬೇಕಾಗಿತ್ತು. ಆದರೆ, ಅಂದು ರಾಮಕೃಷ್ಣ ಹೆಗಡೆ ಅವರು ಸ್ವಂತ ಬಲದ ಮೇಲೆ ಮುಖ್ಯಮಂತ್ರಿಯಾಗಿರದ ಕಾರಣ, ಸ್ವಯಂ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅದೇ ವೇಳೆ ಅಂದು ತಮಿಳುನಾಡು ಸಿಎಂ ಆಗಿದ್ದ ಎಂಜಿಆರ್ ಅವರು ಸಭೆಯೊಂದರಲ್ಲಿ ಪಾಲ್ಗೊಂಡು ಮದ್ರಾಸ್‌ಗೆ ಮರಳಿದಾಗ ಅನಾರೋಗ್ಯಕ್ಕೀಡಾಗಿ ಚಿಕಿತ್ಸೆಗಾಗಿ ವಿದೇಶಕ್ಕೆ ಹೋಗಬೇಕಾದ ಅನಿವಾರ್ಯತೆ ಉಂಟಾಯಿತು. ಆ ನಂತರ ಆದ ಬೆಳವಣಿಗೆಗಳಿಂದಾಗಿ ಕಾವೇರಿ ಸಮಸ್ಯೆ ಇನ್ನಷ್ಟು ಜಟಿಲಗೊಳ್ಳುವಂತಾಯಿತು ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ಕನ್ನಡ ಚಳವಳಿ ಕೇಂದ್ರ ಸಮಿತಿ ಆಯೋಜಿಸಿದ್ದ ಕಾವೇರಿ ದುಂಡು ಮೇಜಿನ ಸಭೆ ನಡೆಯಿತು.

ತಮಿಳುನಾಡಿನ ಡಿಎಂಕೆ, ಎಐಎಡಿಎಂಕೆ ನಡುವಿನ ರಾಜಕೀಯ ವೈಷಮ್ಯಕ್ಕೆ ಕಾವೇರಿ ನೀರನ್ನು ಅಸ್ತ್ರವಾಗಿಸಿಕೊಂಡರು. ಜೆ.ಜಯಲಲಿತಾ ಹಾಗೂ ಕರುಣಾನಿಧಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ರಾಜಕೀಯ ಲಾಭಕ್ಕಾಗಿ ಕಾವೇರಿ ವಿವಾದ ಮುನ್ನೆಲೆಗೆ ತರುತ್ತಲೇ ಬಂದರು. ಸಂಕಷ್ಟದ ಪರಿಸ್ಥಿತಿಯಲ್ಲಿ ಕಾವೇರಿ ನೀರಿಗಾಗಿ ಲಾಬಿ ಮಾಡಿದರು. ಎಲ್ಲಾ ಸಂದರ್ಭದಲ್ಲೂ ಕೇಂದ್ರ ಸರ್ಕಾರವೂ ರಾಜ್ಯದ ಹಿತ ಬಲಿಕೊಟ್ಟು, ತಮಿಳುನಾಡು ಪರ ಒಲವು ತೋರಿಸುತ್ತಲೇ ಬಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಅನ್ಯಾಯ ಮುಂದುವರೆದಿದೆ. ವಿ.ಪಿ.ಸಿಂಗ್ ಪ್ರಧಾನಿಯಾಗಿದ್ದ ವೇಳೆ ಕಾವೇರಿ ಟ್ರಿಬ್ಯುನಲ್ ರಚಿಸಲಾಯಿತು. ಈ ವೇಳೆ ವಿ.ಪಿ.ಸಿಂಗ್ ಅವರನ್ನು ರಾಜ್ಯದ ಪ್ರತಿನಿಧಿಯಾಗಿ ನಿಯೋಗವೊಂದು ಭೇಟಿ ಮಾಡಿ ಪ್ರಾಧಿಕಾರ ರಚಿಸದಂತೆ ಮನವಿ ಮಾಡಿದ್ದೆವು. ಆದರೆ, ವಿ.ಪಿ.ಸಿಂಗ್ ಅವರು ತಮಿಳುನಾಡಿನ 35 ಸಂಸದರ ಬೆಂಬಲದಿಂದ ಅಧಿಕಾರ ನಡೆಸುತ್ತಿದ್ದೇನೆ. ಯಾವುದೇ ಕಾರಣಕ್ಕೂ ತಮಿಳುನಾಡಿನ ವಿರುದ್ಧವಾಗಿ ನಡೆದುಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿ ಪ್ರಾಧಿಕಾರ ರಚಿಸಿದರು ಎಂದು ವಿಷಾದಿಸಿದರು.

> "ನಮ್ಮ ಪ್ರದೇಶದಲ್ಲಿ ಬೀಳುವ ಮಳೆ ನೀರು ನಮ್ಮ ಹಕ್ಕು ಎಂಬ ಹೋರಾಟ ಮಾಡಬೇಕಿದೆ. ರೈತ ಸಂಘ ಸೇರಿದಂತೆ ಸಂಘಟನೆಗಳು ಸರಿಯಾದ ಅಂಕಿ-ಅಂಶ ಇಟ್ಟುಕೊಂಡು ಹೋರಾಟ ಮಾಡುತ್ತಿಲ್ಲ. ಕಾವೇರಿ ನೀರು ಹಂಚಿಕೆ ಸೂತ್ರ ಬಗೆಹರಿಸಬೇಕು. ಎಲ್ಲರಿಗೂ ಒಪ್ಪಿಗೆಯಾಗುವ ರಾಷ್ಟ್ರೀಯ ಜಲನೀತಿ ರೂಪಿಸಬೇಕು.
> **-ಪ್ರೊ. ಕೆ.ಎಸ್.ಭಗವಾನ್, ಚಿಂತಕ**

ಪ್ರಸ್ತುತ ಕಾವೇರಿ ನೀರು ಬಿಡುಗಡೆ, ರಾಜ್ಯದಲ್ಲಿರುವ ಸಂಕಷ್ಟದ ಪರಿಸ್ಥಿತಿಗೆ ಸಂಬಂಧಿಸಿದಂತೆ ಪ್ರಮುಖವಾಗಿ ಮೂರು ಕಾರ್ಯವನ್ನು ತುರ್ತಾಗಿ ಮಾಡಲೇಬೇಕಾಗಿದೆ. ದೆಹಲಿಯಲ್ಲಿ ರಾಜ್ಯದ ಪ್ರತಿನಿಧಿಗಳು ರಾಜ್ಯದ ಪರ ಪ್ರಬಲವಾಗಿ ಲಾಬಿ ಮಾಡಬೇಕು. ಸಮರ್ಥ ಹಾಗೂ ದಕ್ಷ ವಕೀಲರ ಮೂಲಕ ನ್ಯಾಯಾಲಯದಲ್ಲಿ ರಾಜ್ಯದ ವಾಸ್ತವಾಂಶದ ಕುರಿತಂತೆ ಪರಿಣಾಮಕಾರಿಯಾಗಿ ವಾದ ಮಂಡನೆ ಹಾಗೂ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಮುಂದಾಗಬೇಕು. ರಾಜ್ಯವನ್ನು ಪ್ರತಿನಿಧಿಸುವ 28 ಸಂಸದರು ಪಕ್ಷಾತೀತವಾಗಿ ಸಂಸತ್ ಭವನದ ಮುಂದೆ ಒಂದು ದಿನವಾದರೂ ಪ್ರತಿಭಟನೆ ಮಾಡಬೇಕು ಎಂದು ಸಲಹೆ ನೀಡಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ತಮಿಳುನಾಡು ಅಡ್ಡಗಾಲಾಗಿದೆ. ಈ ಯೋಜನೆ ಅನುಷ್ಠಾನಕ್ಕೆ ತಮಿಳುನಾಡಿನ ಅನುಮತಿ ಬೇಕಾಗಿಲ್ಲ. ಸುಪ್ರಿಂಕೋರ್ಟ್ ಅನುಮತಿ ಬೇಕಾಗಿದೆ. ಕಳೆದ ವರ್ಷ 200 ಟಿಎಂಸಿಗೂ ಅಧಿಕ ಪ್ರಮಾಣದ ಹೆಚ್ಚುವರಿ ನೀರನ್ನು ತಮಿಳುನಾಡಿಗೆ ಬಿಡಲಾಗಿದೆ. ಯಥೇಚ್ಛ ಪ್ರಮಾಣದ ನೀರು ಸಮುದ್ರ ಸೇರುತ್ತಿದೆ. ಮೇಕೆದಾಟು ಯೋಜನೆ ಜಾರಿಯಾದರೆ, ಸಮುದ್ರ ಪಾಲಾಗುವ ಹೆಚ್ಚುವರಿ ನೀರನ್ನು ಸಂಗ್ರಹಿಸಿಟ್ಟುಕೊಳ್ಳಬಹುದು. ಇದರಿಂದ ಬೆಂಗಳೂರಿಗೂ ಕುಡಿಯುವ ನೀರು ಪೂರೈಕೆಯೊಂದಿಗೆ, ತಮಿಳುನಾಡಿಗೆ ನಿಗದಿತ ಪ್ರಮಾಣದ ನೀರು ಬಿಡುಗಡೆ ಮಾಡಬಹುದಾಗಿದೆ. ಈ ಯೋಜನೆಯು ತಮಿಳುನಾಡಿಗೆ ವರದಾನವಾಗಲಿದೆ. ಈ ಕುರಿತು ತಮಿಳುನಾಡಿನ ಪ್ರಜ್ಞಾವಂತರು ಹಾಗೂ ರೈತ ಮುಖಂಡರಿಗೆ ಮನವರಿಕೆ ಮಾಡಿಕೊಡಬೇಕು. ಈ ಸಮಸ್ಯೆಗೆ ಮೇಕೆದಾಟು ಯೋಜನೆ ಅನುಷ್ಠಾನವೇ ಪರಿಹಾರ ಎಂದು ಪ್ರತಿಪಾದಿಸಿದರು.

> "ಕಾವೇರಿ ಜಲವಿವಾದ 150 ವರ್ಷ ಹಳೆಯದು. ಸುಪ್ರೀಂಕೋರ್ಟ್‌ನಲ್ಲಿ ಅಂತರ್ಜಲವನ್ನು ಪರಿಗಣಿಸದೇ ನೀರು ಹಂಚಿಕೆ ಮಾಡಲಾಗಿದೆ. ಇದು ದೊಡ್ಡ ಪ್ರಮಾದ. ಈ ಅಂಶವನ್ನು ಮನವರಿಕೆ ಮಾಡಿಕೊಡಬೇಕು. ನಮ್ಮ ಬೆಳೆಗೆ ನೀರಿನ ಲಭ್ಯತೆ ಹಾಗೂ ಅವರ ಬೆಳೆ, ಕೃಷಿ ಭೂಮಿ ಎಷ್ಟಿದೆ ಎಂದು ಸರಿಯಾಗಿ ವಾದ ಮಂಡಿಸಬೇಕು. ಹೋರಾಟದಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಮಳೆ ಕಡಿಮೆಯಾದಾಗ ಸಂಕಷ್ಟ ಸೂತ್ರದಲ್ಲಿ ನೀರು ಹಂಚಿಕೆಯ ಪಾಲನ್ನು ಇನ್ನೂ ಅಂತಿಮಗೊಳಿಸಿಲ್ಲ. ರೈತರು ಬೆಳೆ ಪದ್ಧತಿ ಬದಲಾಯಿಸಬೇಕು. ನೀರು ಪೋಲು ಮಾಡಬಾರದು. ಅಂತರ್ಜಲ ಹೆಚ್ಚಿಸಿಕೊಂಡು ಕೃಷಿ ಮಾಡಬೇಕು.
> **-ತಿಮ್ಮೇಗೌಡ ನಿವೃತ್ತ ಐಎಎಸ್ ಅಧಿಕಾರಿ**

ಕೃಷ್ಣ ನದಿಯ ಆಲಮಟ್ಟಿ ಅಣೆಕಟ್ಟೆಯನ್ನು ಇನ್ನು 4 ಅಡಿ ಎತ್ತರಿಸುವ ಅವಕಾಶವಿದ್ದರೂ, ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಪ್ರಸ್ತುತ 519 ಅಡಿ ಎತ್ತರವಿದ್ದು, ಅದನ್ನು 523 ಅಡಿ ಎತ್ತರಗೊಳಿಸಲು ಅವಕಾಶವಿದೆ. ಇದರಿಂದ ಹೆಚ್ಚುವರಿ ನೀರು ಸಂಗ್ರಹಿಸಿ, ಲಕ್ಷಾಂತರ ಎಕರೆ ಭೂಮಿಗೆ ನೀರು ಪೂರೈಸಬಹುದು ಎಂದರು.

ಕಾವೇರಿ, ಕೃಷ್ಣ ಸಮಸ್ಯೆಯನ್ನು ಬಗೆಹರಿಸುವ, ರಾಜ್ಯಕ್ಕೆ ನ್ಯಾಯ ತಂದುಕೊಡುವ ಸಮರ್ಥ ರಾಜಕೀಯ ನಾಯಕರ ಕೊರತೆಯಿದೆ. ಮರಳು ದಂಧೆಯಿಂದ ಕಾವೇರಿ ಒಣಗಿ ಹೋಗುತ್ತಿದೆ. ಡಿಸೆಂಬರ್ ವೇಳೆಗೆ ಬೆಂಗಳೂರಿಗೆ ನೀರು ಪೂರೈಸಲು ತೊಂದರೆಯಾಗಲಿದೆ. ಮದ್ದೂರು, ಮಂಡ್ಯಕ್ಕೆ ನೀರು ಪೂರೈಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ ಪರಿಸ್ಥಿತಿಯನ್ನು ಕಾವೇರಿ ನ್ಯಾಯಮಂಡಳಿಗೆ ಮನವರಿಕೆ ಮಾಡಿಕೊಡಬೇಕು. ಕಾವೇರಿ ಹೋರಾಟಗಳು ತೀವ್ರ ಸ್ವರೂಪದಲ್ಲಿ ಇಲ್ಲ. ಕನ್ನಂಬಾಡಿ ಅಣೆಕಟ್ಟೆ ಕಟ್ಟಲೂ ತಮಿಳುನಾಡು ವಿರೋಧಿಸಿತ್ತು. ಪ್ರಧಾನಿ ನದಿ ಜೋಡಣೆ ಬಗ್ಗೆ ದೊಡ್ಡ ಮಾತುಗಳನ್ನು ಹೇಳಿದ್ದರು. ಎರಡನೇ ಅವಧಿ ಪೂರ್ಣವಾಗುತ್ತಾ ಬರುತ್ತಿದ್ದರೂ ಅದರ ಬಗ್ಗೆ ಚಕಾರವನ್ನೇ ಎತ್ತಿಲ್ಲ ಎಂದು ವಿಷಾದಿಸಿದರು.

ಕನ್ನಡ ಚಳುವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಮಾತನಾಡಿ, ಕಾವೇರಿ ವಿವಾದ ನಾಲ್ಕು ದಶಕದಿಂದ ಬಗೆಹರಿದಿಲ್ಲ. ಕಾವೇರಿ ಪ್ರಾಧಿಕಾರ ರಚನೆಯಾಗಿದ್ದರೂ ಸಮಸ್ಯೆ ಬಗೆಹರಿದಿಲ್ಲ. ರಾಜ್ಯದ ಜನರ ಹಿತ ಬಲಿಕೊಟ್ಟು ತಮಿಳುನಾಡಿಗೆ ನೀರು ಬಿಡಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕಾವೇರಿ ಹೋರಾಟಕ್ಕೆ ಜನ ಮುಂದೆ ಬರುತ್ತಿಲ್ಲ. ಹೋರಾಟ ಮಾಡುವಾಗ ನಾವು ಸತ್ತರೆ ಕೇಳುವವರು ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿಷಾದಿಸಿದರು.

ದುಂಡು ಮೇಜಿನ ಸಭೆಯಲ್ಲಿ ಕುವೆಂಪು ಭಾಷಾ ಭಾರತಿ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರಧಾನ ಗುರುದತ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಕಬ್ಬು ಬೆಳೆಗಾರರ ಸಂಘದ ಅತ್ತಹಳ್ಳಿ ದೇವರಾಜ್, ಉದ್ಯಮಿ ಮೆಹುಲ್ ಪಟೇಲ್, ಬಿ.ಎಸ್.ತುಳಸಿರಾಮ್ ಇತರರು ಪಾಲ್ಗೊಂಡಿದ್ದರು.

ಪ್ರತಿಯೊಂದು ಪಂಗಡವೂ ವಿದ್ಯೆ ಕಲಿಯಬೇಕು

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಕರೆ



ಮೈಸೂರು,ಸೆ.3(ಬಿಎಲ್‌ಯು)- ಪ್ರತಿಯೊಂದು ಪಂಗಡವೂ ವಿದ್ಯೆ ಕಲಿಯಬೇಕು. ಸಾಕ್ಷರತೆ ಪ್ರಮಾಣ ಹೆಚ್ಚಾದರೆ ಜನರು ದುರ್ಮಾರ್ಗದಲ್ಲಿ ನಡೆಯುವುದಿಲ್ಲ ಎಂದು ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ಕೆ.ಆರ್.ವನಂನಲ್ಲಿ ನೂತನವಾಗಿ ನಿರ್ಮಿಸಿರುವ ಹೊಯ್ಸಳ ಕರ್ನಾಟಕ ಸಂಘದ ಬಾಲಕರ ವಿದ್ಯಾರ್ಥಿನಿಲಯದ ಉದ್ಘಾಟನಾ ಸಮಾರಂಭದಲ್ಲಿ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ನಾವು ಸಂಪಾದನೆ ಮಾಡಿದ ಆಸ್ತಿ, ಹಣ ಕಳೆದು ಹೋಗುತ್ತದೆ. ಆದರೆ ವಿದ್ಯೆ ಕಳುವು ಮಾಡಲು ಸಾಧ್ಯವಿಲ್ಲ. ಆದ ಕಾರಣ ಪ್ರತಿಯೊಬ್ಬರು ವಿದ್ಯೆಗೆ ಆದ್ಯತೆ ನೀಡಬೇಕು ಎಂದರು.

ಹೊಯ್ಸಳ ಕರ್ನಾಟಕ ಸಮಾಜದವರು ಕಡಿಮೆ ಸಂಖ್ಯೆಯಲ್ಲಿ ಇದ್ದರೂ ಎಲ್ಲಾ ರಂಗಗಳಲ್ಲಿ ಸಕ್ರಿಯರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನನ್ನ ತಾಯಿ ಕೂಡ ಇದೇ ಸಮುದಾಯದವರು ಎಂದು ಶ್ರೀಗಳು ಹೇಳಿದರು. ಹೊಯ್ಸಳ ಕರ್ನಾಟಕ ಸಂಘದಲ್ಲಿ ಒಟ್ಟು 24 ಕೊಠಡಿಗಳಿದ್ದು, ಇದರ ನಿರ್ಮಾಣಕ್ಕೆ ಶ್ರೀಗಳು ತಮ್ಮ ತಾಯಿಯ ನೆನಪಿನಲ್ಲಿ 10 ಲಕ್ಷ ರೂಪಾಯಿ ನೀಡಿದ್ದಾರೆ. ಈ ವೇಳೆ ಮಾತನಾಡಿದ ಬೆಂಗಳೂರಿನ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಕೆ.ರಾಮಮೂರ್ತಿ, ಬ್ರಾಹ್ಮಣ ಸಮಾಜದಲ್ಲಿ ಶೇ.3ರಷ್ಟು ಜನಸಂಖ್ಯೆ ಮಾತ್ರ ಇದೆ. ಆದರೂ ಬಹಳಷ್ಟು ಜನರು ಬ್ರಾಹ್ಮಣರನ್ನು ಗುರಿಯಾಗಿಟ್ಟುಕೊಂಡು ತೆಗಳುತ್ತಾರೆ, ಹೀಯಾಳಿಸುತ್ತಾರೆ, ಟೀಕಿಸುತ್ತಾರೆ. ಇಂತಹ ಸಮಯದಲ್ಲಿ ಬ್ರಾಹ್ಮಣ ಸಮುದಾಯದವರು ಒಗ್ಗಟ್ಟಾಗಿರಬೇಕು ಎಂದು ಕರೆ ನೀಡಿದರು. ಜಾತಿ ಗಣತಿ ವೇಳೆ ನಿಮ್ಮ ಉಪ ಪಂಗಡಗಳ ಬಗ್ಗೆ ನಮೂದು ಮಾಡದೆ, ಹಿಂದೂ-ಬ್ರಾಹ್ಮಣ ಎಂದು ಮಾತ್ರ ನಮೂದಿಸಿ ಎಂದು ರಾಮಮೂರ್ತಿ ಸಲಹೆ ನೀಡಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ, ಮೈಸೂರಿನ ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಸೆ.3-ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ವತಿಯಿಂದ 2023-24ನೇ ಸಾಲಿನ ವಿವಿಧ ಯೋಜನೆಗಳಾದ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ, ಆರ್ಯ ವೈಶ್ಯ ಆಹಾರ ವಾಹಿನಿ ಯೋಜನೆ, ವಾಸವಿ ಜಲಶಕ್ತಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು www.kacdc.karnataka.gov.in ವೆಬ್‌ಸೈಟ್ ಮೂಲಕ ಸಲ್ಲಿಸಲು ಸೆ.18 ಕೊನೆಯ ದಿನಾಂಕವಾಗಿರುತ್ತದೆ. ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಸಾಮಾನ್ಯ ವರ್ಗದಲ್ಲಿ ಆರ್ಯ ವೈಶ್ಯ ಸಮುದಾಯಕ್ಕೆ ಸೇರಿರಬೇಕು. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಮೂನೆ-ಬಿ ಪಡೆದಿರಬೇಕು. ಆಯ್ಕೆ ನಡೆಸುವಾಗ ಸಮಿತಿಯು ಮಹಿಳೆಯರಿಗೆ ಶೇ.33, ವಿಕಲಚೇತನರಿಗೆ ಶೇ.5, ತೃತೀಯ ಲಿಂಗಿಗಳಿಗೆ ಶೇ.5 ಮೀಸಲಾತಿಯನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ನಿಗಮದ ಸಹಾಯವಾಣಿ:9448451111 ಅಥವಾ ಕಚೇರಿ ಸಮಯದಲ್ಲಿ ಮೈಸೂರು ಜಿಲ್ಲಾ ಕಚೇರಿ ದೂ.ಸಂ: 0821-23411947 ಸಂಪರ್ಕಿಸಬಹುದು.

ಕಷ್ಟಗಳಿಂದ ಹೊರಬರಲು ವಿಷ್ಣು ಸಹಸ್ರನಾಮ ಪಾರಾಯಣ ಒಳಿತು: ಗಣಪತಿ ಶ್ರೀ ಅಭಿಮತ





ಮೈಸೂರು: ಕಲಿಯುಗದ ಕಷ್ಟ ಕೋಟಲೆಗಳಿಂದ ಹೊರಬರಲು ವಿಷ್ಣು ಸಹಸ್ರನಾಮ ಪಾರಾಯಣ ಮೊದಲನೇ ಹಂತ ಎಂದು ಅವಧೂತ ದತ್ತಪೀಠಾಧ್ಯಕ್ಷರಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ಅವಧೂತ ದತ್ತಪೀಠದ ನಾದಮಂಟಪದಲ್ಲಿ ಭಾನುವಾರ ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘ ಮತ್ತು ಕೋಟಿ ವಿಷ್ಣು ಸಹಸ್ರನಾಮ ಪಾರಾಯಣ ಸಮಿತಿ ಹಮ್ಮಿಕೊಂಡಿದ್ದ 20 ಕೋಟಿ ವಿಷ್ಣು ಸಹಸ್ರನಾಮ ಸಮರ್ಪಣ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಭಕ್ತರಿಗೆ ಆಶೀರ್ವಚನ ನೀಡಿ ಶ್ರೀಗಳು ಮಾತನಾಡಿದರು.

ವಿಷ್ಣು ಸಹಸ್ರನಾಮದಷ್ಟೇ ಭಗವದ್ಗೀತೆ ಪಾರಾಯಣದಿಂದಲೂ ಕೂಡ ನಮ್ಮ ಮನಸ್ಸಿನ ದುಗುಡ ಹಾಗೂ ಕಷ್ಟಕಾರ್ಪಣ್ಯಗಳನ್ನು ತೊಡೆದು ಹಾಕಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ವಿಷ್ಣು ಸಹಸ್ರನಾಮ ಪಾರಾಯಣ ಅದ್ಭುತವಾದದ್ದು. ಅದನ್ನು ಎಲ್ಲರೂ ಮಾಡಬೇಕು ಎಂದು ಕರೆ ನೀಡಿದರು.

ಶಾಸಕ ಶ್ರೀವತ್ಸ ಮಾತನಾಡಿ, ವಿಷ್ಣು ಸಹಸ್ರನಾಮ ಪಾರಾಯಣದಿಂದ ಮನೆ ಮನದಲ್ಲಿ ವಿಷ್ಣು ನೆಲೆಸುತ್ತಾನೆ. ವಿಷ್ಣು ಸಹಸ್ರನಾಮವನ್ನು ಜೋರಾಗಿ ಪಠಿಸಲೇಬೇಕೆಂದೇನಿಲ್ಲ. ಮನದಲ್ಲೇ ಪಾರಾಯಣ ಮಾಡಿದರೂ ಕೂಡ ವಿಷ್ಣು ಮನದಲ್ಲಿ ನೆಲೆಸುತ್ತಾನೆ. ಅದೇ ರೀತಿ ಆದಿತ್ಯ ಹೃದಯ ಸ್ತೋತ್ರ ಪಠಿಸಿದರೂ ನಮ್ಮ ಎಲ್ಲಾ ಅಡೆತಡೆಗೊಂದಲ ನಿವಾರಣೆಯಾಗುತ್ತದೆ. ಪ್ರತಿನಿತ್ಯ ಆದಿತ್ಯ ಹೃದಯ ಪಾರಾಯಣ ಮಾಡಿದರೆ ಎಲ್ಲ ತಡೆಗೋಡೆ ನಿವಾರಣೆಯಾಗುತ್ತದೆ ಎಂದು ಶಾಸಕರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ನಗರ ಹಾಗು ಜಿಲ್ಲಾ ಬ್ರಾಹ್ಮಣ ಅಧ್ಯಕ್ಷ ಡಿ.ಟಿ.ಪ್ರಕಾಶ್ ವಹಿಸಿದ್ದರು. ಆಧ್ಯಾತ್ಮಿಕ ಚಿಂತಕರಾದ ವಿದ್ಯಾವಾಚಸ್ಪತಿ ಡಾ.ಅರಳು ಮಲ್ಲಿಗೆ ಪಾರ್ಥಸಾರತಿ, ಡಾ. ಮುಕುಂದನ್ ಹಾಗೂ ವೆಂಗಿಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ವಿಭಾಗ ಅಧ್ಯಕ್ಷ ರಮಾಕಾಂತ ಶೆಣೈ, ನಗರ ಪಾಲಿಕೆ ಸದಸ್ಯ ಮ.ವಿ.ರಾಮಪ್ರಸಾದ್, ಆಧ್ಯಾತ್ಮಿಕ ಚಿಂತಕರಾದ ಡಾ.ನಾಗಲಕ್ಷ್ಮಿ ಚಂದ್ರಶೇಖರ್, ಬ್ರಾಹ್ಮಣ ತಾಲೂಕು ಸಂಘದ ಅಧ್ಯಕ್ಷ ಗೋಪಾಲರಾವ್, ವಿಪ್ರ ಮಹಿಳಾ ಸಂಗಮ ಅಧ್ಯಕ್ಷರಾದ ಡಾ.ಲಕ್ಷ್ಮಿ, ಹರೀಶ್, ಸುಚೇಂದ್ರ, ಜ್ಯೋತಿ, ಲತಾ ಬಾಲಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದ ಬಸವನಗಿರಿ ಆಶ್ರಮ ಶಾಲೆಯಲ್ಲಿ ಆರೋಗ್ಯ ತಪಾಸಣೆ



ಮೈಸೂರು,ಸೆ.3(ಎಂಟಿವೈ)- ಹೆಚ್.ಡಿ.ಕೋಟೆ ತಾಲೂಕಿನ ಮೇಟಿಕುಪ್ಪೆಯ ಬಸವನಗಿರಿ ಆಶ್ರಮ ಶಾಲೆಯ ಮಕ್ಕಳಿಗೆ ಆರೋಗ್ಯ ತಪಾಸಣಾ ಶಿಬಿರ ನಡೆಸಿ, ವಿವಿಧ ಪರೀಕ್ಷೆ ನಡೆಸಿ, ಅಗತ್ಯವುಳ್ಳವರಿಗೆ ಚಿಕಿತ್ಸೆ ನೀಡಲಾಯಿತು.

ಬುಡಕಟ್ಟು ಸಮುದಾಯ ಮಕ್ಕಳ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯು ವಿವಿಧ ಆಸ್ಪತ್ರೆಗಳ ಸಹಯೋಗದಲ್ಲಿ ಆಶ್ರಮ ಶಾಲೆಗಳಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸುತ್ತಿದ್ದು, ಮೂರನೇ ಶಿಬಿರವನ್ನು ಮೇಟಿಕುಪ್ಪೆಯ ಬಸವಗಿರಿ ಆಶ್ರಮ ಶಾಲೆಯಲ್ಲಿ ಆಯೋಜಿಸಿ, ಶಾಲೆಯ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ನಡೆಸಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್ ಮಾತನಾಡಿ, ನಮ್ಮ ಸಂಸ್ಥೆಯ ವತಿಯಿಂದ ಇದು 3ನೇ ಕ್ಯಾಂಪ್ ಆಗಿದ್ದು, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ಸಹಯೋಗದಲ್ಲಿ ಆಶ್ರಮ ಶಾಲೆಗಳಲ್ಲಿ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಿಸುತ್ತಿದ್ದೇವೆ. 3 ಆರೋಗ್ಯ ಶಿಬಿರಗಳಿಂದ ಇದುವರೆಗೆ 520 ಮಕ್ಕಳಿಗೆ ತಪಾಸಣೆ ಮಾಡಿ ಚಿಕಿತ್ಸೆ ನೀಡಲಾಗಿದ್ದು ತಪಾಸಣೆಯಲ್ಲಿ ಕಿವಿ, ಮೂಗು, ಗಂಟಲು, ಶ್ರವಣ ಪರೀಕ್ಷೆ, ನೇತ್ರ, ದಂತ ಚಿಕಿತ್ಸೆ, ರಕ್ತಪರೀಕ್ಷೆ ಮಾಡಲಾಗುತ್ತಿದೆ. 30 ಮಕ್ಕಳಿಗೆ ಹೆಚ್ಚಿನ ದಂತ ಚಿಕಿತ್ಸೆಗೆ ಡೆಂಟಲ್ ಕಾಲೇಜಿಗೆ ಕಳುಹಿಸಲಾಗುವುದು. 55 ಮಕ್ಕಳಿಗೆ ಹುಳುಕು ಹಲ್ಲಿನ ಚಿಕಿತ್ಸೆ ನೀಡಲಾಗಿದೆ. ಆಶ್ರಮ ಶಾಲೆಯ ಹೆಚ್ಚಿನ ಮಕ್ಕಳಿಗೆ ರಕ್ತಹೀನತೆ ಇದ್ದು ಸರ್ಕಾರ ಪ್ರಾಥಮಿಕ ಶಾಲೆಯ ಮಕ್ಕಳಿಗೆ ನೀಡುವ ಕ್ಷೀರಭಾಗ್ಯ ಯೋಜನೆಯನ್ನು ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ವಿಸ್ತರಿಸಿದರೆ ಮಕ್ಕಳಲ್ಲಿರುವ ರಕ್ತಹೀನತೆಯನ್ನು ಕಡಿಮೆ ಮಾಡಬಹುದು ಎಂದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಆರೋಗ್ಯ ತಜ್ಞರಾದ ಡಾ.ರವೀಶ್‌ಗಣಿ, ಜೆಎಸ್‌ಎಸ್ ಆಸ್ಪತ್ರೆಯ ಮಕ್ಕಳ ದಂತ ತಜ್ಞರಾದ ಡಾ.ಇಂದಿರಾ, ಡಾ. ಮಹಾದೇವಪ್ಪ, ಡಾ.ಅರುಣ್, ಡಾ.ಪ್ರಶಾಂತ್, ಡಾ. ಚೇತಕ್, ಡಾ. ಹೆಚ್.ಪಿ.ಜ್ಯೋತಿ, ತಾಲೂಕು ಕಲ್ಯಾಣಾಧಿಕಾರಿ ಡಾ. ಹನುಮಂತರಾಯಪ್ಪ, ಮುಖ್ಯಶಿಕ್ಷಕ ಬಿ.ಕೆ.ನಂಜಯ್ಯ, ಕಚೇರಿ ಅಧೀಕ್ಷಕ ನಾಗರಾಜ್ ಹಾಗೂ ಆಶ್ರಮಶಾಲೆ ಶಿಕ್ಷಕರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.9.2023 ಸೋಮವಾರ, ಮಳೆ ನಕ್ಷತ್ರ: ಪುಬ್ಬ 31.08.2023ರಿಂದ 13.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ,
ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಸಸಮ್ ಸ್ಕೂಲ್ ಇಂಡಿಯಾ (ಮೈಸೂರು), ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್, ಡಿಪಾರ್ಟ್‌ಮೆಂಟ್ ಆಫ್ ಸೈಕಿಯಾಟ್ರಿ, ಜೆಎಸ್‌ಎಸ್ ಮೆಡಿಕಲ್ ಕಾಲೇಜ್ ಅಂಡ್ ಹಾಸ್ಪಿಟಲ್, ಕರ್ನಾಟಕ ಸೆಕ್ಷುವಲ್ ಸೈನ್ಸಸ್ ಅಕಾಡೆಮಿ:** ತೀವ್ರ ಸ್ಥಾನಿಕ ಕ್ಲಿನಿಕಲ್ ಕೌಶಲ್ಯ ತರಬೇತಿ ಕಾರ್ಯಾಗಾರ ಮತ್ತು ಅಂತಾರಾಷ್ಟ್ರೀಯ ಲೈಂಗಿಕ ಆರೋಗ್ಯ ದಿನಾಚರಣೆ-2023, ಸ್ಥಳ: ಶ್ರೀ ರಾಜೇಂದ್ರ ಸೆಂಟನರಿ ಆಡಿಟೋರಿಯಂ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ.
- **ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿಯಮಿತ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಸ್ಥಳ: ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 10 ಗಂಟೆಗೆ.
- **ಕರ್ನಾಟಕ ಸಮತಾ ಸೈನಿಕ ದಳ-ಕೆಎಸ್‌ಎಸ್‌ಡಿ:** ಮೈಸೂರು ಜಿಲ್ಲಾ ಶಾಖೆ ಉದ್ಘಾಟನಾ ಸಮಾರಂಭ, ದಿವ್ಯ ಸಾನಿಧ್ಯ ಭಂತೆ ಡಾ.ಕಲ್ಯಾಣ ಸಿರಿ ಭಂತೇಜಿ, ಉದ್ಘಾಟನೆ: ಶಾಸಕ ಜಿ.ಡಿ.ಹರೀಶ್‌ಗೌಡ, ಅಧ್ಯಕ್ಷತೆ: ಕೆಎಸ್‌ಎಸ್‌ಡಿ ರಾಜ್ಯಾಧ್ಯಕ್ಷ ಬಿ.ಚನ್ನಕೃಷ್ಣಪ್ಪ, ಸ್ಥಳ: ರೋಟರಿ ಶಾಲೆ, ಚಾಮುಂಡಿ ಗೆಸ್ಟ್ ಹೌಸ್ ಹತ್ತಿರ, ಬೆಳಗ್ಗೆ 10ಕ್ಕೆ
- **ಸರ್ಕಾರಿ ಪ್ರೌಢಶಾಲೆ (ಜಿ.ಬಿ.ಸರಗೂರು, ಹೆಚ್.ಡಿ.ಕೋಟೆ):** ಚಿಣ್ಣರ ಕಲಾಬಿಂಬ, ಶಾಲಾ ಮಕ್ಕಳ ಭಾರತೀಯ ಜಾನಪದ ಕಲೆಗಳ ಚಿತ್ರಕಲಾ ಪ್ರದರ್ಶನ, ಸ್ಥಳ: ಸುಚಿತ್ರ ಕಲಾಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ
- **ಅಪೂರ್ವ ಸ್ನೇಹ ಬಳಗ:** ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ ಮನೆ ಮನೆಗೆ ಪತ್ರಿಕೆ ವಿತರಿಸುವ ಹಿರಿಯ ಪತ್ರಿಕಾ ವಿತರಕರಿಗೆ ಸನ್ಮಾನ, ಸ್ಥಳ: ಅಪೂರ್ವ ಹೋಟೆಲ್ ಸಭಾಂಗಣ, ಬೆಳಗ್ಗೆ 11 ಗಂಟೆಗೆ.
- **ಭಾರತೀಯ ಜನತಾ ಪಕ್ಷ, ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲೆ:** ದಕ್ಷಿಣ ಶಿಕ್ಷಕರ ವಿಧಾನ ಪರಿಷತ್ ಚುನಾವಣಾ ಪೂರ್ವಭಾವಿ ಸಭೆ, ಅಧ್ಯಕ್ಷತೆ: ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಸ್ಥಳ: ರಾಜೇಂದ್ರ ಭವನ, ಬೆಳಗ್ಗೆ 11 ಗಂಟೆಗೆ.
- **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.
- **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು :** ಶತೋತ್ತರ-ಸುವರ್ಣ-ರಜತ ಮಹೋತ್ಸವ-2023 ಸಮಾರೋಪ ಸಮಾರಂಭ, ಅಧ್ಯಕ್ಷತೆ: ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರೊ.ವಿ.ಕೆ.ಗೋಪಾಲಚಾರ್, ದಿವ್ಯಸಾನ್ನಿಧ್ಯ: ಪೇಜಾವರ ಶ್ರೀ ಅಧೋಕ್ಷಜತೀರ್ಥ ಪೀಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳರವರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದ ಮಹಾರಾಜ್, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 4 ಗಂಟೆಗೆ.
- **ಹಿರಿಯ ನಾಗರಿಕರ ಮಂಡಳಿ:** ಉಪನ್ಯಾಸ ಮತ್ತು ಸಂವಾದ, ವಿಷಯ: 'ಸ್ವಚ್ಛತೆ ಜೀವನದ ಮಾರ್ಗವಾಗಿ ದೇಹದ ಅವಶ್ಯಕತೆಗಳನ್ನು ಅರ್ಥ ಮಾಡಿಕೊಳ್ಳುವುದು, ಸ್ಥಳ: ಮಂಡಳಿಯ ಸರಸ್ವತಿ ಸಮುದಾಯ ಭವನ, ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ: "ಅಕ್ಷರ ಲೋಕದ ಬೆರಗು" ಆಯ್ದ ಇಂಗ್ಲೀಷ್ ಲೇಖಕರ ಲೇಖನ: ಪ್ರೊ.ಸಿ.ನಾಗಣ್ಣ. ಪ್ರಸ್ತುತಿ-ದಿವಾಕರ ಹೆಗಡೆ, 6.40 ಪದ ಸಂಸ್ಕೃತಿ: ಪ್ರಸ್ತುತಿ-ಕೆ.ಎಲ್.ಪದ್ಮಿನಿ ಹೆಗಡೆ, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 9.05 ವಸುದೈವ ಕುಟುಂಬಕಂ-ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಖ್ಯಾತ ಕಾದಂಬರಿಗಾರ್ತಿ ದೇವಕಿ ಮೂರ್ತಿ ಅವರೊಂದಿಗೆ ಜಿ.ರಾಜಲಕ್ಷ್ಮಿ ಶ್ರೀಧರ್ ಅವರು ನಡೆಸಿದ್ದ ಸಂವಾದ, 10.00 ಲಯ ಸಂಭ್ರಮ: ತಾಳ, ಲಯ ರಸಾಸ್ವಾದ, ಪರಿಕಲ್ಪನೆ ಹಾಗೂ ಪ್ರಸ್ತುತಿ-ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ, 12.45 ನಮ್ಮ ಆರೋಗ್ಯ: ರಾಷ್ಟ್ರೀಯ ದೃಷ್ಟಿ ದಾನ ಪಾಕ್ಷಿಕದ ಸಂದರ್ಭದಲ್ಲಿ "ನೇತ್ರದಾನ-ಮಹಾದಾನ" ಕುರಿತು ಡಾ.ಪ್ರಕಾಶ್ ಅವರೊಂದಿಗೆ ಮಾತುಕತೆ, 1.00 ಪ್ರಗತಿಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ- ವಸುಧಾ ಶಾಸ್ತ್ರಿ, 3.00 ಎಂ.ವೆಂಕಟೇಶಾಚಾರ್-ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: 'ಡಾಕ್ಟರ್ ಸಮಯ' ವಿಷಯ- ಅತಿಯಾದ ಮೊಬೈಲ್ ಫೋನ್ ಬಳಕೆಯಿಂದ ಆಗುವ ಸಮಸ್ಯೆಗಳು ಮತ್ತು ಪರಿಹಾರ, ಭಾಗವಹಿಸುವವರು- ಡಾ.ತ್ರಿಶಲಾ, ಪ್ರಸ್ತುತಿ-ಎಂ.ಎಸ್.ಭಾರತಿ, 4.45 ಹಿಂದಿ ಪಾಠ: ಶಾಂತಾ ಕಿಣಿ, 6.50 ಕೃಷಿರಂಗ: ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಹಣ್ಣು-ಹೊನ್ನು ಬಾನುಲಿ ಸರಣಿಯ ಉದ್ಘಾಟನಾ ಸಮಾರಂಭದ ಬಾನುಲಿ ವರದಿ, ಪ್ರಸ್ತುತಿ-ಆರ್.ಲೋಕೇಶ್ವರಿ. **ರಾತ್ರಿ:** 9.30 ಹಳ್ಳಿ ಹಾಡು: ಯಡಹಳ್ಳೀ ದೊಡ್ಡಮ್ಮನಗುಡಿ ಸಿದ್ಧಮ್ಮ ಮತ್ತು ಸಂಗಡಿಗರು ಪ್ರಸ್ತುತಿ-ಅಬ್ದುಲ್ ರಶೀದ್, 10.30 ಪಶು ಸಂಪತ್ತು ಮಾಲಿಕೆಯಲ್ಲಿ ನಾಟಕ "ಉಂಡು ಸಂತಸದಿಂದಿರು" ರಚನೆ-ಡಾ.ವಿ.ನಾಗಭೂಷಣ. ನಿರ್ಮಾಣ-ಪ್ರಭುಸ್ವಾಮಿ ಮಳಿಮಠ.

- **ರಂಗಾಯಣ, ಮೈಸೂರು:** ಬಿ.ವಿ.ಕಾರಂತ ಕಾಲೇಜು ರಂಗ ತರಬೇತಿ ಶಿಬಿರ ಹಾಗೂ ಸುಬ್ಬಯ್ಯ ನಾಯ್ಡು ಮತ್ತು ಪದ್ಮಶ್ರೀ ನಾಗರತ್ನಮ್ಮ, ಹವ್ಯಾಸಿ ರಂಗ ತರಬೇತಿ ಶಿಬಿರ, ಉದ್ಘಾಟನೆ: ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ, ಅಧ್ಯಕ್ಷತೆ: ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ್ ಪಿ.ಹಿರೇಮಠ, ಸ್ಥಳ: ಭೂಮಿಗೀತ, ಸಂಜೆ 5.30ಕ್ಕೆ.
- **ಸಂಸ್ಕೃತ ಭಾರತೀ, ವಿದ್ವಾನ್ ಟಿ.ನಾರಾಯಣಶಾಸ್ತ್ರಿ ಪ್ರತಿಷ್ಠಾನ:** ಸಂಸ್ಕೃತ ಸಪ್ತಾಹ, ಡಾ.ಸುರೇಶ್ ಹೆಗಡೆ ಅವರಿಂದ ಕೌಟಿಲ್ಯ ಅರ್ಥಶಾಸ್ತ್ರದ ಪ್ರಸ್ತುತತೆ ಕುರಿತು ಪ್ರವಚನ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಶಾಲೆ, ಲಕ್ಷ್ಮಿಪುರಂ, ಸಂಜೆ 5.30ರಿಂದ.
- **ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್:** ಶ್ರೀ ವರಮಹಾಲಕ್ಷ್ಮಿ ಫೋಟೋಸ್ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಮತ್ತು ಶ್ರೀ ವರಮಹಾಲಕ್ಷ್ಮಿ ಪೂಜಾ ಮಹೋತ್ಸವ, ದಿವ್ಯ ಸಾನ್ನಿಧ್ಯ: ಪೇಜಾವರ ಶ್ರೀ ಅಧೋಕ್ಷಜ ತೀರ್ಥ ಪೀಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು, ವೇಂಗಿಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಸ್ಥಳ: ಶ್ರೀಕೃಷ್ಣಧಾಮ, ಸಂಜೆ 5.30ಕ್ಕೆ.
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಪ್ರವಚನ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ
- **ಇಂಡಿಯನ್ ಥಿಯೇಟರ್ ಫೌಂಡೇಶನ್ ಹಾಗೂ ಹಾರ್ಡ್ವಿಕ್ ಪಿಯು ಕಾಲೇಜು:** ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಉಪಸ್ಥಿತಿ: ಮಂಗಳೂರು ಚರ್ಚ್ ಆಫ್ ಸೌತ್ ಇಂಡಿಯಾದ ರೆವರೆಂಡ್ ಬಿಷಪ್ ಹೇಮಚಂದ್ರ ಕುಮಾರ್, ಉಪನ್ಯಾಸ: ಇಂಡಿಯನ್ ಥಿಯೇಟರ್ ಫೌಂಡೇಶನ್‌ನ ಮ್ಯಾನೇಜಿಂಗ್ ಟ್ರಸ್ಟಿನ ಮತ್ತು ಹಿರಿಯ ರಂಗಕರ್ಮಿ ಪ್ರಸನ್ನ, ಸ್ಥಳ: ಹಾರ್ಡ್ವಿಕ್ ಶಾಲೆ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ

10 ವರ್ಷಗಳಲ್ಲಿ ಎಸ್ಸಿ-ಎಸ್ಟಿಗೆ ಮೀಸಲಿರಿಸಿದ್ದ 16,706 ಕೋಟಿ ರೂ. ಅನುದಾನ ಬೇರೆ ಉದ್ದೇಶಕ್ಕೆ ಬಳಕೆ

ಸಾಮಾಜಿಕ ನ್ಯಾಯ ಸಬಲೀಕರಣ ವೇದಿಕೆ ಮುಖಂಡ ಕೆ.ಎನ್. ಪ್ರಭುಸ್ವಾಮಿ ಅಸಮಾಧಾನ



ಮೈಸೂರು, ಸೆ. 3(ಆರ್‌ಕೆ)– ಕಳೆದ ಹತ್ತು ವರ್ಷಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರ ಕಲ್ಯಾಣಕ್ಕಾಗಿ ಮೀಸಲಿರಿಸಿದ್ದ 16,706 ಕೋಟಿ ರೂ. ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸಲಾಗಿದೆ ಎಂದು ಸಾಮಾಜಿಕ ನ್ಯಾಯ ಸಬಲೀಕರಣ ವೇದಿಕೆ ಮುಖಂಡ ಕೆ.ಎನ್. ಪ್ರಭುಸ್ವಾಮಿ ಅಸಮಾಧಾನ ಹೊರ ಹಾಕಿದ್ದಾರೆ.

ಸಾಮಾಜಿಕ ನ್ಯಾಯ ಸಬಲೀಕರಣ ವೇದಿಕೆ ವತಿಯಿಂದ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಇಂದು ಏರ್ಪಡಿಸಿದ್ದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಸದ್ಬಳಕೆಗಾಗಿ ಎಸ್ಸಿ-ಎಸ್ಟಿ ಜನಾಂದೋಲನ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಹತ್ತು ವರ್ಷಗಳಲ್ಲಿ 16,706 ಕೋಟಿ ರೂ. ಎಸ್ಸಿ-ಎಸ್ಟಿ ಸಮುದಾಯದ ಅಭಿವೃದ್ಧಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಲಾಗಿದೆ ಎಂದರು.

ಈ ಅನುದಾನದಲ್ಲಿ ದಲಿತ ಕುಟುಂಬಗಳಿಗೆ 11 ಲಕ್ಷ ಮನೆಗಳನ್ನು ನಿರ್ಮಿಸಬಹುದಾಗಿತ್ತು. ಆದರೆ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮ, ಬಂಜರ, ಸಫಾಯಿ ಕರ್ಮಚಾರಿ, ಬೋವಿ, ಆದಿ ಜಾಂಬವ ಅಭಿವೃದ್ಧಿ ನಿಗಮ ಸ್ಥಾಪಿಸಿ ಸಮಾಜ ಕಲ್ಯಾಣ ಇಲಾಖೆ ಮೂಲಕ ಆ ಸಮುದಾಯದ ಅಭಿವೃದ್ಧಿ ಮಾಡುತ್ತಾ ಬಂದಿತ್ತಾದರೂ, ನಿರೀಕ್ಷಿತ ಮಟ್ಟದಲ್ಲಿ ಅನುದಾನ ಬಳಸುತ್ತಿಲ್ಲ ಎಂದು ಅವರು ನುಡಿದರು.

1950ರಿಂದ ಈವರೆಗೂ ಎಲ್ಲಾ ಸರ್ಕಾರಗಳೂ ಎಸ್ಸಿ, ಎಸ್ಟಿ ಜನರ ಮೂಗಿಗೆ ತುಪ್ಪ ಸವರುತ್ತಾ ಬಂದಿದ್ದು, ಈ ಸಮುದಾಯದ ಜನಸಂಖ್ಯೆಗನುಗುಣವಾಗಿ ಅನುದಾನ ಮೀಸಲಿಟ್ಟಿದ್ದರೂ, ಅದನ್ನು ಉದ್ದೇಶಿತ ಯೋಜನೆ ಬಿಟ್ಟು ಬೇರೆ ಇಲಾಖೆಗಳಿಗೆ ಡೈವರ್ಟ್ ಮಾಡಲಾಗಿದೆ ಎಂದ ಪ್ರಭುಸ್ವಾಮಿ, ಸಂವಿಧಾನದಲ್ಲಿ ರಾಜಕೀಯ, ಆರ್ಥಿಕ ಸ್ವಾತಂತ್ರ್ಯ ಒದಗಿಸಲಾಗಿದ್ದರೂ ಅದು ದಲಿತರಿಗೆ ದೊರೆತಿಲ್ಲ ಎಂದರು.

ಕೇಂದ್ರ ಸರ್ಕಾರದ ಅಂಕಿ-ಅಂಶಗಳ ಪ್ರಕಾರ, ಮೀಸಲಿರುವ ಹುದ್ದೆಗಳನ್ನು ತುಂಬುವ ಬದಲು ಮೇಲ್ದರ್ಜೆಯ ಹುದ್ದೆ ನೇಮಕ ಮಾಡದೇ ಗ್ರೂಪ್ ಸಿ ಮತ್ತು ಡಿ ಹುದ್ದೆಗಳನ್ನು ಮಾತ್ರ ತುಂಬುವ ಮೂಲಕ ಉನ್ನತ ಹುದ್ದೆಗಳಿಂದ ದಲಿತರನ್ನು ವಂಚಿಸಲಾಗಿದೆ ಎಂದು ಅತೃಪ್ತಿ ವ್ಯಕ್ತಪಡಿಸಿದರು.

ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಎಸ್ಸಿ-ಎಸ್ಟಿ ಜನರ ಕಲ್ಯಾಣ ಅಭಿವೃದ್ಧಿ ಅನುದಾನ ಕಡಿತ ಮಾಡಿರುವುದು ಸರ್ಕಾರ ನಡೆಸುವವರಿಗೆ ದಲಿತರ ಮೇಲಿರುವ ಕಾಳಜಿಯನ್ನು ತೋರುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಕಾಯ್ದೆ ತಿಳಿದಿದ್ದರೂ ಹಣ ಕಡಿತಗೊಳಿಸಿರುವುದು ಸರಿಯಲ್ಲ ಎಂದರು.


ಮುಖಂಡ ಭೀಮನಹಳ್ಳಿ ಸೋಮಶೇಖರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿ. ಪ್ರತಾಪ್, ರಾಜೇಂದ್ರ, ಎಂ. ಲೋಕೇಶ್, ಎನ್.ಪ್ರದೀಪ್‌ರಾಜ್, ಯೋಗೀಶ್, ನಾಗರಾಜು, ಸಾಗರ್, ಅನಿಲ್ ಹಾಗೂ ಇತರರು ಪಾಲ್ಗೊಂಡಿದ್ದರು.

ಸಂಸದ ಪ್ರತಾಪ್ ಸಿಂಹರಿಂದ ಗಾಂಧಿನಗರದಲ್ಲಿ ನವೀಕೃತ ಶ್ರೀ ರಾಮ ಮಂದಿರ ಉದ್ಘಾಟನೆ



ಮೈಸೂರು, ಸೆ. 3(ಆರ್‌ಕೆ)– ಮೈಸೂರಿನ ಗಾಂಧಿನಗರ 4ನೇ ಮೇನ್, 4ನೇ ಕ್ರಾಸ್‌ನಲ್ಲಿ ನವೀಕೃತಗೊಂಡಿರುವ ಶ್ರೀ ರಾಮ ಮಂದಿರ ಕಟ್ಟಡವನ್ನು ಸಂಸದ ಪ್ರತಾಪ್ ಸಿಂಹ ಇಂದು ಉದ್ಘಾಟಿಸಿದರು.

ಶ್ರೀ ರಾಮ ಮಂದಿರ ಅಭ್ಯುದಯ ಸಮಿತಿಯಿಂದ ನವೀಕೃತಗೊಳಿಸಿರುವ ಶ್ರೀ ರಾಮ ಮಂದಿರದಲ್ಲಿ ನಿತ್ಯ ಪೂಜಾ ಕೈಂಕರ್ಯಗಳು ನಡೆದು ಭಕ್ತಾದಿಗಳಿಗೆ ರಾಮನ ದರ್ಶನ ಸಿಗಲಿ ಎಂದು ಅವರು ಶುಭ ಹಾರೈಸಿದರು. ಮೈಸೂರು ಮಹಾನಗರ ಪಾಲಿಕೆ ಸದಸ್ಯೆ ಡಾ. ಅಶ್ವಿನಿ ಶರತ್, ಸಮಿತಿ ಅಧ್ಯಕ್ಷ ಎನ್. ಮೋಹನ್ ಕುಮಾರ್, ಕಾರ್ಯದರ್ಶಿ ಶರತ್ ಸತೀಶ, ಮುಖಂಡರುಗಳಾದ ಮುರಳಿ, ಬಲರಾಂ, ದೇವರಾಜ್, ಕಾಂತರಾಜ್, ಜನಾರ್ಧನ್, ಅರುಣ್‌ಕುಮಾರ್ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.



ಮೈಸೂರಿನ ಕುವೆಂಪುನಗರದ ನವಿಲು ರಸ್ತೆಯಲ್ಲಿರುವ ಸಾಹಿತಿ ದೇವನೂರ ಮಹಾದೇವ ಅವರ ಮನೆಗೆ ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ ಭೇಟಿ ನೀಡಿ, ಕುಶಲೋಪರಿ ವಿಚಾರಿಸಿದರು. ಸಚಿವರು ಸೋಮವಾರ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.



ಮೈಸೂರು ದಸರಾ ಹಿನ್ನೆಲೆಯಲ್ಲಿ ಹಳೇ ಡಿಸಿ ಆಫೀಸ್ ಬಳಿಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ನರ್ಸರಿಯಲ್ಲಿ ವಿಭಿನ್ನ ಬಗೆಯ ಅಲಂಕಾರಿಕ ಸಸಿಗಳನ್ನು ಬೆಳೆಸಲಾಗುತ್ತಿದ್ದು, ಇವುಗಳನ್ನು ದಸರೆಯಲ್ಲಿ ಮುಡಾ ಕಚೇರಿ ಹಾಗೂ ಪಂಜಿನ ಕವಾಯತು ಮೈದಾನ ವೇದಿಕೆ ಅಲಂಕಾರಕ್ಕೆ ಬಳಸಿಕೊಳ್ಳಲಾಗುತ್ತದೆ.

ದೇಶದ ಅಭಿವೃದ್ಧಿ ದೃಷ್ಟಿಯಿಂದ 'ಒಂದು ದೇಶ, ಒಂದು ಚುನಾವಣೆ' ಸೂಕ್ತ

ಮಾಜಿ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ಅಭಿಮತ



ಮೈಸೂರು, ಸೆ.3(ಎಸ್‌ಪಿಎನ್)– 'ಒಂದು ದೇಶ, ಒಂದು ಚುನಾವಣೆ' ಚರ್ಚೆ ಆಗುತ್ತಿರುವ ಸಂದರ್ಭದಲ್ಲೇ ಸುಪ್ರೀಂಕೋರ್ಟ್ ಹಿರಿಯ ನ್ಯಾಯವಾದಿ ಹಾಗೂ ಮಾಜಿ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದು, ದೇಶದ ಅಭಿವೃದ್ಧಿ ದೃಷ್ಟಿಯಿಂದ ಏಕಕಾಲಕ್ಕೆ ವಿಧಾನ ಸಭೆ ಮತ್ತು ಲೋಕಸಭೆ ಚುನಾವಣೆಗಳು ನಡೆಸುವ ವ್ಯವಸ್ಥೆ ಜಾರಿಗೆ ಬರಬೇಕು ಎಂದು ಅಭಿಪ್ರಾಯಪಟ್ಟರು.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿ, ದೇಶದ ಪ್ರಧಾನ ಮಂತ್ರಿ ಪ್ರತಿ ರಾಜ್ಯದ ಚುನಾವಣೆ ನಡೆದ ಸಂದರ್ಭದಲ್ಲೂ ತಿಂಗಳುಗಟ್ಟಲೇ ದೇಶದ ಆಡಳಿತ ವ್ಯವಸ್ಥೆಯನ್ನು ಸಂಪೂರ್ಣ ಸ್ಥಗಿತಗೊಳಿಸಿ, ಪ್ರಚಾರದಲ್ಲಿ ತೊಡಗುವುದು ಸರಿಯಲ್ಲ. ಹಾಗಂತ ಪ್ರಚಾರದಲ್ಲಿ ತೊಡಗಬೇಡಿ ಎಂದು ಹೇಳಲು ಬರುವುದಿಲ್ಲ. ಹಾಗಾಗಿ ದೇಶದ ಅಭಿವೃದ್ಧಿ, ಮಾನವ ಸಂಪನ್ಮೂಲ ಕಡಿತ, ದುಪ್ಪಟ್ಟ ಹಣ ವ್ಯಯವಾಗುವುದನ್ನು ತಡೆಗಟ್ಟಲು 'ಒಂದು ದೇಶ, ಒಂದು ಚುನಾವಣೆ' ಕಾನೂನು ಅಗತ್ಯವಿದೆ. ಇದು ದೇಶದ ಅಭಿವೃದ್ಧಿ ದೃಷ್ಟಿಯಿಂದ ಒಳಿತು ಎಂದು ತಿಳಿಸಿದರು.

ಆಡಳಿತ ನಡೆಸುವ ಮುಖ್ಯಸ್ಥರು ಬರೀ ಚುನಾವಣಾ ಪ್ರಚಾರದಲ್ಲೇ ಕಾಲ ಕಳೆದರೆ, ದೇಶದ ಅಭಿವೃದ್ಧಿ ಬಗ್ಗೆ ಚಿಂತಿಸುವುದು ಯಾವಾಗ?. ಒಂದು ಸರ್ಕಾರ ಸಂಪೂರ್ಣ ಐದು ವರ್ಷ ಆಡಳಿತ ನಡೆಸಬೇಕಾದರೆ, ಏಕಕಾಲಕ್ಕೆ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳು ನಡೆಯುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಈ ಪ್ರಕ್ರಿಯೆಗೆ ಕೇಂದ್ರ ಸರ್ಕಾರ ಆಲೋಚನೆ ನಡೆಸುತ್ತಿರುವುದು ಸೂಕ್ತವಾಗಿದ್ದು, ಈಗ ಇದರ ಆಡಳಿತಾತ್ಮಕ ಚರ್ಚೆ ಆರಂಭವಾದರೆ, ಅಂತಿಮ ತೀರ್ಮಾನವಾಗುವುದು 10 ವರ್ಷಗಳ ಬಳಿಕ. ಹಾಗಾಗಿ ಪ್ರತಿಯೊಬ್ಬ ಯುವಕನಿಗೂ ದೇಶದ ಭವಿಷ್ಯದಲ್ಲಿ ಏನಾಗುತ್ತಿದೆ ಎಂದು ಚಿಂತಿಸುತ್ತಿರುವ ಸಮಯದಲ್ಲಿ ಕೇಂದ್ರ ಸರ್ಕಾರ 'ಒಂದು ದೇಶ, ಒಂದು ಚುನಾವಣೆ'ಗೆ ದೇಶ ಜನರನ್ನು ಸಜ್ಜುಗೊಳಿಸುತ್ತಿರುವುದು ಉತ್ತಮ ಸಂದೇಶ ಎಂದು ತಿಳಿಸಿದರು.

ರೋಟರಿ ಸಂಸ್ಥೆಯಿಂದ ಮೈಸೂರಲ್ಲಿ ಅಂಧ ನಡಿಗೆ



ಮೈಸೂರು, ಸೆ. 3(ಆರ್‌ಕೆ)– ನೇತ್ರದಾನದ ಮಹತ್ವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ರೋಟರಿ ಸಂಸ್ಥೆಗಳಿಂದ ಇಂದು ಮೈಸೂರಲ್ಲಿ ಅಂಧ ನಡಿಗೆ (Blind Walk) ವಿಶೇಷ ಜಾಗೃತಿ ಜಾಥಾ ಏರ್ಪಡಿಸಲಾಗಿತ್ತು.

ರೋಟರಿ ಪಂಚಶೀಲ್, ರೋಟರಿ ಮೈಸೂರ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 3181 (ವಲಯ 7 ಮತ್ತು 8) ಹಾಗೂ ರೋಟರಿ ಅವಾಯ್ಡಬಲ್ ಬ್ಲೈಂಡ್‌ನೆಸ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಜಾಥಾದಲ್ಲಿ ಡಿಸಿ ಕಚೇರಿ ಹಳೇ ಕಟ್ಟಡ ಬಳಿಯಿಂದ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದವರೆಗೆ ಕಣ್ಣಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಅಂಧ ನಡಿಗೆ ಮಾಡಲಾಯಿತು.

ಆ ಮೂಲಕ ಕಣ್ಣು ಕಾಣದ ಅಂಧರು ಅನುಭವಿಸುತ್ತಿರುವ ತೊಂದರೆ, ಯಾತನೆಯ ಬಗ್ಗೆ ಸ್ವತಃ ಅನುಭವ ಪಡೆದು ಕಣ್ಣುಗಳನ್ನು ದಾನ ಮಾಡುವ ಪವಿತ್ರ ಕಾರ್ಯದ ಬಗ್ಗೆ ಜನರಿಗೆ ಅರಿವು ಮೂಡಿಸುವ ಉದ್ದೇಶದಿಂದ ಇಂದಿನ ರೋಟರಿ ಸಂಸ್ಥೆ ಪ್ರಯತ್ನ ಮಹತ್ವ ಪಡೆಯಿತು.

ನಂತರ ನೇತ್ರದಾನ-ಮಹಾದಾನದ ಬಗ್ಗೆ ರೋಟರಿ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮವೂ ನಡೆಯಿತು. ನೇತ್ರ ತಜ್ಞರು, ಮಾನವೀಯ ಅಂತಃಕರಣ ಉಳ್ಳ ಹೃದಯವಂತರು ಈ ಮಹತ್ಕಾರ್ಯದ ಬಗ್ಗೆ ಪ್ರೋತ್ಸಾಹದಾಯಕ ಭಾಷಣ ಮಾಡಿ ಜನರಲ್ಲಿ ನೇತ್ರದಾನಕ್ಕೆ ಪ್ರೇರೇಪಣೆ ಮಾಡಿದರು.

ಸರ್ಕಾರಿ ಅಂಧ ಮಕ್ಕಳ ಶಾಲೆ ಅಧೀಕ್ಷಕ ಕೆ.ಸತೀಶ, ಮೈಸೂರು ವಿಶ್ವವಿದ್ಯಾನಿಲಯದ ಸಮಾಜ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ. ಕೃಷ್ಣ, ನೇತ್ರ ತಜ್ಞರಾದ ಡಾ. ಗಣೇಶನ್, ಡಾ. ವಾಘ, ರೋಟರಿ ಡಿಸ್ಟ್ರಿಕ್ಟ್ ಗವರ್ನರ್ ಹೆಚ್.ಆರ್. ಕೇಶವ, ರೋಟರಿ ಮೈಸೂರು ಬೃಂದಾವನದ ಅಧ್ಯಕ್ಷ ಧರ್ಮಾನಂದ, ರೋಟರಿ ಪಂಚಶೀಲ್ ಮೈಸೂರ್ ಅಧ್ಯಕ್ಷ ಕಿರಣ್ ರಾಬರ್ಟ್, ರೋಟರಿ ಸ್ಟಾರ್ಸ್ ಅಧ್ಯಕ್ಷ ಸಂತೋಷ್‌ಗೌಡ, ನೇತ್ರದಾನ ಕಾರ್ಯಕರ್ತರಿಂದ ಮಧುಗಿರಿ ಲತಾ ನಾರಾಯಣ್ ಹಾಗೂ ಇತರರು ಈ ಸಂದರ್ಭ ಭಾಗವಹಿಸಿದ್ದರು.

ಇಂದು ಎಂಎಲ್‌ಸಿ ಡಾ.ತಿಮ್ಮಯ್ಯ ಹುಟ್ಟುಹಬ್ಬ ಆಚರಣೆ

ಮೈಸೂರು, ಸೆ3– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರ ಜನ್ಮ ದಿನವನ್ನು ಮೈಸೂರಿನ 'ಶಕ್ತಿಧಾಮ' ಮಹಿಳೆಯರ ಪುನರ್ವಸತಿ ಕೇಂದ್ರದಲ್ಲಿ ಸೆ.4ರಂದು ಮಧ್ಯಾಹ್ನ 1 ಗಂಟೆಗೆ ಆಚರಿಸಲಾಗುತ್ತಿದೆ. ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂಸ್ಕೃತಿ ಚಿಂತಕ ಕೆ.ರಘುರಾಮ್ ವಾಜಪೇಯಿ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ.



ಗೃಹಲಕ್ಷ್ಮಿ ಯೋಜನೆ ಚಾಲನೆಗಾಗಿ ಮೈಸೂರಿಗೆ ಆಗಮಿಸಿದ್ದ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರಿಗೆ ಕೆಪಿಸಿಸಿ ಸದಸ್ಯ ಗುರುಪಾದಸ್ವಾಮಿ, ಭಾರತ್ ಜೋಡೋ ಯಾತ್ರೆ ಸಂದರ್ಭದಲ್ಲಿ ಕ್ಲಿಕ್ಕಿಸಿದ್ದ ರಾಹುಲ್ ಅವರ ವಿಶೇಷವಾದ ಫೋಟೋ ನೀಡಿ, ಅಭಿನಂದಿಸಿದರು.

ಅಗ್ನಿ ಅವಘಡದಲ್ಲಿ ಮೃತಪಟ್ಟ ಇಂಜಿನಿಯರ್ ಕುಟುಂಬಕ್ಕೆ 95 ಲಕ್ಷ ರೂ. ನೆರವು

ಬೆಂಗಳೂರು, ಸೆ.3– ಬಿಬಿಎಂಪಿಯ ಎಲ್ಲ ದರ್ಜೆಯ ನೌಕರರ ವತಿಯಿಂದ ಸುಮಾರು ರೂ.95.5 ಲಕ್ಷವನ್ನು ಅಗ್ನಿ ಅವಘಡದಲ್ಲಿ ಮೃತಪಟ್ಟ ಶಿವಕುಮಾರ್ ಅವರ ಕುಟುಂಬಕ್ಕೆ ನೀಡಲಾಗುವುದು ಎಂದು ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಅಮೃತ್‌ರಾಜ್ ಅವರು ಹೇಳಿದ್ದಾರೆ.

ಗುಣಮಟ್ಟ ಖಾತರಿ ಪ್ರಯೋಗಾಲಯದಲ್ಲಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಮೃತಪಟ್ಟ ಮುಖ್ಯ ಎಂಜಿನಿಯರ್ ಸಿ.ಎಂ. ಶಿವಕುಮಾರ್ ಸ್ಮರಣಾರ್ಥ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ಮಾಹಿತಿ ನೀಡಿದರು.

ಶಿವಕುಮಾರ್ ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮುಖ್ಯ ಆಯುಕ್ತರ ಸಮ್ಮುಖದಲ್ಲಿ ಶೀಘ್ರದಲ್ಲೇ ಚೆಕ್ ಅನ್ನು ಹಸ್ತಾಂತರ ಮಾಡಲಾಗುವುದು. ಅಲ್ಲದೆ, ಶಿವಕುಮಾರ್ ನೆನಪಿಗಾಗಿ ಎಲ್ಲಾ ರೀತಿಯ ಸೌಲಭ್ಯವುಳ್ಳ ಎರಡು ಆಂಬುಲೆನ್ಸ್‌ಗಳನ್ನು ಬಿಬಿಎಂಪಿ ನೌಕರರ ಸಹಕಾರ ಸಂಘ ಹಾಗೂ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪಾಲಿಕೆಗೆ ವಿತರಿಸಲಾಗುವುದು ಎಂದು ಹೇಳಿದರು.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಮಾತನಾಡಿ, ಶಿವಕುಮಾರ್ ಅವರ ಪತ್ನಿಗೆ ಉದ್ಯೋಗ ನೀಡುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಎಸ್.ಪುಟ್ಟಪ್ಪ ಮುಡಿಗುಂಡ ಅವರ 'ಜೇನುಗೂಡು' ಕವನ ಸಂಕಲನ ಬಿಡುಗಡೆ

ಶ್ರೀ ವಾಸವಿ ಶಾಂತಿಧಾಮದಲ್ಲಿ ಪೇಜಾವರ ಶ್ರೀಗಳಿಗೆ ಗುರುವಂದನೆ



ಮೈಸೂರು, ಸೆ.3(ಸಿಎನ್)–ಸುಖಾಸುಮ್ಮನೆ ಜೇನುಗೂಡಿಗೆ ಯಾರೂ ಕೈ ಹಾಕುವುದಿಲ್ಲ ಆದರೆ ಪುಟ್ಟಪ್ಪ ಅವರು ಜೇನುಗೂಡು ಕವನದ ಮೂಲಕ ಪ್ರಕೃತಿ ಮೇಲಿನ ದೌರ್ಜನ್ಯ, ತಂದೆ, ತಾಯಿಯರನ್ನು ವೃದ್ಧಾಶ್ರಮಕ್ಕೆ ಹಾಕುವ ಮಕ್ಕಳನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ ಎಂದು ಉಡುಪಿ ಶ್ರೀಕೃಷ್ಣ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಶ್ಲಾಘಿಸಿದರು.

ನಗರದ ಆಲನಹಳ್ಳಿ ಹೊರವರ್ತುಲ ರಸ್ತೆಯ ಬಳಿಯ ಶ್ರೀ ವಾಸವಿ ಶಾಂತಿಧಾಮದಲ್ಲಿ ಕನ್ನಡ ಸಾಹಿತ್ಯ ಕಲಾಕೂಟದಿಂದ ಭಾನುವಾರ ಏರ್ಪಡಿಸಿದ್ದ ಎಸ್.ಪುಟ್ಟಪ್ಪ ಮುಡಿಗುಂಡ ಅವರ 'ಜೇನುಗೂಡು' ಕವನ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಗವದ್ಗೀತೆಯಲ್ಲಿ ಬದುಕಿನ ದಾರಿ ತೋರಿದವನು ಕೃಷ್ಣ ಪರಮಾತ್ಮ. ಶ್ರೀರಾಮ, ಶ್ರೀಕೃಷ್ಣ ಇಬ್ಬರೂ ಆದರ್ಶ ಪುರುಷರಾಗಿದ್ದಾರೆ. ತಪ್ಪು ಮಾಡಿದ್ದನ್ನು ತಿದ್ದುವವನು ಗುರು. ತಂದೆ– ತಾಯಿ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು. ಆದ್ದರಿಂದಲೇ ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ ಎನ್ನುತ್ತೇವೆ ಎಂದರು.

ಹಿರಿಯ ವಿದ್ವಾಂಸ ಡಾ.ಕೆ. ಅನಂತರಾಮು ಮಾತನಾಡಿ, ಅಜ್ಞಾನವನ್ನು ನಾಶ ಮಾಡಿ, ಜ್ಞಾನ ದಯಪಾಲಿಸಿ, ಅಂಧಕಾರ ನಿವಾರಣೆ ಮಾಡುವವರೇ ಗುರು. ಕಾವ್ಯಕ್ಕೆ ಸಂಕ್ಷಿಪ್ತತೆ, ಭಾವತೀವ್ರತೆ, ಹಾಡುವ ರಾಗ, ಅಭಿವ್ಯಕ್ತಿ ಮುಖ್ಯ. ಈ ನಾಲ್ಕು ಗುಣಗಳಿದ್ದಾಗ ಮಾತ್ರ ಕವನ ಎನಿಸಿಕೊಳ್ಳುತ್ತದೆ. ಪುಟ್ಟಪ್ಪ ಅವರ ಕವನಗಳಲ್ಲಿ ಈ ನಾಲ್ಕು ಅಂಶಗಳ ಅಡಕವಾಗಿವೆ ಎಂದು ಶ್ಲಾಘಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ 'ಜೇನುಗೂಡು' ಕವನ ಸಂಕಲನ ಬಿಡುಗಡೆ ಮಾಡಿ ಮಾತನಾಡಿ, ಆದಿ, ಅಂತ್ಯ ಪ್ರಾಸ ಹಾಗೂ ಲಯದಿಂದ ಕೂಡಿರುವ ಇಲ್ಲಿನ ಕವನಗಳು ಪ್ರಾರ್ಥನಾ ಗೀತೆ, ಭಾವಗೀತೆ, ಜಾನಪದ ಗೀತೆಗಳಾಗಿವೆ. ಕವಿ ಸಮಕಾಲೀನ ಸಮಸ್ಯೆಗಳಿಗೂ ಸ್ಪಂದಿಸಿ, ಕವನ ರಚಿಸಿದ್ದಾರೆ. ಎಲ್ಲವನ್ನು ಹಾಡುವಷ್ಟು ಉತ್ತಮವಾಗಿವೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಕವಯತ್ರಿ ಡಾ.ಲತಾ ರಾಜಶೇಖರ್ ವಹಿಸಿದ್ದರು. ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮುಖ್ಯ ಅತಿಥಿಯಾಗಿದ್ದರು. ಶ್ರೀ ವಾಸವಿ ಶಾಂತಿಧಾಮದ ಸಂಸ್ಥಾಪಕ ಗೌರವ ಕಾರ್ಯದರ್ಶಿ ಬಿ.ವಿ. ಶ್ರೀನಿವಾಸ ಗುಪ್ತ, ಕಾರ್ಯಕ್ರಮ ಸಂಘಟಕ ಸಿ.ಮೋಹನ್‌ರಾಜು, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಸ್ವಾಗತಿಸಿ, ಪ್ರಾಸ್ತಾವಿಕ ಭಾಷಣ ಮಾಡಿದರು. ಶರಣ ಸಾಹಿತ್ಯ ಪರಿಷತ್ತು ಮೈಸೂರು ತಾಲೂಕು ಅಧ್ಯಕ್ಷ ದೇವರಾಜು ಪಿ. ಚಿಕ್ಕಹಳ್ಳಿ ನಿರೂಪಿಸಿದರು. ಲಲಿತಾ ಪಾಟೀಲ್ ಪ್ರಾರ್ಥಿಸಿದರು. ಡಾ.ಲತಾ ರಾಜಶೇಖರ್ ಇದ್ದರು.

ನಕ್ಕರೆ ಅದೇ ಸ್ವರ್ಗ

ಅಮ್ಮ : ಬಸ್ ಕಂಡಕ್ಟರ್ ಕೇಳಿದರೆ ನಿನ್ನ ವಯಸ್ಸು 6 ವರ್ಷ ಅಂತ ಹೇಳು, 7 ವರ್ಷ ಅಂತ ಹೇಳ್ಬೇಡ. ನಿನಗೆ ಬಸ್‌ಚಾರ್ಜ್ ಇರಲ್ಲ...!
ಕಂಡಕ್ಟರ್ : ಮಗಾ ನಿನ್ನ ವಯಸ್ಸು ಎಷ್ಟು...?
ಹುಡುಗ : ಸಾರ್ ನನಗಿನ್ನೂ ಬರೇ 6 ವರ್ಷ ವಯಸ್ಸು
ಕಂಡಕ್ಟರ್ : ಹಾಗಾದ್ರೆ ನಿನಗೆ 7 ವರ್ಷ ಆಗೋದ್ಯಾವಾಗ...!
ಹುಡುಗ : ಬಸ್ಸಿಂದಿಳಿದಾಗ...!

ಮೈಸೂರು ಮಿತ್ರ
ಸೋಮವಾರ, 4 ಸೆಪ್ಟೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

'ಭಯಪಟ್ಟು ಕುಳಿತುಕೊಂಡರೆ ಬದುಕುವುದು ಅಸಾಧ್ಯ, ತಪ್ಪೋ, ಸರಿಯೋ ಹೆಜ್ಜೆ ಹಾಕಿ ನೋಡು ಗೆದ್ದರೆ ಮುಂದಕ್ಕೆ ನಡೆಸುತ್ತದೆ. ಸೋತರೆ ಮುಂದೆ ನೀನು ಏನು ಮಾಡಬೇಕೆಂದು ಕಲಿಸುತ್ತದೆ' –ಶ್ರೀಕೃಷ್ಣ ಪರಮಾತ್ಮ

ವೇದ ಸುಳ್ಳಾದರೂ	ಬಡವನ ಕೋಪ
ಗಾದೆ ಸುಳ್ಳಾಗದು	ದವಡೆಗೆ ಮೂಲ

ನಿಮ್ಮ ಪತ್ರಗಳು

ಮೈಸೂರು ನಗರದಲ್ಲೂ ಪ್ಲಾಸ್ಟಿಕ್ ಬಳಕೆ ನಿಲ್ಲಲಿ...

ಮಾನ್ಯರೆ,

ಮೈಸೂರಿನ ನಾಡ ದೇವತೆ ನೆಲೆಸಿರುವ ಚಾಮುಂಡಿಬೆಟ್ಟಕ್ಕೆ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು, ವಿದ್ಯಾರ್ಥಿಗಳು ಸೇರಿದಂತೆ ಇತರರು ದೇವಿಯ ದರ್ಶನಕ್ಕೆ ಬರುತ್ತಿದ್ದು, ಎಲ್ಲೆಂದರಲ್ಲಿ ತಾವು ಬಳಸುವ ತಿಂಡಿ ತಿನಿಸಿನ ಪ್ಲಾಸ್ಟಿಕ್ ಕವರ್, ನೀರಿನ ಬಾಟಲ್‌ಗಳನ್ನು ಬಿಸಾಕಿ ಪರಿಸರ ಹಾನಿ ಉಂಟು ಮಾಡುತ್ತಿದ್ದ ಚಟುವಟಿಕೆಗೆ ದಂಡ ವಿಧಿಸಿ, ಕೆಲವು ಕಠಿಣ ಕ್ರಮಗಳನ್ನು ಜಾರಿಗೊಳಿಸಿರುವ ಅರಣ್ಯ ಇಲಾಖೆ ಮತ್ತು ಅಧಿಕಾರಿಗಳ ಕರ್ತವ್ಯ ಸ್ವಾಗತಾರ್ಹ.

ಈ ನಿಯಮದ ಕ್ರಮಗಳು ಚಾಮುಂಡಿಬೆಟ್ಟದ ಪರಿಸರಕ್ಕೆ ಮಾತ್ರ ಸೀಮಿತವಾಗದೆ, ಮೈಸೂರು ನಗರದಾದ್ಯಂತ ಕಟ್ಟುನಿಟ್ಟಾಗಿ ಜಾರಿಯಾಗಬೇಕಾಗಿದೆ. ಕೆಲವೇ ದಿನಗಳಲ್ಲಿ ನಾಡಹಬ್ಬ ದಸರಾ ಬರುವುದರಿಂದ ಮೈಸೂರಿಗೆ ವಿದೇಶಿಯರು ಸೇರಿದಂತೆ ದೇಶದ ಇತರ ರಾಜ್ಯಗಳಿಂದಲೂ ಸಹ ಸಾರ್ವಜನಿಕರು ಬರುವುದರಿಂದ ಜನಸಂದಣಿ ಹೆಚ್ಚಾಗಿ ಮತ್ತೆ ನಗರದ ರಸ್ತೆಗಳಲ್ಲಿ ಕಸ, ನೀರಿನ ಬಾಟಲ್, ಬಿಸ್ಕೆಟ್ ಕವರ್, ತಂಬಾಕು ಪ್ಯಾಕೆಟ್, ಗುಟ್ಕಾ ಪಾನ್ ಪರಾಗ್ ಕವರ್ ಹಾಗೂ ಇನ್ನಿತರ ತ್ಯಾಜ್ಯ ಬಿಸಾಕುವ ಘಟನೆಗಳು ಹೆಚ್ಚಾಗುವ ಸಂಭವವಿದೆ. ಇದರಿಂದ ಮೈಸೂರು ಗಳಿಸಿರುವ ಸ್ವಚ್ಛತೆ ಸ್ಥಾನವು ಕೆಳಹಂತ ತಲುಪುವ ಸಂಭವ ಇರುತ್ತದೆ ಮತ್ತು ಅನೈರ್ಮಲ್ಯ ಉಂಟಾಗಿ ನಗರದ ಪರಿಸರಕ್ಕೆ ಹಾನಿಯಾಗುತ್ತದೆ. ಇಂತಹ ಘಟನೆಗಳು ತಡೆಯಲು ನಗರಾದ್ಯಂತ ಪ್ಲಾಸ್ಟಿಕ್ ನಿಷೇಧ ಜಾರಿ ಮಾಡಲು ಅರಣ್ಯ ಇಲಾಖೆಯಂತೆ ಮೈಸೂರು ಮಹಾನಗರಪಾಲಿಕೆ ಮತ್ತು ಸಂಬಂಧಪಟ್ಟ ಇಲಾಖೆ ಉನ್ನತಾಧಿಕಾರಿಗಳು ನಿಯಮ ಜಾರಿಗೊಳಿಸಲು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ನಂದಿನಿ ಕೇಂದ್ರದಲ್ಲಿ ಯಾವುದೇ ರೀತಿಯ ಸುಲಿಗೆ ನಡೆಯುತ್ತಿಲ್ಲ

ಮಾನ್ಯರೆ,

ಮೈಸೂರಿನ ಕೆಆರ್‌ಎಸ್ ರಸ್ತೆಯ ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ ನಂದಿನಿ ಕೇಂದ್ರದಲ್ಲಿ ಸುಲಿಗೆ ನಡೆಯುತ್ತಿದೆ ಎಂದು 'ಮೈಸೂರು ಮಿತ್ರ' ನಿಮ್ಮ ಪತ್ರಗಳು ವಿಭಾಗದಲ್ಲಿ ಪ್ರಕಟವಾಗಿರುವ ವಿಷಯ ಸತ್ಯಕ್ಕೆ ದೂರವಾದುದು. ಮಳಿಗೆಯಲ್ಲಿ ಮಾರಾಟ ಮಾಡುವ ಮಜ್ಜಿಗೆ, ಲಸ್ಸಿ ಸೇರಿದಂತೆ ಇನ್ನಿತರ ನಂದಿನಿ ಉತ್ಪನ್ನಗಳನ್ನು ನಿಗದಿತ (ಎಂಆರ್‌ಪಿ) ದರ ಪಡೆದು ಮಾರಾಟ ಮಾಡಲಾಗುತ್ತಿದೆ. ಗ್ರಾಹಕರು ನಮ್ಮ ನಂದಿನಿ ಬೂತ್‌ನಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ ಪ್ರಶ್ನಿಸುವ ಮಟ್ಟಿಗೆ ಜಾಗೃತರಾಗಿದ್ದಾರೆ. ಯಾರೋ ಉದ್ದೇಶಪೂರ್ವಕವಾಗಿ ಈ ರೀತಿ ಬರೆದಿದ್ದಾರೆ.

ಹೇಳಿ ಕೇಳಿ ಇದು ಆಸ್ಪತ್ರೆಯ ಆವರಣದಲ್ಲಿರುವ ನಂದಿನಿ ಬೂತ್, ಇಲ್ಲಿಗೆ ಬರುವ ರೋಗಿಗಳ ಮತ್ತು ಅವರ ಸಂಬಂಧಿಕರಿಂದ ಸುಲಿಗೆ ಮಾಡಿ, ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡುವ ಹೀನಾಯ ಕೆಲಸ ನಾವು ಮಾಡುವುದಿಲ್ಲ. ನಾವು ಗ್ರಾಹಕರಿಗೆ ನಿಗದಿತ ಬೆಲೆಗೆ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದು, ಗ್ರಾಹಕರು ಇದಕ್ಕೆ ಸ್ಪಂದಿಸುತ್ತಿದ್ದಾರೆ.

–ರವಿಶಂಕರ್, ನಂದಿನಿ ಬೂತ್ ಮಾಲೀಕರು

ವೈದ್ಯಕೀಯ ಚಿಕಿತ್ಸೆ ಅವರವರ ಇಚ್ಛೆ...

ಮಾನ್ಯರೆ,

ಬೆಂಗಳೂರಿನ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ವಿವಿ ಕುಲಪತಿ ಡಾ.ಬಿ.ಆರ್.ರಾಮಕೃಷ್ಣ ಅವರು ಮೈಸೂರಿನಲ್ಲಿ ಶನಿವಾರ ನಡೆದ ಯೋಗ ವೈದ್ಯಕೀಯ ಮಹಾವಿದ್ಯಾಲಯದ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಪ್ರಾಕೃತಿಕ ಮತ್ತು ಆಯುರ್ವೇದ ವೈದ್ಯಕೀಯ ಪದ್ಧತಿಯಲ್ಲಿ ಯಾವುದೇ ರೋಗವನ್ನು ಗುಣಪಡಿಸುವ ಸಾಮರ್ಥ್ಯವಿದೆ. ಆದರೆ ಆಧುನಿಕ ವೈದ್ಯಕೀಯ ಪದ್ಧತಿಯಾದ ಅಲೋಪತಿಯಲ್ಲಿ ಬಹಳಷ್ಟು ರೋಗಗಳಿಗೆ ಪರಿಪೂರ್ಣವಾದ ಚಿಕಿತ್ಸೆಯೇ ಇಲ್ಲ ಎಂದು ಹೇಳಿರುವುದನ್ನು ಮಾಧ್ಯಮಗಳಲ್ಲಿ ಪ್ರಕಟವಾಗಿದೆ.

ಮನುಷ್ಯ ತನ್ನ ಆರೋಗ್ಯ ಕಾಪಾಡಿಕೊಳ್ಳಲು, ಅಲೋಪತಿ, ಆಯುರ್ವೇದ, ಯುನಾನಿ, ಹೋಮಿಯೋಪತಿ ಮುಂತಾದ ಯಾವುದೇ ವೈದ್ಯಕೀಯ ಚಿಕಿತ್ಸಾ ಪದ್ಧತಿಯನ್ನು ಅನುಸರಿಸಬಹುದು, ಅದು ಅವರವರ ವೈಯಕ್ತಿಕ ವಿಷಯ. ಆದರೆ ಮಾನ್ಯ ಕುಲಪತಿಗಳು ತಮ್ಮ ವೈದ್ಯಕೀಯ ಪದ್ಧತಿಯನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ, ವೈಜ್ಞಾನಿಕವಾಗಿ ದೃಢೀಕರಿಸಲ್ಪಟ್ಟು ಅದರಂತೆ ಔಷಧೋಪಚಾರಗಳನ್ನು ಮಾಡುವ ಅಲೋಪತಿಯಲ್ಲಿ, ಹಲವಾರು ರೋಗಗಳನ್ನು ಗುಣಪಡಿಸಲು ಸಾಧ್ಯವಿಲ್ಲವಾಗಿಲ್ಲವಾದ್ದರಿಂದ, ಎಲ್ಲರೂ ಆಯುರ್ವೇದ ಮತ್ತು ಪ್ರಾಕೃತಿಕ ಚಿಕಿತ್ಸೆ ಪಡೆದುಕೊಳ್ಳಲು ಮುಂದೆ ಬರಬೇಕೆಂದು ಹೇಳಿದ್ದಾರೆ.

ಅಲೋಪತಿ ವೈದ್ಯರು, ರೋಗಿಗಳಿಗೆ ಇಲ್ಲಸಲ್ಲದ ಪರೀಕ್ಷೆಗಳನ್ನು ಮಾಡಿಸಿ ಕಿಕ್ ಬ್ಯಾಕ್ ಪಡೆದುಕೊಳ್ಳುತ್ತಾರೆಂದು ಹೇಳಿ ಅಲೋಪತಿ ವೈದ್ಯರನ್ನು ಸಾರಾಸಗಟಾಗಿ ಅವಮಾನಿಸಿರುವುದು ಅಕ್ಷಮ್ಯ. ಒಬ್ಬ ಕುಲಪತಿ, ಬಹಿರಂಗವಾಗಿ ಮಾತನಾಡುವಾಗ, ಬಹಳ ಜವಾಬ್ದಾರಿಯಿಂದ ಮಾತನಾಡಬೇಕೇ ವಿನಹ ಬೇಜವಾಬ್ದಾರಿಯಿಂದ ಮಾತನಾಡಬಾರದು,ಇದು ಅವರ ಘನತೆಗೆ ತಕ್ಕದ್ದಲ್ಲ, ಆಡಿರುವ ಮಾತಿಗೆ ಕ್ಷಮೆ ಕೇಳಿ ದೊಡ್ಡವರಾಗುವುದರಲ್ಲಿ ಯಾವುದೇ ಸಂಕೋಚ ಬೇಡ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಭಾರತವಾಯ್ತು ವಿಶ್ವಕ್ಕೇ ಗುರು!

ಮಾನ್ಯರೆ,

ಇಸ್ರೋ ನೀ ದಿಗ್ವಿಜಯವ ತಂದಿತ್ತೆ ದೇಶ ಕಂಡ ಕನಸಿಗೆ,
ಹೆಸ್ರಾಯಿತು ಭಾರತಕ್ಕೆ 'ವಿಶ್ವಗುರು' ಮುಟ್ಟಿದ ಗುರಿಯಿಂದ,
ವಿಕ್ರಮ ತ್ರಿವಿಕ್ರಮನಾಗಿ ಒತ್ತಿದೆ ನಿಶಾಕರನಿಗೆ ತ್ರಿವರ್ಣ ಮುದ್ರೆ
ಭಾರತ ಗೆದ್ದಿತು ಚಂದ್ರನ ಗದ್ದುಗೆ ಏರಿ ಪತಾಕೆಯ ನೆಟ್ಟು
ಲ್ಯಾಂಡರ್‌ನ ಮೃದು ಮುತ್ತಿಗೆ ಕವಿದ ಚಂದ್ರನು ಬೆಳಗಿಹನು,
ಇಸ್ರೋ, ವಿಶ್ವವೇ ತಲೆಬಾಗಿ ನಮಿಸಿದೆ ನಿಮ್ಮೀ.... ಸಾಧನೆಗೆ,
ಸುಳ್ಳೇಳಿ ತುತ್ತಿಟ್ಟು ಅಮ್ಮ ತೋರಿದ ಚಂದ್ರನಪ್ಪಿ ಮುದ್ದಿಸಿದೆವು!.
ನಿಲ್ಲದಿರಿ, ವಿರಮಿಸದಿರಿ, ನಡೆಯಿರಿ ನಿಬ್ಬೆರಗಾಗಲಿ ಮನುಕುಲವು,
ಸಾಗಲಿ ನಿಮ್ಮ ಪಯಣವು ಗುರು, ಶುಕ್ರ, ಶನಿ, ಮಂಗಳಕ್ಕೂ!.
ಭಾರತ ನೆಲದಲಿ ಜನಿಸಿದ ನಾವುಗಳೇ ಧನ್ಯರು, ಜೈ ಭಾರತ!.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಮೆಚ್ಚಿಸುವ ಹುಚ್ಚು ಹೆಚ್ಚು ಅಪಾಯ!



"ಸದಾ ಅನ್ಯರನ್ನು ಮೆಚ್ಚಿಸಲು ನಮ್ಮ ಬದುಕು ಮೂರು ಗಂಟೆಗಳ ಸಿನಿಮಾ ಅಲ್ಲ. ತಮ್ಮ ಹತ್ತಿರದವರನ್ನು ಮೆಚ್ಚಿಸುವುದಕ್ಕಿಂತ ಹೆಚ್ಚಾಗಿ ಅವರು ನೋಡಿ ಹೊಟ್ಟೆಕಿಚ್ಚುಪಡಲಿ ಎಂಬ ದುರ್ಬುದ್ಧಿಯು ಅನೇಕ ಮಂದಿಗೆ ಇದೆ. ಅದಕ್ಕಾಗಿ ತಮ್ಮತನವನ್ನೇ ಮರೆಯುತ್ತಾರೆ, ಹೆಚ್ಚು ತೋರಿಕೆ ಮಾಡುತ್ತಾರೆ. ದೇಹವನ್ನು ಹೆಚ್ಚೆಚ್ಚು ಸೌಂದರ್ಯಗೊಳಿಸಿಕೊಳ್ಳಲು ಕೃತಕ ಮಾರ್ಗಗಳನ್ನು ಅನುಸರಿಸುತ್ತಾರೆ. ಜೀವನಶೈಲಿಯನ್ನೇ ಬದಲಿಸಿ ಬಿಡುವ ಮಟ್ಟಕ್ಕೆ ಈ ಹುಚ್ಚು ತಂದು ನಿಲ್ಲಿಸುತ್ತದೆ. ಲೆಕ್ಕವಿಲ್ಲದಷ್ಟು ಬಟ್ಟೆಬರೆ ಖರೀದಿಸುತ್ತಾರೆ. ಒಂದೆರಡು ಬಾರಿ ಧರಿಸಿದ ಬಟ್ಟೆಗಳನ್ನು ಮತ್ತೆ ಮತ್ತೆ ಧರಿಸಲು ಇಚ್ಛಿಸದೆ ಹೊಸತಕ್ಕೆ ಹಾತೊರೆಯುತ್ತಾರೆ. ಅದಕ್ಕಾಗಿ ಇರುವ ಸಂಪಾದನೆ ಸಾಲದೆ ಸಾಲ ಮಾಡಿ ಶೋಕಿ ಮಾಡಲು ಮುಂದಾಗುತ್ತಾರೆ. ಅನೇಕ ಯುವಕರು ಸುಲಭವಾಗಿ ಸಿಗುವ ಆನ್‌ಲೈನ್ ಆಪ್‌ಗಳಿಂದ ಸಾಲ ಪಡೆದು ಶೋಕಿ ಮಾಡಿ, ಆ ಸಾಲವನ್ನು ಸರಿಯಾದ ಸಮಯಕ್ಕೆ ತೀರಿಸಲಾಗದೆ ಆತ್ಮಹತ್ಯೆ ಹಾದಿ ಹಿಡಿದ ಯುವಕರ ಸಂಖ್ಯೆಗೇನು ಕಮ್ಮಿಯಿಲ್ಲ ! ಅನೇಕರಿಗೆ ತಮ್ಮ ಸಂಪಾದನೆ ಹಾಗೂ ಖರ್ಚಿನ ಕುರಿತು ಅರಿವೇ ಇದ್ದಂತಿಲ್ಲ. ಯಾರೋ ಶ್ರೀಮಂತರು ಐಷಾರಾಮಿ ಜೀವನ ನಡೆಸುತ್ತಿದ್ದಾರೆ ಅಂದರೆ ಅದನ್ನು ಅನುಸರಿಸಲಾದೀತೇ?

ಮನುಷ್ಯ ಮೂಲಭೂತವಾಗಿ ಸಂಘಜೀವಿ. ಆಧುನಿಕ ಪ್ರಪಂಚದ ನಾಜೂಕಾದ ಬದುಕಿನ ಲಕ್ಷಣದಂತೆ ಇಂದು ಅವಿಭಕ್ತ ಕುಟುಂಬಗಳು ಒಡೆದು ಅಣುಕುಟುಂಬಗಳಾಗಿ ಬದುಕುತ್ತಿರುವುದು ಎಲ್ಲೆಡೆ ಸಾಮಾನ್ಯವಾಗಿದೆ. ಬುದ್ಧಿ ಹೇಳಲು ಇದ್ದ ಹೆತ್ತವರು ಮಕ್ಕಳಿದ್ದೂ ಅನಾಥರಂತೆ ಬದುಕುವ ಪರಿಸ್ಥಿತಿ ಎದುರಾಗಿದೆ. ಇದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ. ನೈಜ ಬದುಕನ್ನು ಕಟ್ಟಿಕೊಳ್ಳಲು ಹಿರಿಯರ ಮಾರ್ಗದರ್ಶನ ಬಹಳ ಮಹತ್ತರದ್ದು, ಆದರೆ ಇಂದು ಅವರ ಮಾತುಗಳನ್ನು ಉಪೇಕ್ಷಿಸುವ ಮಂದಿಯೇ ಹೆಚ್ಚು. ಇಂದಿನ ದಿನಮಾನದಲ್ಲಿ ಎಲ್ಲರಿಗೂ ತಮ್ಮ ಸ್ಥಾನಮಾನದ ನೈಜತೆಯನ್ನು ಹೇಳಿಕೊಳ್ಳುವ ಬದಲು ತೋರಿಕೆಗೆ ಏನೆಲ್ಲಾ ಸರ್ಕಸ್ ಮಾಡುವ ಗೀಳು ಹತ್ತಿದೆ. ಸಮಾಜದ ದೃಷ್ಟಿಯಲ್ಲಿ ದೊಡ್ಡವನೆನಿಸಿಕೊಳ್ಳಬೇಕೆಂಬ ಕಾರಣಕ್ಕೆ 'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎಂಬ ಮಾತಿಗೆ ಇಂಬು ಕೊಡುವಂತೆ ತಿನ್ನುವ ಅನ್ನ, ಧರಿಸುವ ಬಟ್ಟೆ, ಓಡಾಡುವ ವಾಹನ ಅಷ್ಟೇ ಏಕೆ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಸೇರಿಸುವ ಶಾಲಾ ಕಾಲೇಜುಗಳು ಸಹ ಇಂದು ಪ್ರತಿಷ್ಠೆಯ ಸಂಕೇತ ಗಳಾಗಿ ಮಾರ್ಪಟ್ಟಿವೆ. ಇದರಿಂದ ಜನರಲ್ಲಿ ಅನೇಕ ರೀತಿಯ ಅನಾರೋಗ್ಯಕರ ಸ್ಪರ್ಧೆಗಳು ಏರ್ಪಡುತ್ತಿವೆ. ದುಡಿಯುವ ಕೈಗಳು ಎಷ್ಟು ಸಂಪಾದನೆ ಮಾಡಿದರೂ ಮನೆ ಮಂದಿಯ ಬೇಡಿಕೆಯನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ. ಐಷಾರಾಮದ ಹುಚ್ಚು ಎಂದಿಗೂ ಸಂತೃಪ್ತಿ ನೀಡದು, ಆದರೆ ಅತೃಪ್ತಿಯನ್ನು ನಿಲ್ಲಿಸದು !

ಇಂದು ಸಹಜ ಬದುಕಿನಿಂದ ದೂರಾಗಿ ಅಸಹಜ ಬದುಕನ್ನು ರೂಢಿಸಿಕೊಳ್ಳುವ ಹುಚ್ಚು ಹೆಚ್ಚುತ್ತಿದೆ. 'ತನ್ನ ಬದುಕು ತನಗೆ ಮೆಚ್ಚುಗೆ ಆದರೆ ಸಾಲದು ಇತರರಿಗೆ ಹೆಚ್ಚು ಮೆಚ್ಚುಗೆಯಾಗಬೇಕು' ಎಂಬುದು ಇಂದಿನ ಪೀಳಿಗೆಯ ಜನರ ಖಯಾಲಿಯೂ ಹೌದು ಖಾಯಿಲೆಯೂ ಹೌದು. ಹಿಂದೆ ಅವರ ಬದುಕು ಅವರಿಗೆ ನಮ್ಮ ಬದುಕು ನಮಗೆ ಎಂದು ಜನ ಭಾವಿಸಿ ಬದುಕುತ್ತಿದ್ದರು. ಇಂದು ಅನ್ಯರ ಬದುಕನ್ನು ಕಂಡು, 'ನಾವೇಕೆ ಅವರಂತೆ ಬದುಕಬಾರದು' ಎಂದು ಪ್ರಶ್ನಿಸಿಕೊಂಡು ಅವರನ್ನು ಅಂಧಾನುಕರಣೆ ಮಾಡಲು ಪ್ರಾರಂಭಿಸುತ್ತಾರೆ. ಇಂದಿನ ತಾಂತ್ರಿಕ ಯುಗದಲ್ಲಿ ಟಿ.ವಿ., ಸಿನಿಮಾ, ಸಾಮಾಜಿಕ ಜಾಲತಾಣಗಳಿಂದ ಪ್ರೇರೇಪಿತರಾಗಿ ಯುವಕರು ಸಿನಿಮಾ ನಟ ನಟಿಯನ್ನು ಅನುಕರಿಸಲು ಅವರು ಧರಿಸುವ ಬಟ್ಟೆ ಬೆಲೆಬಾಳುವ ಷೂಗಳು, ವಾಚ್‌ಗಳು, ಬೈಕ್‌ಗಳು ಹೀಗೆ ಹೆತ್ತವರಿಗೆ ತೊಂದರೆ ಕೊಟ್ಟು ಶೋಕಿಯ ಬದುಕನ್ನು ರೂಢಿಸಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿ ಒಂದು ರೀತಿಯ ಪಬ್ಲಿಕ್ ಫಿಗರ್ ಆಗಲು ಬಯಸುತ್ತಿದ್ದಾರೆ. ಅವರ ಫೋಟೋ ಹಾಗೂ ವಿಡೀಯೋಗಳನ್ನು ಹೆಚ್ಚೆಚ್ಚು ಜನ ಮೆಚ್ಚಬೇಕು ಎಂಬ ಹುಚ್ಚು ಅವರಿಗೆ ಹಿಡಿಯುತ್ತಿದೆ. ಅದೊಂದು ರೀತಿಯ ಮಾನಸಿಕ ಖಾಯಿಲೆಯಾಗಿ ಮಾರ್ಪಾಡಾಗುತ್ತಿದೆ. ಎಷ್ಟೋ ಯುವಕ/ಯುವತಿಯರು ರೀಲ್ಸ್ ಮಾಡುವ ಖಯಾಲಿಗೆ ಬಿದ್ದು, ಅದರಿಂದ ಪರೋಕ್ಷ ತೊಂದರೆಗಳನ್ನು ಅನುಭವಿಸಿ, ತಮ್ಮ ಜೀವಕ್ಕೆ ಕುತ್ತು ತಂದುಕೊಂಡಿದ್ದಾರೆ. ಎಷ್ಟೋ ಗೃಹಿಣಿಯರು ಊಹಿಸಲು ಸಾಧ್ಯವಾಗದ ಕಮೆಂಟ್‌ಗಳನ್ನು ಸ್ವೀಕರಿಸಿ, ತಮ್ಮ ಕುಟುಂಬದ ಸ್ವಾಸ್ಥ್ಯ ಹಾಳು ಮಾಡಿಕೊಂಡಿದ್ದಾರೆ. ಅಷ್ಟೇ ಏಕೆ ಎಷ್ಟೋ ಜನ ಉನ್ನತ ಮಟ್ಟದ ಅಧಿಕಾರಿಗಳು ಸಾಮಾಜಿಕ ಜಾಲತಾಣದ ಹುಚ್ಚಿನಿಂದ ಹನಿಟ್ರ್ಯಾಪ್‌ನಂತಹ ಮೋಹಕ ಜಾಲಕ್ಕೆ ಸಿಲುಕಿ ಹಣದ ಜೊತೆ ಮಾನವನ್ನು ಕಳೆದುಕೊಳ್ಳುತ್ತಿದ್ದಾರೆ.

ಸದಾ ಅನ್ಯರನ್ನು ಮೆಚ್ಚಿಸಲು ನಮ್ಮ ಬದುಕು ಮೂರು ಗಂಟೆಗಳ ಸಿನಿಮಾ ಅಲ್ಲ. ತಮ್ಮ ಹತ್ತಿರದವರನ್ನು ಮೆಚ್ಚಿಸುವುದಕ್ಕಿಂತ ಹೆಚ್ಚಾಗಿ ಅವರು ನೋಡಿ ಹೊಟ್ಟೆಕಿಚ್ಚುಪಡಲಿ ಎಂಬ ದುರ್ಬುದ್ಧಿಯು ಅನೇಕ ಮಂದಿಗೆ ಇದೆ. ಅದಕ್ಕಾಗಿ ತಮ್ಮತನವನ್ನೇ ಮರೆಯುತ್ತಾರೆ, ತೋರಿಕೆ ಮಾಡುತ್ತಾರೆ. ದೇಹವನ್ನು ಹೆಚ್ಚೆಚ್ಚು ಸೌಂದರ್ಯಗೊಳಿಸಿಕೊಳ್ಳಲು ಕೃತಕ ಮಾರ್ಗಗಳನ್ನು ಅನುಸರಿಸುತ್ತಾರೆ. ಜೀವನಶೈಲಿಯನ್ನೇ ಬದಲಿಸಿ ಬಿಡುವ ಮಟ್ಟಕ್ಕೆ ಈ ಹುಚ್ಚು ತಂದು ನಿಲ್ಲಿಸುತ್ತದೆ. ಲೆಕ್ಕವಿಲ್ಲದಷ್ಟು ಬಟ್ಟೆಬರೆ ಖರೀದಿಸುತ್ತಾರೆ. ಒಂದೆರಡು ಬಾರಿ ಧರಿಸಿದ ಬಟ್ಟೆಗಳನ್ನು ಮತ್ತೆ ಮತ್ತೆ ಧರಿಸಲು ಇಚ್ಛಿಸದೆ ಹೊಸತಕ್ಕೆ ಹಾತೊರೆಯುತ್ತಾರೆ. ಅದಕ್ಕಾಗಿ ಇರುವ ಸಂಪಾದನೆ ಸಾಲದೆ ಸಾಲ ಮಾಡಿ ಶೋಕಿ ಮಾಡಲು ಮುಂದಾಗುತ್ತಾರೆ. ಅನೇಕ ಯುವಕರು ಸುಲಭವಾಗಿ ಸಿಗುವ ಆನ್‌ಲೈನ್ ಆಪ್‌ಗಳಿಂದ ಸಾಲ ಪಡೆದು ಶೋಕಿ ಮಾಡಿ, ಆ ಸಾಲವನ್ನು ಸರಿಯಾದ ಸಮಯಕ್ಕೆ ತೀರಿಸಲಾಗದೆ ಆತ್ಮಹತ್ಯೆ ಹಾದಿ ಹಿಡಿದ ಯುವಕರ ಸಂಖ್ಯೆಗೇನು ಕಮ್ಮಿಯಿಲ್ಲ! ಅನೇಕರಿಗೆ ತಮ್ಮ ಸಂಪಾದನೆ ಹಾಗೂ ಖರ್ಚಿನ ಕುರಿತು ಅರಿವೇ ಇದ್ದಂತಿಲ್ಲ. ಯಾರೋ ಶ್ರೀಮಂತರು ಐಷಾರಾಮಿ ಜೀವನ ನಡೆಸುತ್ತಿದ್ದಾರೆ ಅಂದರೆ ಅದನ್ನು ಎಲ್ಲರೂ ಅನುಸರಿಸಲಾದೀತೇ?

ಇಂದು ತೋರಿಕೆ ಎಂಬುದು ಅಂಗಸೌಷ್ಟವದ ಮೇಲೂ ಕೇಂದ್ರೀಕೃತವಾಗಿದೆ. ಇಂದಿನ ಪೀಳಿಗೆಯ ಯುವಕ/ಯುವತಿಯರು ಫಿಟ್ನೆಸ್ ಗೀಳಿಗೆ ಬಿದ್ದು, ಸರಿಯಾದ ಜಿಮ್ ಟ್ರೈನರ್‌ಗಳನ್ನು ಆರಿಸಿಕೊಳ್ಳದೆ, ಅವೈಜ್ಞಾನಿಕವಾದ ಡಯಟ್ ಅನುಸರಿಸುತ್ತಿರುವುದನ್ನು ಕಾಣಬಹುದು. ಎಷ್ಟೋ ಯುವಕರು ಸರಿಯಾಗಿ ಊಟತಿಂಡಿ ಮಾಡದೆ ಫಿಟ್ನೆಸ್ ಹುಚ್ಚಿನಿಂದ ರಕ್ತ ಚಿಮ್ಮುವಂತೆ ಕಾಣಬೇಕಾದ ವಯಸ್ಸಿನಲ್ಲಿ ರೋಗಿಷ್ಠರಂತೆ ಕಾಣುತ್ತಿದ್ದಾರೆ. ಅಷ್ಟೇ ಅಲ್ಲ ಸರಿಯಾದ ಕ್ರಮದಲ್ಲಿ ಜಿಮ್‌ನಲ್ಲಿ ವರ್ಕ್‌ಔಟ್ ಮಾಡದೇ, ಸರಿಯಾದ ಡಯಟ್ ಮಾಡದೇ ತಮ್ಮ ಅಮೂಲ್ಯ ಜೀವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಪ್ರತಿಯೊಬ್ಬರ ದೇಹ ಪ್ರಕೃತಿ ಒಂದೊಂದು ರೀತಿ ಇರುತ್ತದೆ. ಅದನ್ನು ಅರಿಯದೆ ಒಂದೇ ಫಾರ್ಮುಲ ಅನುಸರಿಸಿ ತೊಂದರೆ ಅನುಭವಿಸುತ್ತಿದ್ದಾರೆ. ಬೇರೆಯವರನ್ನು ಇಂಪ್ರೆಸ್ ಮಾಡಲು ಹೋಗಿ ಡಿಪ್ರೆಶನ್ ಅನುಭವಿಸುತ್ತಿರುವ ಮಂದಿ ಅನೇಕ. ಅಷ್ಟೇ ಅಲ್ಲದೆ ಅಂಧಾನುಕರಣೆ ಎಂದಿಗೂ ಯಾವುದಕ್ಕೂ ಒಳ್ಳೆಯದಲ್ಲ ಎಂಬುದು ಅಕಾಲಿಕ ಮರಣಕ್ಕೆ ತುತ್ತಾದ ಯುವಕ/ಯುವತಿಯರೇ ಸಾಕ್ಷಿ.

ಮೆಚ್ಚಿಸುವ ಹುಚ್ಚು ಎಲ್ಲಾ ವಯೋಮಾನದವರನ್ನೂ ಬಾಧಿಸುತ್ತಿದೆ. ಮದುವೆ, ಹುಟ್ಟು ಹಬ್ಬ ಆಚರಣೆ, ವಿವಾಹ ವಾರ್ಷಿಕೋತ್ಸವ ಅಷ್ಟೇ ಏಕೆ ತಿಥಿ ಕಾರ್ಯದಲ್ಲಿಯೂ ತೋರಿಕೆ ಎದ್ದು ಕಾಣುತ್ತಿದೆ. ಸ್ಪರ್ಧೆಗೆ ಬಿದ್ದವರಂತೆ ಒಬ್ಬರನ್ನು ನೋಡಿ ಒಬ್ಬರು ದೊಡ್ಡ ದೊಡ್ಡ ಕಲ್ಯಾಣ ಮಂಟಪಗಳನ್ನು ಬುಕ್ ಮಾಡುವುದು. ಕಣ್ಣು ಕೋರೈಸುವಂತೆ ಅಲಂಕಾರ ಮಾಡಿಸುವುದು, ಫೋಟೋ ವಿಡೀಯೋಗಳಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದು ಸರ್ವೇಸಾಮಾನ್ಯವಾಗಿದೆ. ಐಷಾರಾಮದ ಬದುಕು ಇಂದು ಪ್ರೀವೆಡ್ಡಿಂಗ್ ಫೋಟೋ-ವಿಡೀಯೋ ಶೂಟ್ ಮಾಡಿಸುವ ಸಂಪ್ರದಾಯ ಸಾಮಾನ್ಯವಾಗಿಬಿಟ್ಟಿದೆ. ಸಿನಿಮಾ ನಾಯಕ-ನಾಯಕಿಯಂತೆ ಬಿಂಬಿಸಿಕೊಳ್ಳುವ ಇರಾದೆ ಇಂದಿನ ಯುವಕ-ಯುವತಿಯರಿಗೆ ಇದೆ. ಯಾರೋ ಉಳ್ಳವರು ಲೆಕ್ಕವಿಲ್ಲದೇ ಮದುವೆಗೆ ಖರ್ಚು ಮಾಡುತ್ತಾರೆ ಎಂದರೆ ಮಧ್ಯಮವರ್ಗದವರು, ಕೆಳವರ್ಗದವರು ಮಾಡಲು ಸಾಧ್ಯವಿಲ್ಲ. ಆದರೆ ಉಳ್ಳವರನ್ನು ಅನುಸರಿಸಲು ಹೋಗಿ ಸಾಕಷ್ಟು ಹಣವಿಲ್ಲದಿದ್ದರೂ ಸಾಲ ಮಾಡಿ/ಮಾಡಿಸಿ, ಲೆಕ್ಕವಿಲ್ಲದೆ ಲಕ್ಷ ಲಕ್ಷ ಖರ್ಚು ಮಾಡಿ, ಅದನ್ನು ತೀರಿಸಲು ಹತ್ತಾರು ವರ್ಷಗಳು ಪರದಾಡುತ್ತಿರುವುದು ಮಾತ್ರ ಸುಳ್ಳಲ್ಲ.

ಶುಭ ಸಮಾರಂಭ ಎಂದ ಮೇಲೆ ಸಂಭ್ರಮ ಮನೆಮಾಡಬೇಕಾದುದು ಸಹಜ. ಆದರೆ ಸಂಭ್ರಮಕ್ಕಿಂತ ಇಂದು ಸಂಪತ್ತಿನ ಅನಾವರಣ, ಆಧುನಿಕತೆಯ ತೋರಿಕೆ, ಐಷಾರಾಮವನ್ನು ಬಿಂಬಿಸುವ ಕೆಲಸವೇ ಹೆಚ್ಚಾಗಿ ಆಗುತ್ತಿದೆ. ಸಾಮಾನ್ಯರಂತೆ ಇದ್ದರೆ ಏನೋ ಒಂದು ಕೀಳರಿಮೆ ಜನರನ್ನು ಕಾಡುತ್ತದೆ ಎಂದೆನಿಸುತ್ತದೆ. ಅದಕ್ಕಾಗಿ ತಮ್ಮತನವನ್ನು ಮುಚ್ಚಿಹಾಕಿ, ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಮೀರಿ ತೋರಿಸಿಕೊಳ್ಳುವ ಮನೋಭಾವ ಹೆಚ್ಚಾಗುತ್ತಿದೆ. ಅದಕ್ಕಾಗಿ ಮನೆಮಂದಿ ಎಷ್ಟೇ ದುಡಿದರೂ ಇಂದಿನ ಬದುಕಿನ ಶೈಲಿಗೆ ಹಣ ಸಾಲುತ್ತಿಲ್ಲ. ಐಷಾರಾಮದ ಬದುಕು ಅಂತ್ಯವಿಲ್ಲದ ಬೇಡಿಕೆಗಳ ಪಟ್ಟಿಯನ್ನು ಹೊಂದಿರುತ್ತದೆ. ಅದನ್ನು ಅಷ್ಟು ಸುಲಭವಾಗಿ ಪೂರೈಸಲು ಸಾಧ್ಯವಿಲ್ಲ. ಅಂತೆಯೇ ಪೂರೈಸುವ ಅಗತ್ಯವೂ ಇಲ್ಲ.

ಇಂದಿನ ದಿನಮಾನದಲ್ಲಿ ಯಾರಿಗೂ ಹಿಂದೆ ಇದ್ದಂತೆ ಊಟಬಟ್ಟೆಗೆ ಕೊರತೆ ಇಲ್ಲ. ಆದರೆ ಯಾರೊಬ್ಬರು ನೆಮ್ಮದಿಯಾಗಿ ಬದುಕುತ್ತಿದ್ದಾರೆ ಅನಿಸುವುದಿಲ್ಲ, ಅಷ್ಟೇ ಅಲ್ಲ ಯಾರೊಬ್ಬರ ಮುಖದಲ್ಲೂ ಸಂತೃಪ್ತಿ ಕಾಣುವುದಿಲ್ಲ. ಮನೆಮಂದಿಯೆಲ್ಲಾ ದುಡಿಯುತ್ತಿದ್ದರೂ ಏನೋ ಕೊರತೆಯನ್ನು ಕಂಡುಕೊಂಡು ಮನೋವ್ಯಾಕುಲತೆಯನ್ನು ಅನುಭವಿಸುತ್ತಿರುತ್ತಾರೆ. ಬೇರೆಯವರ ಬದುಕಿನೊಂದಿಗೆ ತಮ್ಮ ಬದುಕನ್ನು ಹೋಲಿಕೆ ಮಾಡಿಕೊಂಡು ಪಶ್ಚಾತ್ತಾಪಪಟ್ಟು ಇನ್ನಿಲ್ಲದ ನೋವನ್ನು ಕೊಂಡುಕೊಂಡು ಅನುಭವಿಸುತ್ತಿದ್ದಾರೆ. ನಿಜ ಹೇಳಬೇಕೆಂದರೆ ನಮ್ಮ ಸಂಪಾದನೆ ನಮ್ಮ ಕುಟುಂಬ ನಿರ್ವಹಣೆಗೆ, ಉತ್ತಮ ಬದುಕಿಗೆ ಸಾಕಾಗುತ್ತದೆ. ಆದರೆ ಎದುರು ಮನೆ, ಪಕ್ಕದ ಮನೆ, ಕಚೇರಿ ಸಹೋದ್ಯೋಗಿಗಳು, ನೆಂಟರಿಷ್ಟರ ಕುಟುಂಬದೊಂದಿಗೆ ಹೋಲಿಕೆ ಮಾಡಿಕೊಂಡರೆ ಅಂಬಾನಿ ಆಸ್ತಿ ಬರೆದು ಕೊಟ್ಟರೂ ಅದೂ ಸಾಲುವುದಿಲ್ಲ.

'ನವಿಲನ್ನು ಕಂಡು ಕೆಂಬೂತ ಪುಕ್ಕ ತೆರೆದಂತೆ' ನಮ್ಮ ಬದುಕು ಆಗಬಾರದು. ನಮ್ಮ ಬಟ್ಟೆಬರೆ, ಆಭರಣ, ಕಾರುಬಾರು ಮೆಚ್ಚಿ ಕೈಚಪ್ಪಾಳೆ ತಟ್ಟುವವರು ನಮ್ಮ ಸಾಲ ತೀರಿಸಲು ಬರುವುದಿಲ್ಲ ಎಂಬ ಅರಿವು ಇರಬೇಕು. ಬೇರೆಯವರ ಬಟ್ಟೆ ಹಾಗೂ ಬೇರೆಯವರ ಪಾದರಕ್ಷೆ ನಮಗೆ ಹೇಗೆ ಹೊಂದಿಕೆ ಆಗುವುದಿಲ್ಲವೋ, ಅದೇ ರೀತಿ ಬೇರೆಯವರ ಬದುಕು ಸಹ ನಮಗೆ ಹೊಂದಿಕೆ ಆಗುವುದಿಲ್ಲ. ಶಕ್ತಿ ಮೀರಿ ಬದುಕನ್ನು ಕಟ್ಟಿಕೊಳ್ಳಬಹುದು, ಆದರೆ ವ್ಯಾಪ್ತಿ ಮೀರಿ ಕಟ್ಟಿಕೊಂಡರೆ ಅಪಾಯ ಕಟ್ಟಿಟ್ಟ ಬುತ್ತಿ. ಆದ್ದರಿಂದ ನಮ್ಮದೇ ಬದುಕನ್ನು ನಮ್ಮ ಇತಿಮಿತಿಯಲ್ಲಿ ರೂಪಿಸಿಕೊಳ್ಳುವುದು ಜಾಣತನ. ಏನಂತೀರಿ?

ಪದ ತಾಂಬೂಲ :

ನೆಮ್ಮದಿಯನ್ನು ಮಾರಿ ಅತೃಪ್ತಿಯನ್ನು ಕೊಂಡುಕೊಳ್ಳುವುದೇ ಬದುಕಿನ ಇಂದಿನ ವ್ಯಾಪಾರ.

ಪ್ರತಿರೋಧ ಒಡ್ಡಿ ಸೋತ ಅಫ್ಘಾನಿಸ್ತಾನ; ಬಾಂಗ್ಲಾಗೆ 89 ರನ್‌ಗಳ ಗೆಲುವು



ಲಾಹೋರ್(ಪಾಕಿಸ್ತಾನ), ಸೆ.3 (ಸಿಎನ್)– ಅಫ್ಘಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ಬಾಂಗ್ಲಾದೇಶ 89 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ. ಆದರೆ ಬೃಹತ್ ಮೊತ್ತದ ಗುರಿ ಬೆನ್ನಟ್ಟಿದ ಅಫ್ಘಾನ್ ತೋರಿದ ಪ್ರತಿರೋಧಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಇಲ್ಲಿನ ಗಡಾಫಿ ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ನಡೆಸಿದ ಬಾಂಗ್ಲಾ ನಿಗದಿತ 50 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಬರೋಬ್ಬರಿ 334 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಮೆಹದಿ ಹಸನ್ ಹಾಗೂ ಶಂಟೋ ಆಕರ್ಷಕ ಶತಕ ಸಿಡಿಸಿದರು. ನಾಯಕ ಶಾಕೀಬ್ ಅಲ್ ಹಸನ್ ಅಜೇಯ 35 ರನ್ ಗಳಿಸಿ ತಂಡದ ಮೊತ್ತ 300 ಗಡಿ ದಾಟಿಸಿದರು. ಅಫ್ಘಾನ್ ಪರ ಮುಜೀಬ್ ಉರ್ರಹ್ಮಾನ್, ಗುಲ್ಬಾದಿನ್ ತಲಾ ಒಂದು ವಿಕೆಟ್ ಪಡೆದರು.

335 ರನ್‌ಗಳ ಬೃಹತ್ ಮೊತ್ತ ಬೆನ್ನತ್ತಿದ ಅಫ್ಘಾನಿಸ್ತಾನ್ 44.3 ಓವರ್‌ಗಳಲ್ಲಿ 245 ರನ್ ಗಳಿಸಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಪರಾಭವಗೊಂಡಿತು. ತಂಡದ ಪರ ಇಬ್ರಾಹಿಂ ಝುದ್ರಾನ್ ಹಾಗೂ ನಾಯಕ ಹಶ್ಮತುಲ್ಲಾ ಶಾಹಿದಿ ವರ ತಲಾ ಅರ್ಧ ಶತಕ ಸಿಡಿಸಿದರು. ಆದರೆ ಉಳಿದ ಬ್ಯಾಟ್ಸ್‌ಮನ್‌ಗಳಾದ ರಹಮಾನುಲ್ಲಾ ಗುರ್ಬಾಜ್ (1), ರಹಮತ್ ಷಾ(33), ಹಶ್ಮತುಲ್ಲಾ ಶಾಹಿದಿ(ನಾಯಕ) (51), ನಜೀಬುಲ್ಲಾ ಝುದ್ರಾನ್ (17), ಮೊಹಮ್ಮದ್ ನಬಿ (3), ಗುಲ್ಬದಿನ್ ನೈಬ್ (15), ಕರೀಂ ಜನತ್ (1), ಫಜಲ್ಹಕ್ ಫಾರೂಕಿ 1 ರನ್ ಗಳಿಸಿ ಉತ್ತಮ ಸಾಥ್ ನೀಡದೆ ತಂಡ ಸೋಲಿಗೆ ಕಾರಣರಾದರು. ಬಾಂಗ್ಲಾಪರ ಟಸ್ಕಿನ್ ಅಹ್ಮದ್ 4, ಇಸ್ಲಾಂ 3 ವಿಕೆಟ್ ಪಡೆದರು. ಹಸನ್ ಮಹಮೂದ್, ಮೆಹದಿ ಹಸನ್ ಮೀರಾಜ್ ತಲಾ ಒಂದು ವಿಕೆಟ್ ಪಡೆದು ಗೆಲುವಿನ ರೂವಾರಿಗಳಾದರು.

ಮೆಹದಿ ಹಸನ್ ಮೀರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸನಾತನ ಧರ್ಮದ ಕುರಿತು ತ.ನಾಡು ಸಚಿವ ಉದಯನಿಧಿ ವಿವಾದಾತ್ಮಕ ಹೇಳಿಕೆ

INDIA ಮೈತ್ರಿಕೂಟದ ವಿರುದ್ಧ ಅಮಿತ್ ಶಾ, ಜೆಪಿ ನಡ್ಡಾ ಕಿಡಿ

ಜೈಪುರ, ಸೆ.3– ಸನಾತನ ಧರ್ಮದ ಕುರಿತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಪುತ್ರ ಹಾಗೂ ಸಚಿವ ಉದಯನಿಧಿ ಸ್ಟಾಲಿನ್ ಅವರು ನೀಡಿರುವ ವಿವಾದಾತ್ಮಕ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ವಿರೋಧ ಪಕ್ಷಗಳ ಒಕ್ಕೂಟವಾದ INDIA ವಿರುದ್ಧ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಭಾನುವಾರ ವಾಗ್ದಾಳಿ ನಡೆಸಿದ್ದಾರೆ.

ರಾಜಸ್ಥಾನದ ಡುಂಗರ್‌ಪುರದಲ್ಲಿ ನಡೆದ ಸಾರ್ವಜನಿಕ ರ್‍ಯಾಲಿಯಲ್ಲಿ ಮಾತನಾಡಿದ ಅವರು, ಉದಯನಿಧಿ ಸ್ಟಾಲಿನ್ ಸೇರಿದಂತೆ ಡಿಎಂಕೆ ನಾಯಕರು ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎಂದು ಹೇಳುತ್ತಿದ್ದಾರೆ. ಈ ಜನರು ಮತಬ್ಯಾಂಕ್ ಓಲೈಕೆಗಾಗಿ ಸನಾತನ ಧರ್ಮದ ಬಗ್ಗೆ ಮಾತನಾಡಿದ್ದಾರೆ. ಅವರು ಸನಾತನ ಧರ್ಮವನ್ನು ಅವಮಾನಿಸಿದ್ದಾರೆ ಎಂದು ದೂರಿದರು.

ಇಂಡಿಯಾ ಮೈತ್ರಿಕೂಟವನ್ನು 'ಘಮಾಂಡಿಯ ಘಟಬಂಧನ್' ಎಂದು ಕರೆದ ಶಾ, ಈ ಮೈತ್ರಿಕೂಟವು ಮತಬ್ಯಾಂಕ್ ರಾಜಕೀಯಕ್ಕಾಗಿ ಯಾವುದೇ ಹಂತಕ್ಕೆ ಬೇಕಾದರೂ ಹೋಗಲು ಸಿದ್ಧವಾಗಿದೆ. ಅವರು ಸನಾತನ ಧರ್ಮದ ವಿರುದ್ಧ ಹೆಚ್ಚೆಚ್ಚು ಮಾತನಾಡುತ್ತಾರೆ. ಆದರೆ, ಕಡಿಮೆ ಗೋಚರಿಸುತ್ತಾರೆ ಎಂದು ಹೇಳಿದರು.

ಮೋದಿ ಗೆದ್ದರೆ ಸನಾತನ ಆಡಳಿತ ಬರುತ್ತದೆ ಎಂದು ಅವರು ಹೇಳುತ್ತಾರೆ. ಸನಾತನ ಜನರ ಹೃದಯವನ್ನು ಆಳುತ್ತಿದೆ. ಮೋದಿ ಅವರು ಸಂವಿಧಾನದ ಆಧಾರದ ಮೇಲೆ ದೇಶವನ್ನು ನಡೆಸುತ್ತಾರೆ. ಪ್ರಧಾನಿ ರಾಷ್ಟ್ರದ ಭದ್ರತೆಗೆ ಶ್ರಮಿಸುತ್ತಿದ್ದಾರೆ ಎಂದರು.

ತಮಿಳುನಾಡು ಸಿಎಂ ಸ್ಟಾಲಿನ್ ಪುತ್ರ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮ ಮಲೇರಿಯಾ, ಡೆಂಗ್ಯು ಇದ್ದಂತೆ. ಹಾಗಾಗಿ, ಅದನ್ನು ನಿರ್ಮೂಲನೆ ಮಾಡಬೇಕು ಎಂದು ಹೇಳಿದ್ದಾರೆ. ಈ ರೀತಿಯ ಹೇಳಿಕೆ ನೀಡಲು ಅವರಿಗೆ ಯಾವುದೇ ಹಿಂಜರಿಕೆ ಇಲ್ಲ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಕಿಡಿಕಾರಿದ್ದಾರೆ.

ಉದಯನಿಧಿ ಅವರು ಇಂತಹ ಹೇಳಿಕೆ ನೀಡಿರುವುದು ಇಂಡಿಯಾ ಮೈತ್ರಿಕೂಟದ ರಾಜಕೀಯ ತಂತ್ರದ ಭಾಗವಾಗಿದೆ. ಹಾಗಿದ್ದರೆ, ನೀವು ಮುಂಬರುವ ಚುನಾವಣೆಯಲ್ಲಿ ಈ ಹಿಂದೂ ವಿರೋಧಿ ತಂತ್ರವನ್ನು ಬಳಸುತ್ತೀರಾ? ಎಂದು ಪ್ರಶ್ನಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕ್ರೀಡೆಯು ವಿದ್ಯಾರ್ಥಿಗಳ ಮನಸ್ಸಿನ ಒತ್ತಡವನ್ನು ಕಡಿಮೆ ಮಾಡುತ್ತದೆ



ಮೈಸೂರು, ಸೆ.3–ಕ್ರೀಡೆಯು ವಿದ್ಯಾರ್ಥಿಗಳ ಮಾನಸಿಕ ಒತ್ತಡದ ಮಟ್ಟವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಒಳ್ಳೆಯ ಆರೋಗ್ಯಕ್ಕೆ ದೈಹಿಕ ಹಾಗೂ ಮಾನಸಿಕ ಚಟುವಟಿಕೆ ಬಹಳ ಮುಖ್ಯ ಎಂದು ನಂಜನಗೂಡು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ, ಲಯನ್ ಸಿ.ಆರ್ ದಿನೇಶ್ ತಿಳಿಸಿದರು.

ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ನಡೆದ ಸಮಾರಂಭದಲ್ಲಿ ಹಿರಿಯ ವಿದ್ಯಾರ್ಥಿ ಹಾಗೂ ರಾಷ್ಟ್ರ ಮಟ್ಟದ ಕಬಡ್ಡಿ ಕ್ರೀಡಾಪಟು ಸಕ್ಲೇನ್ ಪಾಷಾ ಅವರನ್ನು ಸನ್ಮಾನಿಸಲಾಯಿತು.

ಉಪನ್ಯಾಸಕ ರಂಗಸ್ವಾಮಿ ಮಾತನಾಡಿ, ಕ್ರೀಡೆಯು ಸೋಲು ಗೆಲುವಿನ ಪಾಠಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದರು. ಹಿರಿಯ ಉಪನ್ಯಾಸಕ ಅಶ್ವತ್ಥ ನಾರಾಯಣಗೌಡ, ಉಪನ್ಯಾಸಕರಾದ ಜುಡಿತ್ ಸಿಕವ್ವೈರಾ, ಡಾ.ಟಿ.ಕೆ.ರವಿ, ಕ್ರೀಡಾ ಕಾರ್ಯದರ್ಶಿ ಸದಾನಂದ, ಹರೀಶ್ ಇನ್ನಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಐದು ಬಾರಿ ಮರುಜನ್ಮ ಪಡೆದಿದ್ದೇನೆ

ನನಗಾದ ಜೀವನ್ಮರಣದ ಹೋರಾಟದ ಬಗ್ಗೆ ಹೇಳಬೇಕಿದೆ. ತುಂಬಾ ಕ್ಲಿಷ್ಟಕರ ಸನ್ನಿವೇಶ ಎದುರಿಸಿದ್ದೇನೆ, ಈ ರೀತಿಯ ಆರೋಗ್ಯ ಸಮಸ್ಯೆಯಾದಾಗ ಯಾರೂ ನಿರ್ಲಕ್ಷ್ಯ ಮಾಡಬಾರದು.. ಗೋಲ್ಡನ್ ಅವರ್‌ನಲ್ಲಿ ನಾವು ಚಿಕಿತ್ಸೆ ಪಡೆಯದೇ ಇದ್ದರೆ ಜೀವನ ಪರ್ಯಂತ ಮತ್ತೊಬ್ಬರ ಮೇಲೆ ಅವಲಂಬಿತರಾಗಬೇಕಾಗುತ್ತೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಎಚ್ಚರಿಸಿದ್ದಾರೆ.

ರಾಜ್ಯದ ಸಾವಿರಾರು ಕುಟುಂಬಗಳ ಆಶೀರ್ವಾದ, ಪ್ರಾರ್ಥನೆಯಿಂದ ನಾನು ಮತ್ತೆ ಬಂದಿದ್ದೇನೆ, ವೈದ್ಯರು ನನಗೆ ಎಚ್ಚರಿಕೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ನನ್ನ ದಿನಚರಿ ಬದಲಾಗಲಿದೆ. ನನ್ನ ಜೀವನದ ಬಗ್ಗೆ ಸ್ವಲ್ಪ ಕನಿಕರದಿಂದ ನೀವೆಲ್ಲ ನೋಡಿ. ಮೊದಲ ರೀತಿ ನಿಮಗೆ ಸಿಗುವುದು ಕಷ್ಟವಾಗಬಹುದು. ನೀವು ನನ್ನ ಆರೋಗ್ಯ ಸ್ಥಿತಿ ಅರ್ಥ ಮಾಡಿಕೊಳ್ಳಿ. ನನ್ನ ಜೀವನ ಶೈಲಿ ಬದಲಿಸಿಕೊಳ್ಳಲು ವೈದ್ಯರು ಸೂಚಿಸಿದ್ದಾರೆ, ನನಗಾಗಿ ಪ್ರಾರ್ಥಿಸಿದ ಎಲ್ಲರಿಗೂ ಧನ್ಯವಾದ ಎಂದು ಹೇಳಿದ್ದಾರೆ.

ಐದು ಬಾರಿ ಮರುಜನ್ಮ ಪಡೆದಿರುವೆ: 5 ಬಾರಿ ನಾನು ಮರುಜನ್ಮ ಪಡೆದಿದ್ದೇನೆ, ಅದಕ್ಕೆ ಕಾರಣ ವೈದ್ಯರು. ನಾನು ಅಂದು ಸ್ವಲ್ಪ ತಡ ಮಾಡಿದ್ದರೂ ಈ ರೀತಿ ನಿಮ್ಮ ಜೊತೆ ಮಾತನಾಡಲು ಆಗ್ತಿರಲಿಲ್ಲ. ನಾನು ಬಿಡದಿಯಿಂದ ಆಸ್ಪತ್ರೆಗೆ ಬಂದ ಕೂಡಲೇ ವೈದ್ಯರೆಲ್ಲ ಬಂದಿದ್ದರು. ಬಂದ ಕೂಡಲೇ ಚಿಕಿತ್ಸೆ ಶುರು ಮಾಡಿದರು. ನನ್ನ ಅದೃಷ್ಟ ಎಲ್ಲಾ ವೈದ್ಯರು ಆಸ್ಪತ್ರೆಗೆ ಬರುವಂತಾಯ್ತು, ಮೂರ್ನಾಲ್ಕು ತಿಂಗಳು ಹಾಸಿಗೆ ಹಿಡಿಯಬೇಕಾದವನನ್ನು ಒಂದು ಗಂಟೆಯಲ್ಲೇ ಮೊದಲಿನ ಸ್ಥಿತಿಗೆ ಬರುವಂತೆ ಮಾಡಿದರು ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ತಿಳಿಸಿದ್ದಾರೆ.

ಇದು ನನಗೆ ಎರಡನೇ ಬಾರಿ ಪಾರ್ಶ್ವವಾಯು ಆಗಿರೋದು. ಈ ಹಿಂದೆ ನಾನು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಒಂದು ಸುದ್ದಿ ನೋಡ್ತಾ ಕುಳಿತಿದ್ದೆ. ಆಗ ನಾನು ಮಾನಸಿಕ ಆಘಾತಕ್ಕೆ ಒಳಗಾಗಿದ್ದೆ. ಆಗ ಮೊದಲ ಬಾರಿ ಸ್ಟ್ರೋಕ್ ಆಗಿತ್ತು, ಇದು ಎರಡನೇ ಬಾರಿ. ನಾನು ಬೆಳಗ್ಗೆ ಹೋದ್ರೆ ಆಯ್ತು ಅಂತಾ ನಿರ್ಲಕ್ಷ್ಯ ಮಾಡಿದ್ದರೆ ಲೈಫ್‌ಟೈಂ ಹಾಸಿಗೆ ಹಿಡಿಯುತ್ತಿದ್ದೆ ಎಂದು ಕಹಿ ಅನುಭವ ಹಂಚಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಪರಿಣತ ವೈದ್ಯರಿದ್ದಾರೆ, ಜೀವದ ಮುಂದೆ ಹಣ ಮುಖ್ಯವಲ್ಲ. ಯಾವುದೇ ಕಾರಣಕ್ಕೂ ತಡ ಮಾಡದೇ ಈ ರೀತಿ ಸಮಸ್ಯೆಯಾದಾಗ ಆಸ್ಪತ್ರೆಗೆ ಹೋಗಿ ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಅಪಘಾತ, ಸಾವಿನ ಸಂಖ್ಯೆ ಇಳಿಕೆ

ಇದೀಗ ಅಪಘಾತಗಳು ಹತೋಟಿಗೆ ಬಂದಿವೆ. ಎಕ್ಸ್‌ಪ್ರೆಸ್ ವೇನಲ್ಲಿ ಮೇ ತಿಂಗಳಲ್ಲಿ 29 ಮಂದಿ, ಜೂನ್–28, ಜುಲೈ–8 ಹಾಗೂ ಕಳೆದ ತಿಂಗಳು ಆಗಸ್ಟ್‌ನಲ್ಲಿ 6 ಮಂದಿ ಅಪಘಾತಕ್ಕೀಡಾಗಿ ಸಾವನ್ನಪ್ಪಿದ್ದಾರೆ ಎಂದು ಅಲೋಕ್‌ಕುಮಾರ್ ತಿಳಿಸಿದ್ದಾರೆ. ಇದಕ್ಕೆ ಕಾರಣವಾದ ಪೊಲೀಸ್ ಸಿಬ್ಬಂದಿಗೆ ಅವರು ಅಭಿನಂದನೆ ತಿಳಿಸಿದ್ದಾರೆ.

ದಂಡ ಕ್ರಮ ಮುಂದುವರಿಕೆ: ಇನ್ನೂ ಹೆದ್ದಾರಿಯಲ್ಲಿ ವೇಗಕ್ಕೆ ಗಂಟೆಗೆ 100 ಕಿ.ಮೀ. ಮಿತಿ ಹೇರಲಾಗಿದ್ದು, ಕೆಲವು ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿತ್ತು. ಜೊತೆಗೆ ವೇಗದ ಮಿತಿ ಉಲ್ಲಂಘನೆ ಸೇರಿದಂತೆ ಸಂಚಾರ ನಿಯಮ ಮೀರುವ ವಾಹನ ಸವಾರರಿಂದ ದಂಡ ವಸೂಲಾತಿ ಕ್ರಮ ಮುಂದುವರಿದಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ಸಾವಿನ ಸಂಖ್ಯೆ ವಿಚಾರ ಪಾರ್ಲಿಮೆಂಟ್‌ನಲ್ಲೂ ಸದ್ದು ಮಾಡಿತ್ತು. ಸಂಸದರಾದ ಸುಮಲತಾ ಮತ್ತು ಪ್ರಜ್ವಲ್ ದೇವರಾಜ್ ಅವರು ಕೇಳಿದ್ದ ಪ್ರಶ್ನೆಗೆ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಅಪಘಾತ ಮತ್ತು ಕೈಗೊಂಡ ಕ್ರಮಗಳ ಕುರಿತು ವಿವರಿಸಿದ್ದರು.

24 ಕಡೆ ಸ್ಕೈವಾಕ್: ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತ, ಸಾವಿನ ಸಂಖ್ಯೆ ನಿಯಂತ್ರಣಕ್ಕೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರಸ್ತೆ ದಾಟುವ ಸಾರ್ವಜನಿಕರ ಅನುಕೂಲಕ್ಕಾಗಿ ಸಂಭವನೀಯ ಅಪಘಾತ ಸ್ಥಳದಲ್ಲಿ ಸ್ಕೈವಾಕ್ ನಿರ್ಮಿಸಲು ಯೋಜನೆ ರೂಪಿಸಿದೆ. ಎಕ್ಸ್‌ಪ್ರೆಸ್‌ವೇಯಲ್ಲಿ ಹೆದ್ದಾರಿ ಪ್ರಾಧಿಕಾರ ಒಟ್ಟು 24 ಕಡೆಗಳಲ್ಲಿ ಸ್ಕೈವಾಕ್ ನಿರ್ಮಾಣ ಮಾಡುವ ಚಿಂತನೆ ನಡೆದಿದೆ. ಮುಂದಿನ ಒಂದು ವರ್ಷಕ್ಕೆ ಈ ಯೋಜನೆ ಪೂರ್ಣಗೊಳಿಸುವ ಗುರಿ ಹೊಂದಿದೆ.

ಗ್ರಾಮಸ್ಥರಿಂದ ಪ್ರತಿಭಟನೆ

ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ನೂರಾರು ಗ್ರಾಮಸ್ಥರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಸರಗೂರು ಪಿಎಸ್‌ಐ ನಂದೀಶ್ ಕುಮಾರ್ ನೇತೃತ್ವದಲ್ಲಿ ಪೊಲೀಸರು ಸೂಕ್ತ ಬಂದೋಬಸ್ತ್ ಮಾಡಿದ್ದರು. ಆರ್‌ಎಫ್‌ಓ ಮಧು ದೇವಯ್ಯ, ಸಿಬ್ಬಂದಿಗಳಾದ ಅಭಿಲಾಷ್, ಅವಿನಾಶ್ ಹಾಜರಿದ್ದರು.

ಸರ್ಕಾರದ ಪರಿಹಾರ: ಇದಕ್ಕೂ ಮುನ್ನ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅವರು ಸರ್ಕಾರದ 15 ಲಕ್ಷ ರೂ. ಪರಿಹಾರದ ಪೈಕಿ ಮೊದಲ ಹಂತದಲ್ಲಿ 5 ಲಕ್ಷ ರೂ.ಗಳನ್ನು ಮೃತರ ಕುಟುಂಬಕ್ಕೆ ಹಸ್ತಾಂತರಿಸಿದರು. ಅಲ್ಲದೆ ಮೃತ ಸಿದ್ದರಾಜನಾಯಕ ಅವರ ಪತ್ನಿಗೆ 5 ವರ್ಷದವರಿಗೆ ತಿಂಗಳಿಗೆ 4 ಸಾವಿರ ರೂ. ಮಾಸಾಶನ ಕಲ್ಪಿಸುವುದಾಗಿ ಇದೇ ವೇಳೆ ಭರವಸೆ ನೀಡಿದರು.

ಮಂಡ್ಯದಲ್ಲಿ ಮುಂದುವರೆದ ಪ್ರತಿಭಟನೆ

ಕರ್ನಾಟಕ ಜನ ಸೈನ್ಯ, ಕರವೇ ಗಜ ಸೇನೆ, ಕನ್ನಡ ರಕ್ಷಣಾ ಸೇನೆ ಸೇರಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಬೈಕ್ ಮೂಲಕ ಆಗಮಿಸಿ ಹಿತ ರಕ್ಷಣಾ ಸಮಿತಿಯ ಹೋರಾಟ ಬೆಂಬಲಿಸಿದರು. ಕಾವೇರಿ ಕೊಳ್ಳದ ಜಲಾಶಯಗಳಿಂದ ನೀರು ಬಿಟ್ಟಿರುವುದನ್ನು ತಕ್ಷಣ ನಿಲ್ಲಿಸಬೇಕು. ರೈತರ ಜೀವನದ ಜೊತೆ ಸರ್ಕಾರ ಚೆಲ್ಲಾಟ ವಾಡಬಾರದು. ಕನ್ನಡ ನಾಡಿನ ಶಾಸಕ, ಸಂಸದರು ರೈತರ ಹಿತ ಕಾಯಲು ಮುಂದಾಗಬೇಕು ಎಂದು ಒತ್ತಾಯಿಸಿದರು. ಕನ್ನಡ ಚಿತ್ರರಂಗದ ನಟ ನಟಿಯರು ಕಾವೇರಿ ಹೋರಾಟದಲ್ಲಿ ಭಾಗಿಯಾಗದಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ತಕ್ಷಣ ಕನ್ನಡ ಚಿತ್ರರಂಗ ಹೋರಾಟಕ್ಕಿಳಿಯಬೇಕು. ಸರ್ವೋಚ್ಚ ನ್ಯಾಯಾಲಯಕ್ಕೆ ಕಾವೇರಿ ಕಣಿವೆ ಜಲಾಶಯಗಳ ವಾಸ್ತವ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಲು ಸರ್ಕಾರ ಮುಂದಾಗಬೇಕು. ಸಂಕಷ್ಟ ಸೂತ್ರ ಪಾಲನೆ ಬಗ್ಗೆ ತಿಳಿಸಬೇಕು. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಪರಿಹಾರ ರೂಪಿಸಬೇಕು ಎಂದು ಆಗ್ರಹಿಸಿದರು. ಕನ್ನಡ ಪರ ಸಂಘಟನೆ ಮುಖಂಡರಾದ ಯೋಗೇಶ್‌ಗೌಡ, ಕನ್ನಡ ಪ್ರಕಾಶ್, ಕರವೇ ಯುವ ಅಧ್ಯಕ್ಷ ಸುನೀಲ್, ಹರೀಶ್, ಎಂ.ಬಿ.ನಾಗಣ್ಣಗೌಡ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಶ್ರೀ ಮಾರುತಿ ರಿಯಲ್ ಎಸ್ಟೇಟ್
ಸೈಟುಗಳನ್ನು ಕೊಳ್ಳಲು / ಮಾರಲು
MUDA & MUDA Approved.
ಸಂಪರ್ಕಿಸಿ:
Mob: 9538412881

ಸೈಟುಗಳು ಮಾರಾಟಕ್ಕಿದೆ
40x60 ಅಳತೆಯ DTCP 'A' ಖಾತೆಯುಳ್ಳ ಸೊಸೈಟಿ ಸೈಟು ಮಾರಾಟಕ್ಕಿದೆ. 23 ಲಕ್ಷಗಳು WIF, ನುಜುಂಡೇಶ್ವರ ನಗರ, TVS ಫ್ಯಾಕ್ಟರಿ ಹತ್ತಿರ, ಮೈಸೂರು. 20x30 ಅಳತೆಯ KHB, N/F ಸೈಟು ಮಾರಾಟಕ್ಕಿದೆ. 8 ಲಕ್ಷದ 75 ಸಾವಿರಗಳು. ಇಲವಾಲದ ಹತ್ತಿರ, ಮೈಸೂರು.
Mob: 9742198093

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www.imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಜಾಗ ಬಾಡಿಗೆಗಿದೆ
ಗ್ರೌಂಡ್ ಫ್ಲೋರ್ 1550 ಚದರ ಅಡಿ. ಫಸ್ಟ್ ಫ್ಲೋರ್ 1750 ಚದರ ಅಡಿ. ನಂ. 8184, ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು
Mob: 9900197397

ಆರ್ಕೆಸ್ಟ್ರಾ
ಕಾರ್ಯಕ್ರಮಕ್ಕಾಗಿ ಸಂಪರ್ಕಿಸಿ:

P.R.K. ಮ್ಯೂಸಿಕ್ ಆರ್ಕೆಸ್ಟ್ರಾ, ಮೈಸೂರು
9902639553

ಶ್ರೀ ಗೌರಿಶಂಕರ ಟ್ರಾವೆಲ್ಸ್
24–9–2023 (1 ದಿನ): ಘಾಟಿ ಸುಬ್ರಮಣ್ಯ, ಈಶಾ ಫೌಂಡೇಷನ್.
30–9–2023 (13 ದಿನ): ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್‌ನಾಥ್, ದೆಹಲಿ.
28–10–2023 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬಾಬಾ ಬೈದ್ಯನಾಥ್.
ವಿಮಾನ / ವಿಸಿ ಬಸ್ / ಊಟ / ರೂಂ.
Mob: 9620002114

HOUSE FOR LEASE
Newly Built 2BHK Independent House, Fully Furnished with Solar Ground Floor Only @ Lalithadri Nagar, Near Ring Road Behind Indian Oil Petrol Bunk
9964414484

40×60 SITE FOR SALE
MUDA APPROVED
East facing
Rajeev Nagar 2nd Stage Near Gupta Store, MYSORE
Rs. 1 Crore
Call : 9845286583

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

5 Gunta Farm Land FOR SALE
@ Rs. 60 Lakhs Behind Chamundi Hill. 2 KMS From Lalithadripura
9538583377

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಸಂಬಳ 15000 ದಿಂದ 20000 (ESI, PF ಸೌಲಭ್ಯ ಇರುತ್ತದೆ.
8050699742,7760043596

ಸುವರ್ಣ ಯಾತ್ರ
1) ಮಧ್ಯಪ್ರದೇಶ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 4 ದಿನಗಳು 8/09/23
2) ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು 21/09/23
3) 2 ಜ್ಯೋತಿರ್ಲಿಂಗ ಸೇರಿ ಕಾಶಿ ಪ್ರವಾಸ 7 ದಿನಗಳು 07/10/23
4) ಭೂತಾನ್ ಪ್ರವಾಸ 6 ದಿನಗಳು 12/10/23
9008381022
9019462508

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

40X73 EAST FACE SITE
@ Rs.94 Lakhs
MUDA Approved Layout Next to Vijayanagar, 4th Stage, 12 Kms from Mysore City Center.
9538583377

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಹಿರಿಯರನ್ನು ನೋಡಿಕೊಂಡು ಮತ್ತು ಅವರಿಗೆ ಅಡುಗೆ ಮಾಡುವವರು ಮನೆಯಂತೆಯೇ ನೋಡಿಕೊಳ್ಳುವವರು ಮತ್ತು ಮನೆಯಲ್ಲಿ ಉಳಿದುಕೊಳ್ಳುವವರು ಬೇಕಾಗಿದ್ದಾರೆ. ಸಂಬಳ: 8000 ಊಟ, ವಸತಿ ಸೌಲಭ್ಯವಿದೆ.
7411492591

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Arikethana Road, kuvempunagar, Mysuru
MYSURU 9611028523 MANGALORE 9343142258

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

ಮನೆಯನ್ನು ಕಟ್ಟಿಕೊಡಲಾಗುವುದು
ಒಂದು ಚದರಕ್ಕೆ ರೂ. 1,70,000 ನಂತೆ ಎಲ್ಲಾ ನಗರ (ಸಿಟಿ) ಹಾಗೂ ಎಲ್ಲಾ ಹಳ್ಳಿಗಳಲ್ಲಿ ಕಟ್ಟಿಕೊಡಲಾಗುವುದು.
Mob: 9620377533

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ.
ಸಂಪರ್ಕಿಸಿ:
9449380528, 7026498386

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ : 10th / PUC (ಪುರುಷರು ಮತ್ತು ಮಹಿಳೆಯರು) (30 yrs to 45 yrs).
2) ಗಾರ್ಡನ್ ಕೆಲಸಕ್ಕೆ : ಮಹಿಳೆಯರು (ಮೇಟಗಳ್ಳಿ ಮತ್ತು ಸಿದ್ಧಾರ್ಥನಗರ).
ESI, PF ಸೌಲಭ್ಯವಿರುತ್ತದೆ.
9880419847, 9739166772

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
Female Receptionist for NATURAL HAIR FIXING CENTRE, MYSURU.
Mob: 76250-26662

AFFIDAVIT
I Ruwaida, D/o Khader Moula, aged about 21 years R/at 121, 3rd Cross, 2nd Stage, Tippu Park Udayagiri, Mysuru, declared that my name has been changed from Ruwaida to Haniya Kulsum from 30-8-2023 vide affidavit Syed Ameer, Notary, Mysuru (in all documents is required to effect the same).
Sd/- Haniya Kulsum

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409
ಮೈಸೂರು ಅಗ್ರಹಾರ.
9449774835
ಚಾಮರಾಜನಗರ

FOR RENT
Industrial shed for rent, suitable for warehouse factory and office 1200 sq.feet RCC building. Location: Scanray Technology, Hebbal, Mysore.
Mob: 9845033206

ಬೇಕಾಗಿದೆ
ಹೆಸರಾಂತ ಕೊರಿಯರ್ ಸಂಸ್ಥೆಯಲ್ಲಿ ಪಾರ್ಸೆಲ್ ಡೆಲಿವರಿ ಮಾಡಲು ಕ್ಲೋಸಿಂಗ್ ಬಾಡಿ ಹೊಂದಿರುವ TATA-ACE ವಾಹನ ಹೂಟಗಳ್ಳಿ ಶಾಖೆಗೆ ಬೇಕಾಗಿದೆ. ಸಂಪರ್ಕಿಸಿ:
Mob: 9449870898

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಪುರುಷರು/ ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 12,000/–
7899754149

ಬೇಕಾಗಿದ್ದಾರೆ
ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸಕ್ಕೆ ಹೌಸ್ ಕೀಪಿಂಗ್ ಮಹಿಳೆಯರು ಬೇಕಾಗಿದ್ದಾರೆ
ಜೆ.ಪಿ ನಗರ, ಮೈಸೂರು
ಸಮಯ: ಬೆಳಗ್ಗೆ 8.30 ರಿಂದ ಸಂಜೆ 5.30ರವರೆಗೆ, ಸಂಪರ್ಕಿಸಿ
9686225522

ಬೇಕಾಗಿದ್ದಾರೆ
YIURD® ಚಾಮರಾಜನಗರ ವಿಶೇಷ ಚೇತನ (ವಿಕಲಚೇತನ)ರೊಂದಿಗೆ ಕಾರ್ಯ ನಿರ್ವಹಿಸಲು ಕ್ಷೇತ್ರ ಕಾರ್ಯಕರ್ತರು ಬೇಕಾಗಿದ್ದಾರೆ.
ಸ್ಥಳ: ಚಾಮರಾಜನಗರ ಮತ್ತು ಮೈಸೂರು. ಸಂಪರ್ಕಿಸಿ
08226356613 | 7760022021

ಸೈಟು ಮಾರಾಟಕ್ಕಿದೆ
ನಿ.ಸಂಖ್ಯೆ 19, ಅಳತೆ 30x40, ವಿಜಯನಗರ 3ನೇ ಹಂತ, 'ಎಫ್' ಬ್ಲಾಕ್, ರಿಂಗ್ ರಸ್ತೆ ಹತ್ತಿರ, ಹಿನಕಲ್ ಮೈಸೂರು , ಸಂಪರ್ಕಿಸಿ
9448601012 | 9880715111

ಬೇಕಾಗಿದ್ದಾರೆ
ಮೈಸೂರು ಸುತ್ತಮುತ್ತ ಕೆಲಸ ಮಾಡಲು
1. ಸೆಕ್ಯೂರಿಟಿ ಸೂಪರ್‌ವೈಸರ್
2. ಸೆಕ್ಯೂರಿಟಿ ಗಾರ್ಡ್‌ಗಳು
3. ಹೌಸ್‌ಕೀಪರ್ (ಮಹಿಳೆಯರು ಮಾತ್ರ)
4. ಫೀಲ್ಡ್ ಸೂಪರ್‌ವೈಸರ್ (ಸೆಕ್ಯೂರಿಟಿ)
5. ಫೀಲ್ಡ್ ಸೂಪರ್‌ವೈಸರ್ (ಹೌಸ್‌ಕೀಪಿಂಗ್)
ಮೇಲ್ಕಂಡ ಸಿಬ್ಬಂದಿಗಳು ಸಂಪರ್ಕಿಸಿ.
9686422400 | 9242406261

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ: ITI, 8th to 2nd PUC ವರೆಗೆ. ಊಟ, ವಸತಿ, ESI, PF. ಮಹಿಳೆಯರಿಗೆ ವಾಹನ ಸೌಲಭ್ಯವಿರುತ್ತದೆ. ಸಂಬಳ 11,400 ರಿಂದ 18000 ಇರುತ್ತದೆ.
8951869646, 9902645646

ಮನೆಯಿಂದಲೇ ಕೆಲಸ
ಪಾರ್ಟ್ ಟೈಂ/ಫುಲ್ ಟೈಂ ಕನ್ನಡ, ಇಂಗ್ಲೀಷ್ ಬರವಣಿಗೆ ಮೊಬೈಲ್ ಟೈಪಿಂಗ್ ಹಾಗೂ ಮೆಹಂದಿ ಪ್ಯಾಕಿಂಗ್ ಕೆಲಸ.
ಗಳಿಸಿ 18000/– ದಿಂದ 35000/–
7022530827

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನಲ್ಲಿ ಸೆಕ್ಯೂರಿಟಿ ಗಾರ್ಡ್ (ಪುರುಷರು) ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಇದ್ದವರಿಗೆ ಆದ್ಯತೆ. ಪೆಟ್ರೋಲ್ ಹಾಗೂ ಊಟದ ವ್ಯವಸ್ಥೆ ಮಾಡಿಕೊಡಲಾಗುವುದು. ಆಸಕ್ತಿ ಇದ್ದವರು ಸಂಪರ್ಕಿಸಿ:
+91 83100 98788

SITE FOR SALE
30/40 N/F MUDA Allotment Site for sale JP NAGARA Mysore.
20/30 MUDA SITE SRIRAMPURA Mysore. Near Bramaramba choultry.
PH: +91 99004 64111

ತಕ್ಷಣ ಬೇಕಾಗಿದ್ದಾರೆ
ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
ವಯೋಮಿತಿ : 18 ರಿಂದ 35ರ ಒಳಗೆ
ವಿದ್ಯಾರ್ಹತೆ: SSLC ಮೇಲ್ಪಟ್ಟು
ಉಚಿತ : ತಿಂಡಿ, ಊಟ
ವೇತನ: 16000 (ESI+PF) & bonus
ಸ್ಥಳ: ಆಲನಹಳ್ಳಿ, Bus Stop Mysore
9845131848
9035269781,9686120629

ನೇಮಕಾತಿ
ಖಾಲಿ ಹುದ್ದೆಗಳು
ಡಾಟಾ ಎಂಟ್ರಿ ಆಪರೇಟರ್ಸ್
ಸಂದರ್ಶನ ಸಮಯ:
ಬೆಳಗ್ಗೆ 10.00 ರಿಂದ ಸಂಜೆ 3.00 ಹುದ್ದೆ–100
ವಿಠಲ್ ರೆಕಾರ್ಡ್ಸ್ ಪ್ರೈ.ಲಿ.
#42, ಜೆಸಿಕೆ ಇಂಡಸ್ಟ್ರಿಯಲ್ ಪಾರ್ಕ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೇಟಗಳ್ಳಿ, ಮೈಸೂರು
hr@centuryvitalrecords.com
0821-2332005,8867064586

ಸ್ಟುಡಿಯೋ ಕೆಲಸಕ್ಕೆ ಬೇಕಾಗಿದ್ದಾರೆ
ಕಂಪ್ಯೂಟರ್ ತಿಳಿದಿರಬೇಕು
ವಿಳಾಸ: ರಾಜರಾಜೇಶ್ವರಿ ನಗರ, ದಟ್ಟಗಳ್ಳಿ, ಮೈಸೂರು
9902161666

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ 3 ಪಾಳಿ (Shift) ಯಲ್ಲಿ ಕೆಲಸ ಮಾಡಲು ಅನುಭವವಿರುವ ವಿದ್ಯಾವಂತ 40 ವರ್ಷ ವಯಸ್ಸಿನ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 16900 ರೂ.ಗಳು (ESI & PF) ವಾರದ ರಜೆ 8hrs Duty ಕ್ಯಾಂಟೀನ್ ವ್ಯವಸ್ಥೆ ಇರುತ್ತದೆ.
9731976148

ಶಾದಿಗುರೂಜಿ.ಕಾಂ
ವಧು–ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ ಫೋಟೋ ಬಯೋಡೇಟಾ ವಾಟ್ಸಪ್ ಮಾಡಿರಿ
6361740552

ವಧು ಬೇಕಾಗಿದೆ
39 ವರ್ಷ 5.8 ಎತ್ತರ Diploma ಸ್ವಂತ ಉದ್ಯಮ ಹೊಂದಿರುವ ವಾರ್ಷಿಕ ವರಮಾನ 40 ಲಕ್ಷಕ್ಕೂ ಮೇಲ್ಪಟ್ಟು ಇರುವ ವಿಚ್ಛೇದಿತ ಒಕ್ಕಲಿಗ ಗೌಡ ವರನಿಗೆ ಯಾವುದೇ ಹಿಂದೂ ಜಾತಿಯ ವಿದ್ಯಾವಂತ ವಧು ಬೇಕಾಗಿದೆ.
7259351797

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು ರೋಗಿಗಳನ್ನು ನೋಡಿಕೊಳ್ಳಲು ಗಂಡಸರು, ಹೆಂಗಸರು ಬೇಕಾಗಿದ್ದಾರೆ
9880102700

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ Showroom, Office, Companys ಗಳಿಗೆ 7th, SSLC, PUC, ITI, Diploma, Any Degree Pass/Fail ಆದವರಿಗೆ Helper, Packing, Production Line, Maintenance Store Dept., Billing, Receptionist, Cashier ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 15,000 ರಿಂದ 38,000/- (ESI+PF+OT).
9739857142
9035143190

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಕಂಪನಿಗಳಿಗೆ, ಆಫೀಸ್‌ಗಳಿಗೆ ಮತ್ತು ಶೋರೂಂಗಳಿಗೆ ಕೆಲಸ ಮಾಡಲು 10th, PUC, ITI, Diploma, B.Com, BBA, MSC, MCA, (Any Degree) Pass/Fail ಆದ ಯುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ Quality, helper, Manufacturing CNC & VMC Machine Operator & Front Office Typing Data Entry, Sales Manager, Cashier, Telephone Attender ಇತ್ಯಾದಿ ಕೆಲಸಗಳಿಗೆ ಸಂಬಳ 14,500 ರಿಂದ 39,000/- (ESI+PF+OT) ಸೇರಿ.
6364103418, 9036548905

For Sale
1) Future Commercial Sites 60Ft Road Near Defence Apartment attch Brahmins Layout E blk attch HD Kote Road
2) 30x40 Sky top layout yelwala
3) 40x60 Commercial Hootagalli
4) 40x55 East Saraswathi Puram
Prakruthi Properties
95386 90359
90359 90359

ಬೇಕಾಗಿದ್ದಾರೆ
ಸ್ಕಿಲ್ ಪ್ರೊ ಸಲ್ಯೂಷನ್ಸ್
20 ಜನ ಹುಡುಗು & ಹುಡುಗಿಯರು ಬೇಕಾಗಿದ್ದಾರೆ ದಿನಕ್ಕೆ 300 ರಿಂದ 3000 ಸಂಪಾದಿಸಬಹುದು ದ್ವಿಚಕ್ರ ವಾಹನ & ಸ್ಮಾರ್ಟ್ ಫೋನ್ ಹೊಂದಿರಬೇಕು. ಮೈಸೂರು
9880604416
9008604416

ಮನೆ ಮತ್ತು ಸೈಟು ಮಾರಾಟಕ್ಕಿದೆ
ಪೂರ್ವ ದಿಕ್ಕು, 3 ಅಂತಸ್ತಿನ ಮನೆ ಅಳತೆ: 35x15 ತಿಂಗಳಿಗೆ 24 ಸಾವಿರ ಬಾಡಿಗೆ ಬರುತ್ತದೆ. ಬೆಲೆ 65/–ಲಕ್ಷ ಸ್ಥಳ : NIE ಕಾಲೇಜು ಹತ್ತಿರ, ವಿದ್ಯಾರಣ್ಯಪುರಂ, ಮೈಸೂರು
30x40 ಸೈಟು ಮಹಾಲಕ್ಷ್ಮಿ ಲೇಔಟ್ 3ನೇ ಹಂತ, ಮೈಸೂರು.
7204086662

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಕಾಲೇಜಿಗೆ (CIPET) ಕಂಪ್ಯೂಟರ್ ಜ್ಞಾನವುಳ್ಳ ಪುರುಷ & ಮಹಿಳೆ ಅಭ್ಯರ್ಥಿಗಳು ಬೇಕಾಗಿದ್ದಾರೆ. ಡಿಗ್ರಿ ಪಾಸ್/ಫೇಲ್ ITI Diploma ಸಂಪರ್ಕಿಸಿ:
9590268610
9986501873

ಕೆಲಸಕ್ಕೆ ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ.
Salary: 13,000-21,000 + ESI & PF, ವಿದ್ಯಾರ್ಹತೆ: 10th, PUC, ITI, Diploma And Any Degree
9035734821

ತಕ್ಷಣ ಬೇಕಾಗಿದ್ದಾರೆ
ಕೆ.ಆರ್.ಎಸ್. ರಸ್ತೆ ಮೇಟಗಳ್ಳಿ, ಹೆಬ್ಬಾಳು ಏರಿಯಾದಲ್ಲಿ ಕೆಲಸ Fire Man ಬೇಕಾಗಿದ್ದಾರೆ.
ವಯೋಮಿತಿ: 45 ವರ್ಷದೊಳಗಿರಬೇಕು
ಸಂಬಳ: 22000/- (8Hrs, 26 Days) PF ಸೌಲಭ್ಯವಿರುತ್ತದೆ.
9620777819
9880727819

100% TEAK WOOD FACTORY FINISH DOORS
@ DEPOT RATES

10 YEARS WARRANTY
www.ssbuildmart.com
9731591267
9901291267

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕಾವೇರಿ ನದಿ ತೀರದಲ್ಲಿ ಕಾವೇರಿ ಹೋರಾಟಕ್ಕೆ ಧುಮುಕಿದ ರೈತರ ಮಕ್ಕಳು



ಶ್ರೀರಂಗಪಟ್ಟಣ, ಸೆ.3– ತಮಿಳುನಾಡಿಗೆ ಹರಿಸಲಾಗುತ್ತಿರುವ ಕಾವೇರಿ ನೀರನ್ನು ತಕ್ಷಣವೇ ನಿಲ್ಲಿಸುವಂತೆ ಆಗ್ರಹಿಸಿ ಕಾವೇರಿ ನದಿ ತೀರದಲ್ಲಿ ಕಾವೇರಿ ಹೋರಾಟಕ್ಕೆ ಧುಮುಕಿದ ರೈತ ಪೀಳಿಗೆಯ ಚಿಣ್ಣರು, ರೈತರ ಮಕ್ಕಳು ಮೊಮ್ಮಕ್ಕಳೊಂದಿಗೆ ಪ್ರತಿಭಟನೆ ನಡೆಸಿದರು.

ಭೂಮಿ ತಾಯಿ ಹೋರಾಟ ಸಮಿತಿ ವತಿಯಿಂದ ರೈತ ಮುಖಂಡ ಕೆ.ಎಸ್. ನಂಜುಂಡೇಗೌಡ ಹಾಗೂ ಸಮಿತಿ ಅಧ್ಯಕ್ಷ ಬಲ್ಲೇನಹಳ್ಳಿ ಕೃಷ್ಣೇಗೌಡ ನೇತೃತ್ವದಲ್ಲಿ ಶ್ರೀರಂಗಪಟ್ಟಣ ಸ್ನಾನಘಟ್ಟ ಬಳಿಯ ಕಾವೇರಿ ನದಿ ತೀರದಲ್ಲಿ ರೈತರು ಹಾಗೂ ಚಿಕ್ಕಚಿಕ್ಕ ಮಕ್ಕಳು ನಾಮಪತ್ರಗಳ ಹಿಡಿದು, ನಮ್ಮ ನೀರು ನಮ್ಮ ಕಾವೇರಿ ಎಂದು ಘೋಷಣೆಗಳ ಫಲಕ ಕೈಯಲ್ಲಿಡಿದುಕೊಂಡು ಪ್ರತಿಭಟಿಸಿದರು.

ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಪ್ರಮಾಣ ಕಡಿಮೆಯಿದ್ದು, ಅಣೆಕಟ್ಟೆಯಲ್ಲಿ ನೀರು ಭರ್ತಿಯಾಗಿಲ್ಲ. ಈಗಾಗಲೇ ಬೆಳೆದಿರುವ ಬೆಳೆಗಳಿಗೆ ನೀರು ಪೂರೈಸಲಾಗುತ್ತಿಲ್ಲ. ಜೊತೆಗೆ ಕುಡಿಯುವ ನೀರಿಗೂ ಹಾಹಾಕಾರ ಶುರುವಾಗಲಿದ್ದು, ನಮ್ಮ ಅಜ್ಜ–ತಂದೆಯವರಿಗೆ ನೀಡಿದ ಕಾವೇರಿ ನೀರನ್ನು ನಮಗೂ ಉಳಿಸಬೇಕು. ಸರ್ಕಾರ ಮೊದಲು ನಮ್ಮ ರಾಜ್ಯದ ಹಿತ ಕಾಪಾಡಬೇಕು ಎಂಬ ನಾಮಫಲಕಗಳ ಬೋರ್ಡ್‌ಗಳ ಹಿಡಿದು ಘೋಷಣೆ ಕೂಗಿದರು.

ಕಾವೇರಿ ನೀರು ಕುಡಿಯುತ್ತಿರುವ ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ಪ್ರತಿಯೊಬ್ಬರೂ ಬೀದಿಗಿಳಿದು ನೀರನ್ನು ರಕ್ಷಿಸಿಕೊಳ್ಳಬೇಕೆಂದು ಮಕ್ಕಳು ದೊಡ್ಡವರಿಗೆ ಕಿವಿಮಾತು ಹೇಳುವ ಮೂಲಕ, ನಮ್ಮ ಪೂರ್ವಿಕರ ನೀರು ನಮಗೆ ನೀರು ಉಳಿಸಿ ಎಂದು ಕಿವಿಮಾತು ಹೇಳಿದರು.

ಬಳಿಕ ತಾಲೂಕು ಕಚೇರಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸಿ, ಸರ್ಕಾರದ ನಡೆಯನ್ನು ಖಂಡಿಸಿದರು. ವಿವಿಧ ಗ್ರಾಮಗಳ ನೂರಾರು ರೈತರು, ಮಕ್ಕಳು ಭಾಗವಹಿಸಿದ್ದರು.

ಕೆಆರ್‌ಎಸ್‌ನಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ನಾಲ್ಕನೇ ದಿನಕ್ಕೆ

ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವಕ್ಕೆ ವಿವಿಧ ಕನ್ನಡ ಪರ ಸಂಘಟನೆಗಳು ಸಾಥ್



ಶ್ರೀರಂಗಪಟ್ಟಣ, ಸೆ.3– ಎಷ್ಟೇ ಪ್ರತಿಭಟನೆ ಮಾಡುತ್ತಿದ್ದರೂ ಕಿವಿಗೆ ಹಾಕಿಕೊಳ್ಳದೆ ತಮಿಳುನಾಡಿಗೆ ನೀರು ಬಿಡುತ್ತಿರುವ ಸರ್ಕಾರದ ಕ್ರಮ ಖಂಡಿಸಿ ಕೆಆರ್‌ಎಸ್ ಬೃಂದಾವನದ ಬಳಿ ನಡೆಯುತ್ತಿರುವ ಹಗಲು ರಾತ್ರಿ ಧರಣಿ ನಾಲ್ಕನೇ ದಿನಕ್ಕೆ ಕಾಲಿರಿಸಿದೆ.

ಮೈಸೂರು, ಮಂಡ್ಯ, ಬೆಂಗಳೂರು ಜಿಲ್ಲೆಗಳಿಂದ ಆಗಮಿಸಿದ ರೈತರು ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆಗಳ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ನಡೆಯುತ್ತಿರುವ ಧರಣಿ ಪ್ರತಿಭಟನೆ ರಾಜ್ಯಮಟ್ಟದ ರೈತ ಸಂಘದ ಮುಖಂಡರು ಸಾಥ್ ನೀಡಿ ಭಾಗವಹಿಸಿದ್ದರು. ಹುಬ್ಬಳ್ಳಿ ದಾರವಾಡ ಜಿಲ್ಲೆಗಳ ರೈತ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ವೇದಿಕೆಯಲ್ಲಿ ಮಾತನಾಡಿ, ಸರ್ಕಾರ ತಮಿಳುನಾಡಿನ ಜನರನ್ನು ಓಲೈಸಿಕೊಳ್ಳಲು ಕರ್ನಾಟಕದ ನೀರು ಕೊಡುತ್ತಿದೆ. ಕೆಆರ್‌ಎಸ್ ಜಲಾಶಯ ಭರ್ತಿಯಾಗದೇ ಇದ್ದರೂ ತಮಿಳುನಾಡಿಗೆ ನೀರು ಕೊಡುವ ಅವಶ್ಯಕತೆ ಇತ್ತಾ. ರಾಜ್ಯದ ಜನರ ಹಿತ ಕಾಯುವ ಬದಲು ತಮಿಳುನಾಡಿನ ಜನರ ಪರವಾಗಿರುವುದು ಇದರ ಉದ್ದೇಶವಾದರೂ ಏನಾಗಿದೆ. ಕೂಡಲೆ ಸರ್ಕಾರ ನೀರು ನಿಲ್ಲಿಸಿ ಜನರ ಕ್ಷಮೆ ಕೇಳಬೇಕು. ರೈತರ ಬೆಳೆಗಳಿಗೆ ಹಾಗೂ ಕುಡಿಯಲು ಜನರಿಗೆ ನೀರಿನ ಅವಶ್ಯವಿದ್ದರೂ ನೀರು ಬಿಡುತ್ತಿರುವ ಸರ್ಕಾರಕ್ಕೆ ಧಿಕ್ಕಾರ ಎಂದರು.

ಸಂಘಟನೆಗಳ ಸಾಥ್: ವಿವಿಧ ಕನ್ನಡ ಪರ ಸಂಘಟನೆಗಳು ಬೆಂಗಳೂರು, ಮಂಡ್ಯ ಹಾಗೂ ಮೈಸೂರಿನಿಂದ ಆಗಮಿಸಿ ರೈತರೊಂದಿಗೆ ಕುಳಿತು ಪ್ರತಿಭಟನೆ ನಡೆಸಿದವು. ಮಂಡ್ಯ ತಾಲೂಕು ಕರವೇ ಅಧ್ಯಕ್ಷ ಅಶೋಕ್ ನೇತೃತ್ವದಲ್ಲಿ ಆಟೋ ಹಾಗೂ ಬೈಕ್ ಮೂಲಕ ಆಗಮಿಸಿ ಶಾಸಕ ಪುಟ್ಟಣ್ಣಯ್ಯ ಅವರಿಗೆ ಸಾಥ್ ನೀಡಿದರು.

ಬೆಂಗಳೂರಿನಿಂದ ಕನ್ನಡಿಗರ ರಕ್ಷಣಾ ವೇದಿಕೆ ಕಾರ್ಯಕರ್ತರು ಬೃಂದಾವನ ಒಳಗೆ ಹೋಗಲು ಪ್ರಯತ್ನಿಸಿದರು. ನಂತರ ಅವರನ್ನು ಪೊಲೀಸರು ತಡೆದು ವಾಪಸ್ ಧರಣಿ ಸ್ಥಳಕ್ಕೆ ಕರೆತಂದರು. ನಂತರ ವೇದಿಕೆ ಬಳಿ ಪ್ರತಿಭಟನೆ ಧರಣಿ ಮುಂದುವರೆಯಿತು. ನೂರಾರು ಕಾರ್ಯಕರ್ತರು ಭಾಗವಹಿಸಿದ್ದು, ಅಷ್ಟೆ ಎಚ್ಚರಿಕೆಯಿಂದ ಪೊಲೀಸರು ಬಿಗಿ ಭದ್ರತೆಯಲ್ಲಿದ್ದರು.

ಗಾಣದಲ್ಲಿ ಎಣ್ಣೆ ತೆಗೆದು ದೇವರಿಗೆ ಹರಕೆ ಒಪ್ಪಿಸಿದ ಶಾಸಕ

ಕಿಕ್ಕೇರಿ, ಸೆ.3– ಮತದಾರರ ದೇವರಾಗಿದ್ದು, ಮತದಾರರು ತನ್ನ ಗೆಲುವಿಗೆ ಭಗವಂತನಲ್ಲಿ ಪ್ರಾರ್ಥಿಸಿದ್ದ ಫಲವಾಗಿ ತಾನಿಂದು ಶಾಸಕನಾಗಿ ತಮ್ಮ ಮುಂದೆ ಇರುವೆ ಎಂದು ಶಾಸಕ ಎಚ್.ಟಿ. ಮಂಜು ಹೇಳಿದರು.



ಹೋಬಳಿಯ ಸಾಸಲು ಕ್ಷೇತ್ರದ ಸೋಮೇಶ್ವರ, ಶಂಭುಲಿಂಗೇಶ್ವರ, ಕುದುರೆಮಂಡಮ್ಮ ದೇಗುಲಕ್ಕೆ ಭೇಟಿ ನೀಡಿ ಮಾತನಾಡಿ, ತನ್ನ ಗೆಲುವಿಗಾಗಿ ಶಕ್ತಿ, ಇಷ್ಟಾರ್ಥ ಸಿದ್ಧಿಯ ದೇವರಾದ ಗ್ರಾಮದಲ್ಲಿರುವ ಈ ಮೂವರು ದೇವರಲ್ಲಿ ಜೆಡಿಎಸ್ ಕಾರ್ಯಕರ್ತರು ಪ್ರಾರ್ಥಿಸಿದ್ದರು. ಈ ಫಲವಾಗಿ ಮತದಾರರ ರೂಪದಲ್ಲಿ ದೇವರು ತನಗೆ ವಿಧಾನಸಭೆಯಲ್ಲಿ ಗೆಲುವಿಗೆ ವರ ನೀಡಿದ್ದಾರೆ ಎಂದರು.

ಮತದಾರರ ದೇವರು, ಜೆಡಿಎಸ್ ಕಾರ್ಯಕರ್ತರ ಋಣ ತನ್ನ ಮೇಲಿದೆ. ಯಲಾದಹಳ್ಳಿ ಜೆಡಿಎಸ್ ಕಾರ್ಯಕರ್ತ ಮಹದೇವ್, ಮತ್ತು ಸಂಗಡಿಗರು ತಾನು ವಿಜೇತರಾದರೆ ದೇಗುಲದ ಬಳಿ ಇರುವ ಎಣ್ಣೆ ಗಾಣದಲ್ಲಿ ಎಳ್ಳೆಣ್ಣೆ ತೆಗೆದು ದೇವರಿಗೆ ಅರ್ಪಿಸುವುದಾಗಿ ಹರಕೆ ಹೊತ್ತಿದ್ದರು ಎಂದರು. ತಾನಿಂದು ಶಾಸಕನಾಗಿರುವೆ. ದೇವರ ಹರಕೆ ತೀರಿಸುವುದು ತನ್ನ ಕರ್ತವ್ಯವಾಗಿದೆ. ಖುದ್ದಾಗಿ ದೇವರಿಗೆ ಗಾಣದಲ್ಲಿ ಎಳ್ಳೆಣ್ಣೆ ತಯಾರಿಸಿ ಅರ್ಪಿಸುವೆ. ಸಕಾಲದಲ್ಲಿ ಮಳೆ ಇಲ್ಲದೆ ರೈತ ಕಂಗಾಲಾಗಿದ್ದಾನೆ. ಸಂತೃಪ್ತಿಯಾಗಿ ಮಳೆ ಬಿದ್ದು, ಉತ್ತಮ ಬೆಳೆಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುವೆ ಎಂದು ನುಡಿದರು.

ಜೆಡಿಎಸ್ ಕಾರ್ಯಕರ್ತರು ಗಾಣಕ್ಕೆ ಎಳ್ಳನ್ನು ಹಾಕಿ ಶಾಸಕರೊಂದಿಗೆ ಗಾಣವನ್ನು ಎಳೆದರು. ಬಂದ ಎಳ್ಳೆಣ್ಣೆಯನ್ನು ದೇವರಿಗೆ ಅರ್ಪಿಸಿದರು. ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಕಿರಣ್, ತಾ. ಅಧ್ಯಕ್ಷ ಜಾನಕೀರಾಮು, ಯಲಾದಹಳ್ಳಿ ಮಹದೇವ್, ಎಪಿಎಂಸಿ ಮಾಜಿ ಅಧ್ಯಕ್ಷ ಐನೋರಹಳ್ಳಿಮಲ್ಲೇಶ್, ತಾಪಂ ಮಾಜಿ ಸದಸ್ಯ ಕೃಷ್ಣೇಗೌಡ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಮಾಜಿ ಅಧ್ಯಕ್ಷ ಶೇಖರ್, ಆನೆಗೊಳ ಶೇಖರ್, ಸಾಸಲು, ಕೊಪ್ಪಲು, ಯಲಾದಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಫ್ರೆಂಚ್ ರಾಕ್ಸ್ ಲಯನ್ಸ್ ಸಂಸ್ಥೆಯಿಂದ ಹಲವು ಸೇವಾ ಕಾರ್ಯ

ಪಾಂಡವಪುರ, ಸೆ.3– ಫ್ರೆಂಚ್ ರಾಕ್ಸ್ ಲಯನ್ಸ್ ಸಂಸ್ಥೆಯೂ ಹದಿನೇಳು ವರ್ಷದಿಂದ ತಾಲೂಕಿನಲ್ಲಿ ಹಲವರು ಸಮಾಜ ಸೇವಾ ಕಾರ್ಯ ನಡೆಸಿಕೊಂಡು ಬರುತ್ತಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹೇಳಿದರು.

ತಾಲೂಕಿನ ಕೆನ್ನಾಳು ಗೇಟ್ ಬಳಿಯ ಸಂಪ್ರದಾಯ ಕನ್ವೆನ್ಷನ್ ಹಾಲ್‌ನಲ್ಲಿ ಇತ್ತೀಚೆಗೆ ನಡೆದ ಫ್ರೆಂಚ್ ರಾಕ್ಸ್ ಲಯನ್ಸ್ ಕ್ಲಬ್ ನ 2023–24ನೇ ಸಾಲಿನ ಅಧ್ಯಕ್ಷರಾಗಿ ಟಿ.ಪಿ.ರೇವಣ್ಣ ಅವರ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಲಯನ್ ಕೆ.ದೇವೇಗೌಡ ಕಳಕಳಿಯಿಂದಾಗಿ ಫ್ರೆಂಚ್ ರಾಕ್ಸ್ ಲಯನ್ಸ್ ಸಂಸ್ಥೆ ಆರಂಭಗೊಂಡಿತ್ತು. ಲಯನ್ಸ್ ಸಂಸ್ಥೆಯ ಸದಸ್ಯನಾಗಿ ಸಂಸ್ಥೆಯ ಜೊತೆಯಲ್ಲಿ ಹಲವಾರು ಸೇವಾ ಕಾರ್ಯ ನಡೆಸಿದ್ದೇವೆ. ಲಯನ್ಸ್ ಸಂಸ್ಥೆಯಲ್ಲಿ ಕೆಲಸ ಮಾಡುವ ಸದಸ್ಯರು ನಿಸ್ವಾರ್ಥ ಮನಸ್ಸಿನಿಂದ ಸೇವೆಸಲ್ಲಿದ್ದಾರೆ. ಸಂಸ್ಥೆಯ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಿರುವ ಟಿ.ಪಿ.ರೇವಣ್ಣ ಮತ್ತು ತಂಡದವರು ಮುಂದಿನ ದಿನಗಳಲ್ಲಿ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಸಹಕಾರ ಪಡೆದುಕೊಂಡು ಮತ್ತಷ್ಟು ಸೇವಾಕಾರ್ಯ ನಡೆಸಿ ಜನತೆಗೆ ಅನುಕೂಲಮಾಡಿಕೊಡಿ ಎಂದು ತಿಳಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಲಯನ್ಸ್ ಸಂಸ್ಥೆಗಳು ಪ್ರಪಂಚದ ಹಲವಾರ ದೇಶಗಳಲ್ಲಿ ಸೇವೆ ಸಲ್ಲಿಸುತ್ತಿದೆ ಎನ್ನುವುದನ್ನು ತಿಳಿದಿದ್ದೇನೆ. ಆದರೆ, ನಾನೆಂದು ಲಯನ್ಸ್ ಸಂಸ್ಥೆಯಲ್ಲಿ ಕೆಲಸ ಮಾಡಿಲ್ಲ. ಇದೀಗ ನಾನು ಸಹ ಫ್ರೆಂಚ್ ರಾಕ್ಸ್ ಲಯನ್ಸ್ ಸಂಸ್ಥೆಯ ಸದಸ್ಯನಾಗಿದ್ದೇನೆ. ಮುಂದಿನ ದಿನಗಳಲ್ಲಿ ಸಂಸ್ಥೆಯ ಎಲ್ಲಾ ಸೇವಾಕಾರ್ಯಗಳಿಗೂ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.



ಲಯನ್ ಜಿಲ್ಲಾ ಮಾಜಿ ರಾಜ್ಯಪಾಲ ಲಯನ್ ಕೆ.ದೇವೇಗೌಡ ಮಾತನಾಡಿ, 2004ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೇವಲ 3 ಲಯನ್ಸ್ ಸಂಸ್ಥೆಗಳು ಇದ್ದವು, ಇದೀಗ 40 ಲಯನ್ಸ್ ಸಂಸ್ಥೆಗಳು ಸ್ಥಾಪನೆಗೊಂಡಿವೆ. ಆರಂಭದಲ್ಲಿ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಭಾಗದವರನ್ನು ಇಂಗ್ಲಿಷ್ ಬರಲ್ಲ ಎಂದು ಬೆಂಗಳೂರುನವರು ಅಣಕಿಸಿಕೊಳ್ಳುತ್ತಿದ್ದರು. ಇದೀಗ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಲಯನ್ಸ್ ಸಂಸ್ಥೆಯ ಸೇವಾಕಾರ್ಯಗಳಲ್ಲಿ ಮುಂಚೂಣಿಯಲ್ಲಿದೆ. ಮೂರು ರಾಜ್ಯಗಳಲ್ಲಿ ಮಂಡ್ಯ ಜಿಲ್ಲೆ ಪ್ರಥಮ ಸ್ಥಾನಪಡೆದುಕೊಂಡಿದೆ ಎಂದು ಬಣ್ಣಿಸಿದರು.

ಇದೇ ವೇಳೆ ಸಂಸ್ಥೆಯ ನೂತನ ಅಧ್ಯಕ್ಷರಾದ ಟಿ.ಪಿ. ರೇವಣ್ಣ ಅವರು ಐದು ಮಂದಿ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರ ವಿತರಣೆ ಮಾಡಿದರು. ಟಿ.ಪಿ.ರೇವಣ್ಣ ಅಧ್ಯಕ್ಷರಾಗಿ, ಮಾಣಿಕ್ಯನಹಳ್ಳಿ ಅಶೋಕ್ ಕಾರ್ಯದರ್ಶಿಯಾಗಿ, ಆರ್.ದಿಲೀಪ್ ಕುಮಾರ್ ಖಜಾಂಚಿಯಾಗಿ, ಟಿ.ಪಿ.ಕರೀಗೌಡ, ಎಚ್.ಸಿ.ಮಹೇಶ್, ಉಪಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಜಿಲ್ಲೆಯ 2ನೇ ರಾಜ್ಯಪಾಲ ಕೆ.ಎಲ್.ರಾಜಶೇಖರ್ ನೂತನ ತಂಡಕ್ಕೆ ಪ್ರತಿಜ್ಞಾವಿಧಿ ಬೋಧಿಸಿದರು. ಎಸ್.ಮತಿದೇವ್ ಕುಮಾರ್ ಅವರು ನೂತನ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ನಿರ್ಗಮಿತ ಅಧ್ಯಕ್ಷ ಎಲ್.ಕೆ.ಜಯರಾಮು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಜಿಲ್ಲಾರಾಯಭಾರಿ ಆನಂದ್, ಜಿಎಲ್‌ಟಿ ಸಂಯೋಜಕ ವಿ.ಹರ್ಷ, ಪ್ರಾಂತೀಯ ಅಧ್ಯಕ್ಷ ಎನ್.ರವಿಕುಮಾರ್, ಡಿಸಿಸಿ ಬ್ಯಾಂಕ್ ನಿರ್ದೇಶಕ, ಲಯನ್ ಸದಸ್ಯ ಗುರುಸ್ವಾಮಿ, ಪಿ.ಎಲ್.ಆದರ್ಶ, ಜೆ.ಚಂದನ್, ಬಿ.ಕೆ.ಯೋಗೇಶ್, ಎನ್.ಎಸ್.ದರ್ಶನ್, ಟಿ.ವಿ.ಭಾಸ್ಕರ್, ಅರುಣ್ ಕುಮಾರ್, ಕೆ.ಆರ್.ಚಂದನ್, ಸಿ.ಎ.ಲೋಕೇಶ್, ಕಿಶೋರ್ ಕುಮಾರ್, ಎ.ಎನ್.ವಿಜಯ್ ಕುಮಾರ್ ಸೇರಿದಂತೆ ಹಲವರು ಇದ್ದರು.

ಇಂದಿನಿಂದ ಸಿಪಿಐ(ಎಂ) ಪ್ರತಿಭಟನೆ

ಭಾರತೀನಗರ, ಸೆ.3– ಬೆಲೆ ಏರಿಕೆ ನಿಲ್ಲಿಸಿ, ಉದ್ಯೋಗ ಒದಗಿಸಿ ಮತ್ತು ಕಾವೇರಿ ವಿಷಯದಲ್ಲಿ ಜನರಿಗೆ ಪರಿಹಾರ ನೀಡಿ ಎಂದು ಒತ್ತಾಯಿಸಿ ಕೇಂದ್ರ ಸರ್ಕಾರದ ವಿರುದ್ಧ ಸೆ.4 ರಿಂದ 7 ರವರೆಗೆ ಪ್ರತಿಭಟನೆ ನಡೆಸಲಾಗುವುದು ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಟಿ.ಎಲ್.ಕೃಷ್ಣೇಗೌಡ ತಿಳಿಸಿದರು. ಭಾರತೀನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಿಪಿ ಐ(ಎಂ) ವತಿಯಿಂದ ಸೆ.4 ರಿಂದ 7 ರವರೆಗೆ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕು ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಸೆ 4 ರಂದು ಮಂಡ್ಯ, ಮಳವಳ್ಳಿ, ಮದ್ದೂರು ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಸಿಪಿಐ (ಎಂ) ಪಕ್ಷದ ಮುಖಂಡರು, ಕಾರ್ಯಕರ್ತರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು. ಗೋಷ್ಠಿಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಹನುಮೇಶ್, ಶೋಭಾ, ಆರ್.ಕೃಷ್ಣ ಇದ್ದರು.



ಒಂದು ರಾಷ್ಟ್ರ, ಒಂದು ಚುನಾವಣೆ': ಪ್ರಜಾಸತ್ತಾತ್ಮಕ ಭಾರತವನ್ನು ಸರ್ವಾಧಿಕಾರದತ್ತ ಬದಲಾಯಿಸಲು ಮೋದಿ ತಂತ್ರ

ಎಐಸಿಸಿ ಅಧ್ಯಕ್ಷ ಖರ್ಗೆ ವಾಗ್ದಾಳಿ

ನವದೆಹಲಿ, ಸೆ.3– ಒಂದು ರಾಷ್ಟ್ರ, ಒಂದು ಚುನಾವಣೆ ಕುರಿತು ಪರಿಶೀಲನೆಗಾಗಿ ಸಮಿತಿ ರಚಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಪ್ರಜಾಸತ್ತಾತ್ಮಕ ಭಾರತವನ್ನು ನಿಧಾನವಾಗಿ ಸರ್ವಾಧಿಕಾರದತ್ತ ಪರಿವರ್ತಿಸುವುದು ಮೋದಿ ಅವರ ತಂತ್ರವಾಗಿದೆ ಎಂದು ಟೀಕಿಸಿದ್ದಾರೆ.

'ಒಂದು ರಾಷ್ಟ್ರ ಒಂದು ಚುನಾವಣೆಗೆ' ಸಮಿತಿ ರಚಿಸುವ ಈ ಗಿಮಿಕ್ ಭಾರತದ ಫೆಡರಲ್ ರಚನೆಯನ್ನು ಕಿತ್ತುಹಾಕಲು ಒಂದು ಉಪಾಯವಾಗಿದೆ ಎಂದು ಟ್ವೀಟರ್‌ನಲ್ಲಿ ಖರ್ಗೆ ಹೇಳಿದ್ದಾರೆ. ಭಾರತದ ಸಂವಿಧಾನದಲ್ಲಿ ಕನಿಷ್ಠ ಐದು ತಿದ್ದುಪಡಿಗಳ ಅಗತ್ಯವಿದೆ ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆ 1951ರಲ್ಲಿ ಭಾರಿ ಬದಲಾವಣೆ ಮಾಡಲಾಗುತ್ತದೆ. ಚುನಾಯಿತ ಲೋಕಸಭೆ ಮತ್ತು ಶಾಸನ ಸಭೆಗಳ ಅವಧಿ ಮೊಟಕುಗೊಳಿಸಲು ಸಂವಿಧಾನಾತ್ಮಕ ತಿದ್ದುಪಡಿ ಮಾಡಲಾಗುತ್ತದೆ. ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಅವುಗಳನ್ನು ಅದೇ ರೀತಿ ಮಾಡಬಹುದು ಎಂದಿದ್ದಾರೆ.

ಇದೇ ವೇಳೆ ಬಿಜೆಪಿ ಸರ್ಕಾರಕ್ಕೆ ಪ್ರಶ್ನೆಗಳ ಸುರಿಮಳೆಗೈದಿದ್ದಾರೆ. ಯಾವುದೇ ವ್ಯಕ್ತಿಯ ಬುದ್ಧಿವಂತಿಕೆ ದುರ್ಬಲಗೊಳಿಸದೆ, ಬಹುಶಃ ಭಾರತೀಯ ಚುನಾವಣಾ ಪ್ರಕ್ರಿಯೆಯಲ್ಲಿ ಅಡ್ಡಿಯಾಗುವುದರ ಕುರಿತು ನಿರ್ಧರಿಸಲು ಪ್ರಸ್ತಾವಿತ ಸಮಿತಿ ಸೂಕ್ತವೇ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ರಾಜಕೀಯ ಪಕ್ಷಗಳನ್ನು ಸಂಪರ್ಕಿಸದೆ ಏಕಪಕ್ಷೀಯವಾಗಿ ಈ ಬೃಹತ್ ಪ್ರಕ್ರಿಯೆ ಕೈಗೊಳ್ಳಬೇಕೇ? ರಾಜ್ಯಗಳು ಮತ್ತು ಅವುಗಳ ಚುನಾಯಿತ ಸರ್ಕಾರಗಳನ್ನು ಸಮಿತಿಗೆ ತರದೆ ಈ ಬೃಹತ್ ಕಾರ್ಯಾಚರಣೆ ನಡೆಯಬೇಕೇ ಎಂದು ಪ್ರಶ್ನಿಸಿದ್ದಾರೆ.

ಈ ವಿಚಾರವನ್ನು ಹಿಂದೆ ಮೂರು ಸಮಿತಿಗಳು ವ್ಯಾಪಕವಾಗಿ ಪರಿಶೀಲಿಸಿ, ತಿರಸ್ಕರಿಸಿವೆ. ನಾಲ್ಕನೆಯದನ್ನು ಮೊದಲೇ ನಿರ್ಧರಿಸಿದ ಫಲಿತಾಂಶವನ್ನು ಗಮನದಲ್ಲಿಟ್ಟುಕೊಂಡು ರಚಿಸಲಾಗಿದೆಯೇ ಎಂದು ನೋಡಬೇಕಾಗಿದೆ. ಭಾರತದ ಪ್ರತಿಷ್ಠಿತ ಚುನಾವಣಾ ಆಯೋಗದ ಪ್ರತಿನಿಧಿಯನ್ನು ಸಮಿತಿಯಿಂದ ಹೊರಗಿಡಲಾಗಿದೆ ಎಂಬುದು ನಮ್ಮನ್ನು ಕಂಗೆಡಿಸುತ್ತದೆ. 2014–19ರ (ಲೋಕಸಭೆ 2019 ಸೇರಿದಂತೆ) ಎಲ್ಲಾ ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗವು ಮಾಡಿದ ವೆಚ್ಚವು ಸುಮಾರು 5,500 ಕೋಟಿ ರೂಪಾಯಿಗಳಷ್ಟಿದೆ, ಇದು ಸರ್ಕಾರದ ಬಜೆಟ್ ವೆಚ್ಚದ ಒಂದು ಭಾಗವಾಗಿದೆ. ಇದು ವೆಚ್ಚವನ್ನು ಉಳಿಸುತ್ತದೆ ಎಂಬುದು ದಡ್ಡತನವಾಗಿದೆ ಎಂದಿದ್ದಾರೆ.

ಬಿಜೆಪಿಯಲ್ಲಿನ ಅಧಿಕಾರದ ದುರಾಸೆ ಈಗಾಗಲೇ ನಮ್ಮ ರಾಜಕೀಯವನ್ನು ಹಾಳು ಮಾಡಿದೆ ಮತ್ತು ಪಕ್ಷಾಂತರ ವಿರೋಧಿ ಕಾನೂನನ್ನು ಹಲ್ಲಿಲ್ಲದಂತೆ ಮಾಡಿದೆ. ಒಂದು ರಾಷ್ಟ್ರ ಒಂದು ಚುನಾವಣೆಯಂತಹ ಕಠಿಣ ಕ್ರಮಗಳು ಭಾರತದ ಪ್ರಜಾಪ್ರಭುತ್ವ ಸಂವಿಧಾನ ಮತ್ತು ವಿಕಸನಗೊಂಡ ಸಮಯ–ಪರೀಕ್ಷಿತ ಕಾರ್ಯವಿಧಾನಗಳನ್ನು ಹಾಳುಮಾಡುತ್ತದೆ ಎಂದು ಅವರು ಕಿಡಿಕಾರಿದ್ದಾರೆ. 1967 ರವರೆಗೆ ಭಾರತವು ಇಷ್ಟು ರಾಜ್ಯಗಳನ್ನು ಹೊಂದಿರಲಿಲ್ಲ ಅಥವಾ ಪಂಚಾಯತ್‌ಗಳಲ್ಲಿ 30.45 ಲಕ್ಷ ಚುನಾಯಿತ ಪ್ರತಿನಿಧಿಗಳನ್ನು ಹೊಂದಿರಲಿಲ್ಲ. ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ನಮ್ಮಲ್ಲಿ ಲಕ್ಷಾಂತರ ಚುನಾಯಿತ ಪ್ರತಿನಿಧಿಗಳಿದ್ದಾರೆ ಮತ್ತು ಅವರ ಭವಿಷ್ಯವನ್ನು ಒಂದೇ ಬಾರಿಗೆ ನಿರ್ಧರಿಸಲಾಗುವುದಿಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

ಎಲ್‌ಪಿಜಿ ಪಂಚಾಯತ್ ಸುರಕ್ಷತಾ ಶಿಬಿರದಲ್ಲಿ ಗ್ಯಾಸ್ ಬಳಕೆಯ ಬಗ್ಗೆ ಅರಿವು



ಸರಗೂರು, ಸೆ.3– ಮಹಿಳೆಯರು ಮುಂಜಾಗ್ರತಾ ಕ್ರಮವಾಗಿ ಗ್ಯಾಸ್ ಸುರಕ್ಷತಾ ಕ್ರಮ ಅನುಸರಿಸಿಕೊಂಡು ಅಡುಗೆ ಮಾಡಬೇಕು ಎಂದು ಮಾಜಿ ಸಚಿವ ಎಂ.ಶಿವಣ್ಣ ಸಲಹೆ ನೀಡಿದರು.

ಪಟ್ಟಣದ ಸೌಜನ್ಯ ಗ್ಯಾಸ್ ಸರ್ವೀಸ್ ಆವರಣದಲ್ಲಿ ಶನಿವಾರ ಸೌಜನ್ಯ ಗ್ಯಾಸ್ ಸರ್ವೀಸ್‌ನಿಂದ ಗ್ರಾಹಕರಿಗೆ ಆಯೋಜಿಸಿದ್ದ ಎಲ್‌ಪಿಜಿ ಪಂಚಾಯತ್ ಸುರಕ್ಷತಾ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮನೆಗಳಲ್ಲಿ ಅಡುಗೆ ಕೋಣೆ ಸ್ವಚ್ಛವಾಗಿಟ್ಟುಕೊಂಡು ಗಾಳಿ, ಬೆಳಕು ಬರುವಂತಿರಬೇಕು. ಸಿಲಿಂಡರ್, ರೆಗ್ಯುಲೇಟರ್, ಗ್ಯಾಸ್ ಸ್ಟೌಗಳಲ್ಲಿ ಲೋಪವಾದರೆ ಶೀಘ್ರ ಕ್ರಮವಹಿಸಬೇಕು. ಇದಕ್ಕಾಗಿ ಗ್ಯಾಸ್ ವಿತರಕರನ್ನು ಸಂಪರ್ಕಿಸಬೇಕು. ಕೂಡಲೇ ಅದು ಸರಿಪಡಿಸಲಿದ್ದಾರೆ. ಗ್ರಾಹಕರ ಹಿತ ಕಾಪಾಡುವುದು ನಮ್ಮ ಆದ್ಯ ಕರ್ತವ್ಯ. ಈ ನಿಟ್ಟಿನಲ್ಲಿ ಗ್ರಾಹಕರು ಮುಂದಾಗಬೇಕು ಎಂದು ಅವರು ತಿಳಿಸಿದರು.

ಎಲ್‌ಪಿಜಿ ಕರ್ನಾಟಕ ರಾಜ್ಯ ಮುಖ್ಯಸ್ಥ ರಾಜೇಶ್ ಕುಂಬಾರೆ ಮಾತನಾಡಿ, ಸೌದೆ ಬಳಕೆಯಿಂದ ಪರಿಸರಕ್ಕೆ ಹಾನಿಯಾಗುತ್ತಿತ್ತು. ಇದನ್ನು ಮನಗಂಡ ಸರಕಾರ ಅಡುಗೆಗಾಗಿ ಗ್ಯಾಸ್ ನೀಡಲು ಮುಂದಾಯಿತು. ಅದರಂತೆ ಗ್ರಾಹಕರು ಗ್ಯಾಸ್ ಸಂಪರ್ಕ ಹೊಂದಿದ್ದಾರೆ. ಹೀಗಾಗಿ ಗ್ರಾಹಕರು ಗ್ಯಾಸ್ ಸುರಕ್ಷತೆ ಅನುಸರಿಸುವುದು ಸೂಕ್ತವಾಗಿದೆ ಎಂದರು.

ಎಲ್‌ಪಿಜಿಯ ಮಂಗಳೂರಿನ ಟೆರಿಟರಿ ಮ್ಯಾನೇಜರ್ ಬಿವಶ್ ಸಿ ಮಂಡಲ್ ಅವರು, ಮಹಿಳೆಯರು ಗ್ಯಾಸ್ ಸುರಕ್ಷತಾ ಕ್ರಮವನ್ನು ಹೇಗೆ ಅನುಸರಿಸಬೇಕು. ಮುಂಜಾಗೃತ ಕ್ರಮಗಳೇನು? ಎಂಬುದರ ಬಗ್ಗೆ ಪ್ರಾತ್ಯಕ್ಷಿಕೆ ತೋರಿಸುವ ಮೂಲಕ ಅರಿವು ಮೂಡಿಸಿದರು. ಎಲ್‌ಪಿಜಿ ಸೇಲ್ಸ್ ಆಫೀಸರ್ ನಿತೀನ್ ಥಾಮ್ಸನ್, ಸೌಜನ್ಯ ಗ್ಯಾಸ್ ಏಜೆನ್ಸಿ ಮಾಲೀಕ ಹರ್ಷವರ್ಧನ್, ಸಿಬ್ಬಂದಿಗಳಾದ ಪ್ರಸಾದ್, ಸೋಮಶೇಖರ್, ಮಹಿಳೆ ಗ್ರಾಹಕರು ಹಾಜರಿದ್ದರು.

ದೈಹಿಕ ಶಿಕ್ಷಕ ಪೂರ್ಣೇಶ್‌ಗೆ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

ಮಡಿಕೇರಿ, ಸೆ.3– ಹಳ್ಳಿ ಮಕ್ಕಳಲ್ಲಿರುವ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ನಕ್ಷತ್ರಗಳನ್ನಾಗಿಸಿದ ಮಡಿಕೇರಿ ತಾಲೂಕಿನ ಬೋಯಿಕೇರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಉತ್ಸಾಹಿ ದೈಹಿಕ ಶಿಕ್ಷಕ ಬಿ.ಟಿ.ಪೂರ್ಣೇಶ್ ಅವರಿಗೆ ಈ ಬಾರಿಯ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ.



ಸುಮಾರು 29 ವರ್ಷಗಳ ಸುದೀರ್ಘ ಸೇವಾ ಅವಧಿಯಲ್ಲಿ ಹಲವು ಹಾಕಿ ಕ್ರೀಡಾಪಟುಗಳನ್ನು ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಹಾಕಿ ಶಿಬಿರಗಳಲ್ಲಿ ತೊಡಗಿಕೊಳ್ಳುವಂತೆ ಮಾಡಿದ ಹೆಗ್ಗಳಿಕೆ ಇವರದ್ದು. ಹಾಕಿ ಕ್ರೀಡೆಯನ್ನು ತಮ್ಮ ಜೀವನಾಡಿಯನ್ನಾಗಿಸಿಕೊಂಡು ಉಚಿತ ತರಬೇತಿ ಶಿಬಿರಗಳನ್ನು ನಡೆಸಿ ಗ್ರಾಮೀಣ ವಿದ್ಯಾರ್ಥಿಗಳನ್ನು ಹುರಿದುಂಬಿಸಿದ್ದಾರೆ.

ಪ್ರಸ್ತುತ 36ನೇ ರಾಷ್ಟ್ರೀಯ ಕ್ರೀಡೆಯಲ್ಲಿ ಪೂರ್ಣೇಶ್ ಅವರ ಇಬ್ಬರು ವಿದ್ಯಾರ್ಥಿಗಳಾದ ಅಪ್ಸರ ಹಾಗೂ ಅರ್ಪಿತ ಭಾಗವಹಿಸಿ ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಈಗಾಗಲೇ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಸಂಘದಿಂದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಗ್ರಾಮೀಣ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಹೆಚ್ಚು ಆಸಕ್ತಿ ತೋರುತ್ತಿರುವ ಪೂರ್ಣೇಶ್ ಅವರು ಕ್ರೀಡಾಸಕ್ತರನ್ನು ಬೆಳೆಸಿದ್ದಾರೆ. ನಿಸ್ವಾರ್ಥ ಸೇವೆಯಲ್ಲಿ ತೊಡಗಿಸಿಕೊಂಡಿರುವ ಅವರು ಬಡ ವಿದ್ಯಾರ್ಥಿಗಳಿಗಾಗಿ ತಮ್ಮ ಸ್ವಂತ ಹಣವನ್ನು ಖರ್ಚು ಮಾಡಿದ್ದಾರೆ. ಇವರ ಪ್ರಯತ್ನದ ಫಲವಾಗಿ ಹಲವು ಹಳ್ಳಿ ಪ್ರತಿಭೆಗಳು ಕ್ರೀಡಾ ಕ್ಷೇತ್ರ, ಸೇನಾ ಕ್ಷೇತ್ರ ಮತ್ತು ಪೊಲೀಸ್ ಇಲಾಖೆಯಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ.

ರಾಜ್ಯ ಪ್ರಶಸ್ತಿ ಲಭಿಸಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿರುವ ಪೂರ್ಣೇಶ್, ಈ ಪ್ರಶಸ್ತಿ ಗ್ರಾಮೀಣ ವಿದ್ಯಾರ್ಥಿಗಳ ಪ್ರತಿಭೆಗೆ ಅರ್ಪಣೆ ಎಂದು ತಿಳಿಸಿದ್ದಾರೆ. ನನ್ನ ನಿವೃತ್ತಿಗೆ ಇನ್ನು ಕೇವಲ 3 ವರ್ಷ ಬಾಕಿ ಉಳಿದಿದೆ. ನಿವೃತ್ತಿಯಾದ ನಂತರವೂ ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ನಕ್ಷತ್ರಗಳನ್ನಾಗಿಸಲು ಶ್ರಮಿಸುತ್ತೇನೆ ಎಂದು ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗೋಣಿಕೊಪ್ಪ, ಸೆ.3– ಅಖಿಲ ಅಮ್ಮ ಕೊಡವ ವಿದ್ಯಾಭಿವೃದ್ಧಿ ಸಂಘ ವತಿಯಿಂದ ಜನಾಂಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. 7 ನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅಂಕಪಟ್ಟಿ, ಶಾಲಾ–ಕಾಲೇಜಿನ ವ್ಯಾಸಂಗ ದೃಢೀಕರಣ ಪತ್ರ ಅಥವಾ ಶುಲ್ಕ ಪಾವತಿಯ ನಕಲು ಪ್ರತಿ ನೀಡಬಹುದಾಗಿದೆ. ಸೆ.15 ರೊಳಗೆ ತಮ್ಮ ಗ್ರಾಮದಲ್ಲಿರುವ ಅಖಿಲ ಅಮ್ಮ ಕೊಡವ ವಿದ್ಯಾಭಿವೃದ್ಧಿ ಸಂಘದ ಸದಸ್ಯರಿಗೆ, ಅಧ್ಯಕ್ಷ ಉಮೇಶ್ ಕೇಚಮಯ್ಯ, ಕಾರ್ಯದರ್ಶಿ ಅಮ್ಮತ್ತಿರ ವಾಸುವರ್ಮರಿಗೆ ನೀಡಬಹುದಾಗಿದೆ ಮಾಹಿತಿಗೆ ಸಂಪರ್ಕಿಸಿ 9480425773, 9480116699.

ಭುವನಹಳ್ಳಿ ಕೃಷಿ ಸಹಕಾರ ಸಂಘಕ್ಕೆ 10.92 ಲಕ್ಷ ನಿವ್ವಳ ಲಾಭ

ಬೆಟ್ಟದಪುರ, ಸೆ.3– ವಾರ್ಷಿಕ ಮಹಾಸಭೆ ಎಂದರೆ ಸಂಘದಲ್ಲಿ ಹಬ್ಬ ಇದ್ದಂತೆ. ಸಂಘದಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಬಗೆಹರಿಸಿಕೊಳ್ಳಲು ಇಲ್ಲಿ ಕಾಲಾವಕಾಶವಿದೆ ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಎನ್ ಹರೀಶ್ ತಿಳಿಸಿದರು.

ಸಮೀಪದ ಭುವನಹಳ್ಳಿ ಗ್ರಾಮದಲ್ಲಿ ಶನಿವಾರ ಸಂಘದ ಆವರಣದಲ್ಲಿ ನಡೆದ ಕೃಷಿ ಸಹಕಾರ ಸಂಘದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು ಸಂಘವನ್ನು ಉತ್ತಮವಾಗಿ ನಡೆಸಲು ರೈತರ ಸಹಕಾರದಿಂದ ಮಾತ್ರ ಸಾಧ್ಯ, ಸಾಲ ಸಕಾಲದಲ್ಲಿ ಮರುಪಾವತಿಯಾಗುತ್ತಿರುವುದರಿಂದ ಸಂಘ ಹೆಚ್ಚು ಅಭಿವೃದ್ಧಿ ಆಗುತ್ತಿದೆ, ಈ ಬಾರಿ ಸರಾಸರಿ 5 ಕೋಟಿಗೂ ಹೆಚ್ಚು ಸಾಲವನ್ನು ನಮ್ಮ ಸಂಘದಿಂದ ನೀಡಲಾಗಿದೆ, ಇದರಿಂದ ಸಂಘಕ್ಕೆ 10.92 ಲಕ್ಷ ನಿವ್ವಳ ಆದಾಯ ಬಂದಿದೆ ಎಂದು ತಿಳಿಸಿದರು.



ಸಭೆಯಲ್ಲಿ ರೈತರ ಅಹವಾಲು : ರೈತರಿಗೆ ಬೇಕಾದ ಸಾಲದ ಸೌಲಭ್ಯಗಳನ್ನು ಅಲೆದಾಡಿಸದೆ ಕೊಡಬೇಕು, ಸಾಲ ಮರುಪಾವತಿ ಮಾಡುವ ವಿಚಾರದಲ್ಲಿ ಕಂತುಗಳ ವ್ಯವಸ್ಥೆ ಮಾಡಿಸಬೇಕು, ಸಂಘದ ಜಾಗದಲ್ಲಿ ವಾಣಿಜ್ಯ ಮಳಿಗೆಗಳನ್ನು ಮಾಡಿ ಸಂಘದ ಆದಾಯದ ಬಗ್ಗೆ ಗಮನಹರಿಸಬೇಕು, ಸ್ವಚ್ಛತೆಗೆ ಆದ್ಯತೆ ನೀಡಬೇಕೆಂದು ಸಭೆಯಲ್ಲಿ ಮನವಿ ಮಾಡಲಾಯಿತು.

ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಪ್ರತಿನಿಧಿ ಶಿವಕುಮಾರ್, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಪಿ ಸತೀಶ್ ಮಾತನಾಡಿದರು.

ಯಜಮಾನರಾದ ರಾಜೇಗೌಡ, ಸೋಮೇಗೌಡ, ರಾಮಶೆಟ್ಟಿ, ನಾಗೇಂದ್ರ, ರಾಜಗೋಪಾಲ್, ಜಯಣ್ಣ ಬಿ.ಟಿ ಸಣ್ಣಸ್ವಾಮಿಗೌಡ, ಕುಮಾರ್,ಮೂರ್ತಿ ಪುಟ್ಟರಾಜು, ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ. ದೇವರಾಜು, ಸಂಘದ ಉಪಾಧ್ಯಕ್ಷರಾದ ವೆಂಕಟರಮಣಶೆಟ್ಟಿ, ನಿರ್ದೇಶಕರಾದ ಮಲ್ಲೇಶ್, ಬಿ.ವಿ ಗಿರೀಶ್, ಜಯಣ್ಣ, ಮಹಾದೇವ, ಲೋಹಿತ್, ಲಕ್ಷ್ಮಿಗೌರಮ್ಮ ವಿಜೇಂದ್ರ ಬೋರಪ್ಪ, ಬೇಲೂರಯ್ಯ, ಸಿಬ್ಬಂದಿ ರಾಜಶೇಖರ್, ಸಂತೋಷ್ ಇದ್ದರು.

ಕೆ.ಆರ್.ಪೇಟೆ ಕುರುಬರ ಸಂಘ ಯುವ ಘಟಕ ಅಧ್ಯಕ್ಷರ ಆಯ್ಕೆ



ಕೆ.ಆರ್.ಪೇಟೆ, ಸೆ.3– ಕರ್ನಾಟಕ ಪ್ರದೇಶ ಕುರುಬರ ಸಂಘದ ತಾಲೂಕು ಯುವ ಘಟಕದ ನೂತನ ಅಧ್ಯಕ್ಷರಾಗಿ ಎಲ್.ಜೆ. ಅಶೋಕ್‌ಕುಮಾರ್ ಆಯ್ಕೆಯಾಗಿದ್ದಾರೆ.

ಪಟ್ಟಣದ ಸಾಹುಕಾರ್ ಚನ್ನೇಗೌಡ ಕಾಂಪ್ಲೆಕ್ಸ್‌ನಲ್ಲಿರುವ ಶ್ರೀ ಕಾಳಿದಾಸ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ತಾಲೂಕು ಘಟಕದ ಅಧ್ಯಕ್ಷ ಕೆ.ಪುರುಷೋತ್ತಮ್ ಹಾಗೂ ತಾಲೂಕು ಪ್ರಧಾನ ಕಾರ್ಯದರ್ಶಿ ಕೆ.ಎಸ್.ಚಂದ್ರು ಅವರ ನೇತೃತ್ವದಲ್ಲಿ ನಡೆದ ತಾಲೂಕು ಘಟಕದ ಪದಾಧಿಕಾರಿಗಳ ಸಭೆಯಲ್ಲಿ ಯುವ ಘಟಕದ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಕರ್ನಾಟಕ ಪ್ರದೇಶ ಕುರುಬರ ಸಂಘದ ತಾಲೂಕು ಯುವ ಘಟಕದ ನೂತನ ಅಧ್ಯಕ್ಷರಾದ ಎಲ್.ಜೆ.ಅಶೋಕ್ ಕುಮಾರ್ ಮತ್ತು ಇತರೆ ಎಲ್ಲಾ ಪದಾಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದರು.

ಯಮಗುಂಬ ಗ್ರಾಮದಲ್ಲಿ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಕಾರ್ಯಕ್ರಮ



ಹಿರೀಕ್ಯಾತನಹಳ್ಳಿ, ಸೆ.3– ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಬಿ.ಸಿ. ಟ್ರಸ್ಟ್ ವತಿಯಿಂದ ಹುಣಸೂರು ತಾಲೂಕಿನ ಹರವೆ ವಲಯದ ಯಮಗುಂಬ ಗ್ರಾಮದಲ್ಲಿ ಮಾದಕ ವಸ್ತುಗಳ ಜಾಗೃತಿ ಹಾಗೂ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಮುಖ್ಯ ಶಿಕ್ಷಕ ಮಹದೇವ್ ಉದ್ಘಾಟಿಸಿ, ಯುವ ಜನತೆ ಓದಿನಲ್ಲಿ ಹೆಚ್ಚು ಆಸಕ್ತಿ ವಹಿಸುವುದಕ್ಕಿಂತ ದುಶ್ಚಟಗಳ ಕಡೆ ಹೆಚ್ಚು ವಾಲುತ್ತಿರುವುದು ವಿಷಾದನೀಯ. ವಿದ್ಯಾಭ್ಯಾಸ ಮುಗಿಯುವವರೆಗೂ ಇಂತಹ ದುಶ್ಚಟಗಳಿಂದ ದೂರವಿದ್ದರೆ ಮುಂದೊಂದಿನ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಯಾಗಲು ಸಾಧ್ಯ. ಇಂತಹ ಮಾರಕ ಅಭ್ಯಾಸಗಳಿಂದ ದೂರವಿದ್ದರೆ ತಂದೆ ತಾಯಿಗಳಿಗೂ ಗೌರವ ಸಿಗುವುದರ ಜೊತೆಗೆ ಸಮಾಜದಲ್ಲಿ ಒಳ್ಳೆಯ ಉದ್ಯೋಗ ಪಡೆಯಲು ಅವಕಾಶ ಸಿಗುತ್ತದೆ ಎಂದರು. ಮದ್ಯ ವ್ಯಸನಿಗಳಿಂದ ಮಕ್ಕಳ ಮೇಲೆ ಬೀರುವ ಕೆಟ್ಟ ಪರಿಣಾಮಗಳ ಬಗ್ಗೆ ಜಾನಪದ ಶೈಲಿಯ ಹಾಡುಗಳನ್ನು ಹಾಡಲಾಯಿತು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಸೋಮಶೇಖರ್ ವಲಯ ಮೇಲ್ವಿಚಾರಕಿ ಶ್ರೀಮತಿ ಪಾರ್ವತಿ ಸೇವಾ ಪ್ರತಿನಿಧಿ ಮಂಜುಳಾ ಹಾಗೂ ಸಂಘದ ಪ್ರತಿನಿಧಿಗಳು ಹಾಜರಿದ್ದರು.

ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು

ಸೆ.15 ರಿಂದ ಕೊಡಗು ಜಿಲ್ಲೆಯಲ್ಲಿ ಸಿಎನ್‌ಸಿ ಪಾದಯಾತ್ರೆ



5 ಹಂತಗಳಲ್ಲಿ ಪಾದಯಾತ್ರೆ, ಕೊಡವರಲ್ಲಿ ಜಾಗೃತಿ ಮೂಡಿಸಲು ಸಭೆ

ಮಡಿಕೇರಿ, ಸೆ.3– ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸೇರಿದಂತೆ ಸಂವಿಧಾನದತ್ತವಾದ 9 ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯಲು ಕೊಡಗು ಜಿಲ್ಲೆಯ ವಿವಿಧೆಡೆ ಪಾದಯಾತ್ರೆ ನಡೆಸಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಿರ್ಧರಿಸಿದೆ.

ಕಾನೂನುಬದ್ಧ ಹಕ್ಕೊತ್ತಾಯಗಳ ಪ್ರತಿಪಾದಕ, ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರ ಜನ್ಮದಿನವಾದ ಸೆ.15ರಂದು ಕೊಡವರ ಪುಣ್ಯಕ್ಷೇತ್ರ ತಲಕಾವೇರಿಯಲ್ಲಿ (ತಾವುನಾಡ್) ಪಾದಯಾತ್ರೆಗೆ ಚಾಲನೆ ನೀಡಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ತಲಕಾವೇರಿಯಿಂದ ಆರಂಭಗೊಳ್ಳುವ ಪಾದಯಾತ್ರೆ 5 ಹಂತಗಳಲ್ಲಿ ನಡೆಯಲಿದ್ದು, ಮಾರ್ಗದುದ್ದಕ್ಕೂ ಕೊಡವರನ್ನು ಭೇಟಿ ಮಾಡಲಾಗುವುದು. ಭೂತ, ವರ್ತಮಾನ ಮತ್ತು ಭವಿಷ್ಯದ ಭಂಡಾರವಾಗಿರುವ ಪ್ರತಿ ನಾಡ ಮಂದ್‌ಗಳಲ್ಲಿ ಸಭೆ ನಡೆಸಿ ಕೊಡವ ಜನಜಾಗೃತಿ ಮೂಡಿಸಲಾಗುವುದು. ಪಾದಯಾತ್ರೆಯು ನವೆಂಬರ್ 2ನೇ ವಾರ ಶ್ರೀಪಾಡಿ ಇಗ್ಗುತ್ತಪ್ಪ ಕ್ಷೇತ್ರದಲ್ಲಿ ಸಮಾರೋಪಗೊಳ್ಳಲಿದೆ ಎಂದು ನಾಚಪ್ಪ ತಿಳಿಸಿದ್ದಾರೆ.

ಭೌಗೋಳಿಕ–ರಾಜಕೀಯ ಸ್ವಾಯತ್ತತೆಯು ವಿಶ್ವ ರಾಷ್ಟ್ರ ಸಂಸ್ಥೆ ಚಾರ್ಟರ್‌ನಲ್ಲಿ ಪ್ರತಿಪಾದಿಸಲ್ಪಟ್ಟ ನಿರ್ದಿಷ್ಟ ಪ್ರದೇಶದ ಪ್ರಾಚೀನ ಸೂಕ್ಷ್ಮ –ಮಿನಿಸ್ಕ್ಯೂಲ್ ರೇಸ್ ಅನ್ನು ರಕ್ಷಿಸಲು, ಉತ್ತೇಜಿಸಲು ಮತ್ತು ಪುನರುಜ್ಜೀವನಗೊಳಿಸಲು ಮೂಲಭೂತ ನೀತಿಯಾಗಿ ಸಾಂವಿಧಾನಿಕ ವ್ಯವಸ್ಥೆಯಾಗಿದೆ. 2002ರಲ್ಲಿ ಕೊಡವರಿಗೆ ಸ್ವಾಯತ್ತ ಪರಿಷತ್ತನ್ನು ರಚಿಸಲು ಭಾರತದ ಸಿಎನ್‌ಸಿಯ ಮನವಿ ಮೇರೆಗೆ ಸಂವಿಧಾನ ಪರಿಶೀಲನಾ ಆಯೋಗ ಶಿಫಾರಸು ಮಾಡಿದೆ. ಆನಂದ್ ಶರ್ಮಾ ಸಮಿತಿಯ ವರದಿಯು ಸ್ವಾಯತ್ತ ಪ್ರದೇಶಗಳು ಮತ್ತು ಅದರ ಕೌನ್ಸಿಲ್‌ಗಳಿಗೆ ಹೆಚ್ಚಿನ ಅಧಿಕಾರ ನೀಡಲು ತಿಳಿಸಿದೆ.

ಸಿಎನ್‌ಸಿ ಮೂಲಕ ಜನರ ಆಕಾಂಕ್ಷೆಗಳನ್ನು ಪ್ರತಿಧ್ವನಿಸಲು, ಮೂಲೆ ಮೂಲೆಗಳಲ್ಲಿ ವಿಶ್ವ ರಾಷ್ಟ್ರ ಸಂಸ್ಥೆ ಚಾರ್ಟರ್‌ನಲ್ಲಿ ಪ್ರತಿಪಾದಿಸಿರುವ ಸಾರ್ವತ್ರಿಕ ಕಾನೂನಿನ ಪ್ರಕಾರ ಮತ್ತು ಭಾರತದ ಸಂವಿಧಾನದ ಅಡಿಯಲ್ಲಿ ಸ್ವಯಂ ಆಡಳಿತ ಹಾಗೂ ಸ್ವಯಂ ನಿರ್ಣಯದ ಹಕ್ಕುಗಳನ್ನು ಸ್ಥಾಪಿಸಲು ಆರ್ಟಿಕಲ್ 32 ಅನ್ನು ಕಸರತ್ತು ಮಾಡುವ ಮೂಲಕ ಪ್ರಚಾರ ಮಾಡುತ್ತಿದ್ದೇವೆ. ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯೂ ಕರ್ನಾಟಕದ ಸ್ವಾಧೀನದ ಅಡಿಯಲ್ಲಿ ಭಾರತದ ಸಾರ್ವಭೌಮತ್ವಕ್ಕೆ ಪೂರಕವಾಗಿರುತ್ತದೆ ಎಂದು ನಾಚಪ್ಪ ಸ್ಪಷ್ಟಪಡಿಸಿದ್ದಾರೆ.

ಕುಶಾಲನಗರದಲ್ಲಿ ಕೈಲು ಮುಹೂರ್ತ ವಿಶಿಷ್ಟ ಆಚರಣೆ



ಕುಶಾಲನಗರ, ಸೆ.3– ಕೊಡಗಿನ ಮೂಲ ನಿವಾಸಿಗಳ ಸಾಂಪ್ರದಾಯಿಕ ಹಬ್ಬಗಳಲ್ಲೊಂದಾದ ಕೈಲು ಮುಹೂರ್ತ ಹಬ್ಬವನ್ನು ಇಂದು ವೈಶಿಷ್ಟ್ಯಪೂರ್ಣವಾಗಿ ಆಚರಿಸಲಾಯಿತು.

ಕೊಡವ ಹಾಗೂ ಅರೆಭಾಷೆ ಗೌಡ ಸಮುದಾಯದ ಕುಟುಂಬಸ್ಥರು, ನೆರೆಹೊರೆಯವರು, ಬಂಧುಗಳು ಒಟ್ಟಿಗೆ ಸೇರಿ ಭಾನುವಾರ ಸಡಗರದಿಂದ ಹಬ್ಬ ಆಚರಿಸಿ ಸಂಭ್ರಮಿಸಿದರು. ಪ್ರಕೃತಿ ಸೌಂದರ್ಯದ ಬೀಡಾದ ಕೊಡಗು ಜಿಲ್ಲೆಯಲ್ಲಿ ಭತ್ತದ ನಾಟಿ ಕಾರ್ಯ ಪೂರ್ಣಗೊಂಡ ನಂತರ ಆಚರಿಸುವ ಈ ವಿಶಿಷ್ಟ ಹಬ್ಬದಲ್ಲಿ ರೈತರು ತಾವು ಬಳಸುವ ಕೋವಿ, ಕತ್ತಿ, ನೇಗಿಲು, ನೊಗ ಸೇರಿದಂತೆ ನಿತ್ಯ ಬಳಕೆಯ ಆಯುಧಗಳನ್ನ ತಮ್ಮ ಮನೆಗಳಲ್ಲಿ ಒಪ್ಪವಾಗಿ ಜೋಡಿಸಿ ಸಾಂಪ್ರದಾಯಿಕ ಉಡುಗೆ ಧರಿಸಿ ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸಿದರು.

ಪೂಜೆಯ ನಂತರ ಹಬ್ಬದ ಸಾಂಪ್ರದಾಯಿಕ ಭಕ್ಷ್ಯಗಳಾದ ಕಡುಬಿಟ್ಟು, ಶ್ಯಾವಿಗೆ ಹಾಗೂ ಪಂದಿಕರಿಯಂತಹ ವಿಶಿಷ್ಟ ಭೋಜನವನ್ನು ಮನೆಮಂದಿ ಹಾಗೂ ಬಂಧುಗಳು ಒಟ್ಟಿಗೆ ಸೇರಿ ಸವಿಯುಂಡರು.

ಹಳ್ಳಿಗಳಲ್ಲಿ ತಮ್ಮ ಕೃಷಿ ಕಾರ್ಯಕ್ಕೆ ಬಳಸುವ ಎತ್ತುಗಳಿಗೆ ಸ್ನಾನ ಮಾಡಿಸಿ ಪೂಜೆ ಸಲ್ಲಿಸಲಾಯಿತು. ನಂತರ ಈ ಹಬ್ಬದ ವಿಶೇಷವೆನಿಸಿದ ತೆಂಗಿನಕಾಯಿಯನ್ನು ಮರದ ಕೊಂಬೆಗೆ ಕಟ್ಟಿ ಅದನ್ನು ಗುರಿಯಿಟ್ಟು ಗುಂಡು ಹೊಡೆಯುವ ಸ್ಪರ್ಧೆಯಲ್ಲಿ ಪಾಲ್ಗೊಂಡು ಸಂತೋಷಪಟ್ಟರು. ಜತೆಗೆ ಕೆಲವು ಕಡೆಗಳಲ್ಲಿ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯೊಂದಿಗೆ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಕುಶಾಲನಗರ ತಾಲೂಕು ಗೌಡ ಸಮಾಜದ ಅಧ್ಯಕ್ಷ ಚಿಲ್ಲನ ಗಣಿಪ್ರಸಾದ್ ಗೋಪಾಲ್ ಸರ್ಕಲ್‌ನಲ್ಲಿರುವ ಐನ್ ಮನೆಯಲ್ಲೂ ಹಬ್ಬದ ಆಚರಣೆಯನ್ನು ಸಾಂಪ್ರದಾಯಿಕವಾಗಿ ಆಚರಿಸಿದರು.

ಚಿಲ್ಲನ ಗಣಿ ಪ್ರಸಾದ್ ಮತ್ತು ಹಿರಿಯರಾದ ಗಂಗಮ್ಮ, ಚಿಲ್ಲನ ಲತಾ, ಚಿಲ್ಲನ ಅಚಲ್, ಕಲ್ಲುಮುಟ್ಲು ಅನುದೀಪ್ ನೆಲ್ಲಕ್ಕಿ ನಡುಬಾಡೆಯಲಿಟ್ಟ ಆಯುಧಗಳಿಗೆ ಪೂಜೆ ಸಲ್ಲಿಸಿದರು. ಕತ್ತಿ, ನೇಗಿಲು, ಗುದ್ದಲಿ ಸೇರಿದಂತೆ ಕೃಷಿ ಪರಿಕರಗಳನ್ನು ಪೂಜಿಸಿದರು. ಕುಟುಂಬಸ್ಥರು ದೇವರ ದೀಪಕ್ಕೆ ನಮಸ್ಕರಿಸಿ ಹಿರಿಯರ ಆಶೀರ್ವಾದ ಪಡೆದರು. ನಂತರ ಹಬ್ಬದ ವಿಶೇಷ ಭೋಜನವನ್ನು ಎಲ್ಲರೂ ಒಟ್ಟಾಗಿ ಸೇವಿಸಿದರು.

ಈ ಸಂದರ್ಭ ಮಾತನಾಡಿದ ಗಣಿ ಪ್ರಸಾದ್, ಆಧುನಿಕತೆಯಿಂದ ತಮ್ಮ ಮೂಲ ಸಂಸ್ಕೃತಿಗೆ ಧಕ್ಕೆಯಾಗುತ್ತಿದ್ದು, ಪ್ರತಿಯೊಬ್ಬರು ತಮ್ಮ ಸಂಸ್ಕೃತಿ, ಪರಂಪರೆ ಉಳಿಸಿ ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕು ಎಂದರು.

ವಿವಿಧೆಡೆ ಸಂಭ್ರಮಾಚರಣೆ: ಪಟ್ಟಣ ಸೇರಿದಂತೆ ಕೂಡಿಗೆ, ಗುಡ್ಡೆಹೊಸೂರು, ಕೊಡಗರಹಳ್ಳಿ, ಸುಂಟಿಕೊಪ್ಪ, ನಂಜರಾಯಪಟ್ಟಣ, ಹುದುಗೂರು, ವಾಲ್ನೂರು, 7ನೇ ಹೊಸಕೋಟೆ, ರಂಗಸಮುದ್ರ, ಹಾರಂಗಿ, ಚಿಕ್ಕತ್ತೂರು, ಮೊದಲಾದೆಡೆ ಬಹುತೇಕ ಮಂದಿ ತಮ್ಮ ತಮ್ಮ ಐನ್ ಮನೆಗಳಲ್ಲಿ ಆಯುಧಗಳನ್ನು ಇಟ್ಟು ಪೂಜೆ ಸಲ್ಲಿಸುವ ಮೂಲಕ ಸಡಗರ ಸಂಭ್ರಮದಿಂದ ಕೈಲು ಮುಹೂರ್ತ ಹಬ್ಬವನ್ನು ಆಚರಿಸಿದರು.

ಜಾತಿ ವ್ಯವಸ್ಥೆ ತೊಲಗಿಸಿದ ಮಹಾನ್ ಚೇತನ ನಾರಾಯಣ ಗುರು



ವಿರಾಜಪೇಟೆ, ಸೆ.3– ಶ್ರೀ ನಾರಾಯಣ ಗುರು ನ್ಯಾಯದ ಹರಿಕಾರರಾಗಿದ್ದರು. ಅವರ ಸಿದ್ಧಾಂತ ಇಂದು ಕೂಡ ಸ್ಮರಣೀಯ ಎಂದು ವಿರಾಜಪೇಟೆ ಶಾಸಕರಾದ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅಭಿಪ್ರಾಯಪಟ್ಟರು.

'ಶ್ರೀ ನಾರಾಯಣ ಗುರು 169ನೇ ಜಯಂತಿ' ಅಂಗವಾಗಿ ತಾಲೂಕು ಬಿಲ್ಲವ ಸೇವಾ ಸಂಘದ ವತಿಯಿಂದ ವಿರಾಜಪೇಟೆ ಬಳಿಯ ಬಿಟ್ಟಂಗಾಲದ ಅಂಬಟ್ಟಿಯಲ್ಲಿರುವ ಶ್ರೀ ನಾರಾಯಣ ಗುರು ಮಂದಿರದಲ್ಲಿ ಆಯೋಜಿಸಲಾಗಿದ್ದ 'ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮ'ದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಜಾತಿ ವ್ಯವಸ್ಥೆಯನ್ನು ಮನುಷ್ಯ ಸೃಷ್ಟಿ ಮಾಡಿದ್ದೇ ವಿನಾ ದೇವರಲ್ಲ. ಹಿಂದೆ ಜಾತಿ ಭೇದ ಪ್ರಬಲವಾಗಿದ್ದ ಸಂದರ್ಭದಲ್ಲಿ ನಾರಾಯಣ ಗುರುಗಳು ಶಾಂತಿಯುತವಾಗಿ ಹೋರಾಟ ನಡೆಸಿ ಎಲ್ಲರೂ ಒಂದೇ ಎಂಬ ಸಂದೇಶ ಸಾರಿದರು ಎಂದರು.

ವಿರಾಜಪೇಟೆ ತಾಲೂಕಿನ ಬಿಲ್ಲವ ಸಂಘ ಜನಾಂಗದ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಉತ್ತಮ ಕಾರ್ಯ, ಸಂಘದ ಕಾರ್ಯ ಚಟುವಟಿಕೆಗಳಿಗೆ, ಸಮುದಾಯ ಭವನಕ್ಕೆ ಸರಕಾರದಿಂದ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಬಿಲ್ಲವ ಸೇವಾ ಸಂಘದ ತಾಲೂಕು ಅಧ್ಯಕ್ಷ ಬಿ.ಎಂ. ಗಣೇಶ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ನಿಟ್ಟಿನಲ್ಲಿ ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಮಾಜ ಬಾಂಧವರ ಸರ್ವತೋಮುಖ ಬೆಳವಣಿಗೆಗೆ ಇತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಸಮುದಾಯ ಭವನದ ಅವಶ್ಯವಿದ್ದು, ಶಾಸಕರು ಅನುದಾನ ಒದಗಿಸಿಕೊಡುವಂತೆ ಮನವಿ ಮಾಡಿದರು. ಮೊದಲಿಗೆ ಶ್ರೀ ನಾರಾಯಣ ಗುರುಗಳ ಮೂರ್ತಿಗೆ ಸಂಘದ ಪದಾಧಿಕಾರಿಗಳು ಪುಷ್ಪ ನಮನ ಸಲ್ಲಿಸಿದರು. ವೇದಿಕೆಯಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಗೋಣಿಕೊಪ್ಪ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮುಕುಂದ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬಿಲ್ಲವ ಸೇವಾ ಸಂಘದ ಗೌರವ ಅಧ್ಯಕ್ಷ ಬಿ.ಆರ್.ರಾಜ, ನಾರಾಯಣ ಹಳ್ಳಿಗಟ್ಟು, ಕಾರ್ಯದರ್ಶಿ ಬಿ.ಎಸ್. ಜನಾರ್ದನ ಉಪಸ್ಥಿತರಿದ್ದರು. ಸಂಘದ ಬಿ.ಡಿ.ಪ್ರೇಮಾ ಸ್ವಾಗತಿಸಿದರು, ಖಜಾಂಚಿ ಬಿ.ಎಂ.ಸತೀಶ್ ನಿರೂಪಿಸಿದರೆ, ಉಪಾಧ್ಯಕ್ಷ ಪುರುಷೋತ್ತಮ ವಂದಿಸಿದರು.

ಕಾಡುಪ್ರಾಣಿಗಳ ಭಯದ ನಡುವೆ ಹೆಬ್ಬಾವು ಪ್ರತ್ಯಕ್ಷ



ಸಿದ್ದಾಪುರ, ಸೆ.3– ಕಾಡುಪ್ರಾಣಿಗಳ ಭಯದ ನಡುವೆ ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಬೃಹತ್ ಗಾತ್ರದ ಹೆಬ್ಬಾವು ಒಂದು ಪ್ರತ್ಯಕ್ಷಗೊಂಡು ಕಾರ್ಮಿಕರಲ್ಲಿ ಆತಂಕ ಸೃಷ್ಟಿಸಿದ ಘಟನೆ ಮಾಲ್ದಾರೆ ಸಮೀಪದ ಮಾರ್ಗೊಲ್ಲಿ ತೋಟದಲ್ಲಿ ನಡೆದಿದೆ. ಪ್ರತ್ಯಕ್ಷಗೊಂಡ ಹೆಬ್ಬಾವನ್ನು ಕಂಡು ಭಯಭೀತರಾದ ಕಾರ್ಮಿಕರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ಗಂಟೆಗಳ ಕಾಲವಾದರೂ ಅರಣ್ಯ ಇಲಾಖೆ ಸಿಬ್ಬಂದಿಗಳು ಬಾರದ ಹಿನ್ನೆಲೆ ತೋಟದ ಕಾರ್ಮಿಕರಾದ ಮಣಿ ಹಾಗೂ ಮಂಜು ಸೇರಿದಂತೆ ಇತರ ಕಾರ್ಮಿಕರು ಒಗ್ಗೂಡಿ ಹೆಬ್ಬಾವನ್ನು ಸುರಕ್ಷಿತವಾಗಿ ಸೆರೆ ಹಿಡಿದು ಚೀಲದಲ್ಲಿ ಹಾಕಿ ನಂತರ ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ಹಸ್ತಾಂತರ ಮಾಡಿದರು. ಬಳಿಕ ಅರಣ್ಯ ಇಲಾಖೆ ಸಿಬ್ಬಂದಿಗಳು ಹೆಬ್ಬಾವನ್ನು ಅರಣ್ಯದಲ್ಲಿ ಬಿಟ್ಟಿದ್ದಾರೆ. ಈ ಸಂದರ್ಭ ಉಪವಲಯ ಅರಣ್ಯ ಅಧಿಕಾರಿ ಶ್ರೀನಿವಾಸ್ ಸೇರಿದಂತೆ ಸಿಬ್ಬಂದಿಗಳು ಹಾಜರಿದ್ದರು.

ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿ: ಚಾಲಕ ಸಾವು

ಪಾದಚಾರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಯತ್ನಿಸಿದಾಗ ದುರಂತ

ಮಡಿಕೇರಿ, ಸೆ.3– ರಸ್ತೆ ದಾಟುತ್ತಿದ್ದ ಸಾರ್ವಜನಿಕರಿಗೆ ಕಾರು ಡಿಕ್ಕಿಯಾಗುವುದನ್ನು ತಪ್ಪಿಸಲು ಹೋಗಿ ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಮೃತಪಟ್ಟ ಘಟನೆ ನಗರದಲ್ಲಿ ನಡೆದಿದೆ. ಇಲ್ಲಿನ ಗಣಪತಿ ಬೀದಿ ನಿವಾಸಿ ಭಾಸ್ಕರ್(67) ಎಂಬವರೇ ಮೃತಪಟ್ಟ ದುರ್ದೈವಿಯಾಗಿದ್ದಾರೆ. ಮತ್ತೋರ್ವ ಸಹ ಪ್ರಯಾಣಿಕ ಸುಂಟಿಕೊಪ್ಪದ ರವಿ ಪೂಜಾರಿ ಎಂಬವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅಪಾಯದಿಂದ ಪಾರಾಗಿ, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಭಾಸ್ಕರ್ ಅವರು ವೃತ್ತಿಯಲ್ಲಿ ಆಟೋ ಮೆಕಾನಿಕ್ ಆಗಿದ್ದು, ಸಂಜೆ ವೇಳೆ ನಗರದ ಈದ್ಗಾ ಮೈದಾನದ ಬಳಿ ಕಾರಿನಲ್ಲಿ ಬರುತ್ತಿದ್ದ ಸಂದರ್ಭ ರಸ್ತೆ ದಾಟುತ್ತಿದ್ದ ಸಾರ್ವಜನಿಕರಿಗೆ ಕಾರು ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಯತ್ನಿಸಿದಾಗ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆಬದಿಯಿದ್ದ ವಿದ್ಯುತ್ ಕಂಬ ತಡೆಗೋಡೆಗೆ ಡಿಕ್ಕಿ ಹೊಡೆದಿದೆ. ಇದರಿಂದ ಕಾರು ಚಾಲಕ ಭಾಸ್ಕರ್ ಗಂಭೀರ ಗಾಯಗೊಂಡಿದ್ದು, ತಕ್ಷಣವೇ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಪರೀಕ್ಷಿಸಿದ ವೈದ್ಯರು ಭಾಸ್ಕರ್ ಮೃತಪಟ್ಟಿರುವುದನ್ನು ದೃಢಪಡಿಸಿದ್ದಾರೆ. ಅಪಘಾತದ ತೀವ್ರತೆಗೆ ಕಾರಿನ ಮುಂಭಾಗ ಸಂಪೂರ್ಣ ಜಖಂ ಆಗಿದ್ದು, ವಿದ್ಯುತ್ ಕಂಬ ಮುರಿದು ಬಿದ್ದಿದೆ. ಘಟನಾ ಸ್ಥಳಕ್ಕೆ ನಗರ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಕುರಿತು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ನಾಳೆ ಶಿಕ್ಷಕರ ದಿನಾಚರಣೆ

ಮಡಿಕೇರಿ, ಸೆ.3– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಸಂಯುಕ್ತಾಶ್ರಯದಲ್ಲಿ ಸೆ.5 ರಂದು ಬೆಳಗ್ಗೆ 10 ಗಂಟೆಗೆ ನಗರದ ಕೊಡಗು ಗೌಡ ಸಮಾಜದಲ್ಲಿ ಶಿಕ್ಷಕರ ದಿನಾಚರಣೆ ಮತ್ತು ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು, ಶಾಸಕರಾದ ಡಾ.ಮಂತರ್ ಗೌಡ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ನಗರಸಭೆ ಅಧ್ಯಕ್ಷರಾದ ಎನ್.ಪಿ.ಅನಿತಾ ಇತರರು ಪಾಲ್ಗೊಳ್ಳಲಿದ್ದಾರೆ.

ಗೃಹಲಕ್ಷ್ಮಿಯರ ಖಾತೆಗೆ 2000 ರೂ. ಜಮೆಗೆ ಚಾಲನೆ

ಚಾ.ನಗರ ಜಿಲ್ಲೆಗೆ 47.47 ಕೋಟಿ ರೂ. ಬಿಡುಗಡೆ

ಗೃಹಲಕ್ಷ್ಮಿ ಯೋಜನೆಯಡಿ ಮಾಸಿಕ ರೂ. 2000/-

"ನೋಂದಣಿಗೆ ಗಡುವು ನೀಡದೇ ಇರುವುದರಿಂದ ಫಲಾನುಭವಿಗಳ ಸಂಖ್ಯೆ ಮುಂದೆ ಹೆಚ್ಚುತ್ತ ಹೋಗಲಿದೆ. ನೋಂದಾಯಿತ ಸಂಖ್ಯೆಗೆ ಅನುಗುಣವಾಗಿ ಸರ್ಕಾರ ಅನುದಾನ ಬಿಡುಗಡೆ ಮಾಡಲಿದೆ. ಹಾಗಾಗಿ, ಮುಂದಿನ ತಿಂಗಳು ಫಲಾನುಭವಿಗಳು ಮತ್ತು ಅನುದಾನದ ಮೊತ್ತವೂ ಹೆಚ್ಚಲಿದೆ.

-ಗೀತಾಲಕ್ಷ್ಮೀ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಚಾಮರಾಜನಗರ, ಸೆ.3– ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಗೆ ನಾಲ್ಕೈದು ದಿನಗಳ ಹಿಂದೆ ಮೈಸೂರಿನಲ್ಲಿ ಅದ್ದೂರಿಯಾಗಿ ಚಾಲನೆ ದೊರಕಿದ್ದು, ಯೋಜನೆಯ ಸಂಬಂಧ ಜಿಲ್ಲೆಯ ಫಲಾನುಭವಿಗಳ ಖಾತೆಗೆ ಎರಡು ಸಾವಿರ ಹಣ ಜಮೆ ಮಾಡುವ ಸಲುವಾಗಿ ಸರ್ಕಾರ ಜಿಲ್ಲೆಗೆ 47.47 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ.

ಜಿಲ್ಲೆಯಲ್ಲಿ ಒಟ್ಟು 2.47 ಲಕ್ಷ ಫಲಾನುಭವಿಗಳು ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಈ ಪೈಕಿ 2,37,374 ಮಹಿಳೆಯರಿಗೆ ತಲಾ 2000ದಂತೆ ಪಾವತಿ ಮಾಡಲು ಸರ್ಕಾರ 47,47,48,000 ಮೊತ್ತವನ್ನು ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಬಿಡುಗಡೆ ಮಾಡಿದೆ.

ಜಿಲ್ಲೆಯ ಫಲಾನುಭವಿಗಳ ಖಾತೆಗೆ ಹಣ ಪಾವತಿ ಆರಂಭವಾಗಿದ್ದು, ಕೆಲವರಿಗೆ ಈಗಾಗಲೇ ಜಮೆ ಆಗಿದೆ. ಇನ್ನೂ ಕೆಲವರಿಗೆ ಹಂತ–ಹಂತವಾಗಿ ಪಾವತಿ ಪ್ರಕ್ರಿಯೆ ನಡೆಯುತ್ತಿದ್ದು, ಒಂದೆರಡು ದಿನಗಳಲ್ಲಿ ಪೂರ್ಣವಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

2.77 ಲಕ್ಷ ಫಲಾನುಭವಿಗಳು: ಜಿಲ್ಲೆಯಲ್ಲಿ ಪಡಿತರ ಚೀಟಿಯಲ್ಲಿ ಮನೆಯ ಯಜಮಾನಿ ಎಂದು ನಮೂದಾಗಿರುವ 2.77 ಲಕ್ಷ ಮಹಿಳೆಯರಿದ್ದು, ಇಲ್ಲಿವರೆಗೆ 2.47 ಲಕ್ಷ ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಶೇ. 88ರಷ್ಟು ಪ್ರಗತಿಯಾಗಿದೆ. ನೋಂದಣಿಯಲ್ಲಿ ಜಿಲ್ಲೆ ರಾಜ್ಯದಲ್ಲೇ ಎರಡನೇ ಸ್ಥಾನದಲ್ಲಿದೆ.

ಹಣ ಖಾತೆಗೆ ಜಮೆ ಆದ ಬಳಿಕ ಫಲಾನುಭವಿಗಳ ಮೊಬೈಲ್ ಸಂಖ್ಯೆಗೆ ಸಂದೇಶ ಬರುತ್ತದೆ. ಈಗಾಗಲೇ ಕೆಲವರಿಗೆ ಬಂದಿದೆ. ಎಷ್ಟು ಜನರಿಗೆ ಪಾವತಿಯಾಗಿದೆ ಎಂಬ ಮಾಹಿತಿ ಸಿಗಲು ಇನ್ನೂ ಎರಡು ಮೂರು ದಿನಗಳು ಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಾಂತ್ರಿಕ ಸಮಸ್ಯೆ ಇದ್ದರೆ ಜಮೆಯಾಗದು: ಫಲಾನುಭವಿಗಳ ಬ್ಯಾಂಕ್ ಖಾತೆ ಸಕ್ರಿಯವಾಗಿಲ್ಲದಿದ್ದರೇ, ಖಾತೆಗೆ ಮೊಬೈಲ್, ಆಧಾರ್ ಸಂಖ್ಯೆ ಜೋಡಣೆ ಆಗದಿದ್ದರೇ ಗೃಹಲಕ್ಷ್ಮೀ ಯೋಜನೆಯ 2000 ಮೊತ್ತ ಜಮೆಯಾಗುವುದಿಲ್ಲ.

ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ 5 ಕೆಜಿ ಅಕ್ಕಿಯ ಮೊತ್ತವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುತ್ತಿದ್ದು, ಬ್ಯಾಂಕ್ ಖಾತೆ ಜೋಡಣೆ ಸಮಸ್ಯೆಯಿಂದಾಗಿ 25 ಸಾವಿರದಷ್ಟು ಜನರಿಗೆ ಹಣ ಬಂದಿಲ್ಲ. ಕೆಲವರು ಹಣ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ತಾಂತ್ರಿಕ ಕಾರಣಗಳಿಂದ ಈ ರೀತಿಯ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಇದು ಖಚಿತವಾಗಲು ಎರಡು ಮೂರು ದಿನಗಳ ಬೇಕು. ಎಲ್ಲ ಫಲಾನುಭವಿಗಳು ತಮ್ಮ ಬ್ಯಾಂಕ್ ಖಾತೆಯನ್ನು ಸಕ್ರಿಯವಾಗಿಟ್ಟುಕೊಳ್ಳಬೇಕು. ಆಧಾರ್ ಸಂಖ್ಯೆ ಮೊಬೈಲ್ ಸಂಖ್ಯೆಯನ್ನು ಜೋಡಿಸಿರಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಗೀತಾಲಕ್ಷ್ಮೀ ತಿಳಿಸಿದರು.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಪ್ರತಿಭಟನೆ

ತಲೆ ಮೇಲೆ ಚಪ್ಪಡಿ ಕಲ್ಲು ಹೊತ್ತು ಚಳವಳಿಗಾರರ ಆಕ್ರೋಶ



ಚಾಮರಾಜನಗರ, ಸೆ.3– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ವಿರೋಧಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಿ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾನಿರತರು ತಲೆ ಮೇಲೆ ಚಪ್ಪಡಿಕಲ್ಲು ಹೊತ್ತು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲ ಕಾಲ ರಸ್ತೆತಡೆ ನಡೆಸಿ, ತಮಿಳುನಾಡು, ಕರ್ನಾಟಕ ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವ ಕ್ರಮವನ್ನು ವಿರೋಧಿಸಿ ನಗರದಲ್ಲಿ ಕನ್ನಡ ಪರ ಸಂಘಟನೆಗಳು ನಿರಂತರ ಹೋರಾಟ ಮಾಡುತ್ತಿವೆ. ಇಂದು ಕೂಡ ಪ್ರತಿಭಟನೆ ಮಾಡು ತ್ತಿದ್ದು, ಕಾವೇರಿ ನೀರು ನಿರ್ವಹಣಾ ಮಂಡಳಿ ಕನ್ನಡಿಗರ ಪಾಲಿಗೆ ಕಲ್ಲುಚಪ್ಪಡಿ ಹಾಕಿದೆ ಎಂದು ನಾವು ತಲೆ ಮೇಲೆ ಚಪ್ಪಡಿ ಕಲ್ಲು ಹೊತ್ತು ಪ್ರತಿಭಟನೆ ನಡೆಸಲಾಗಿದೆ ಎಂದರು.

ಕಾವೇರಿ ನೀರು ನಿರ್ವಹಣಾ ಮಂಡಳಿ ನಿರಂತರ ವಾಗಿ ಅನ್ಯಾಯ ಮಾಡಿಕೊಂಡು ಬರುತ್ತಿದೆ. ತಮಿಳುನಾಡು ಸರ್ಕಾರ ಈ ದೇಶದ ಒಕ್ಕೂಟದ ವ್ಯವಸ್ಥೆಗೆ ಅಗೌರವ ಕೊಡುವ ಸರ್ಕಾರವಾಗಿದೆ. ಈ ಸರ್ಕಾರಕ್ಕೆ ಗೌರವ ಅನ್ನುವುದೇ ಇಲ್ಲ. ಮಾತೆತ್ತಿದ್ದರೆ ನೆರೆ ರಾಜ್ಯಗಳ ಮೇಲೆ ಕ್ಯಾತೆ ತೆಗೆಯುವುದು, ಇಲ್ಲಸಲ್ಲದ ಆರೋಪ ಮಾಡುವುದು ಚಾಮೂಲಿಯಾಗಿದೆ. ಈ ವಿಚಾರದಲ್ಲಿ ರಾಜ್ಯದ ಸಂಸದರು, ಕೇಂದ್ರ ಸಚಿವರು ಮೌನ ವಹಿಸಿರುವುದು ಅತ್ಯಂತ ಖಂಡನೀಯವಾಗಿದೆ ಎಂದು ಆರೋಪಿಸಿದರು.

ಕರ್ನಾಟಕ ಸರ್ಕಾರ ರಾಜ್ಯದ ಜನರ ಹಿತ ಕಾಪಾಡದೇ ತಮಿಳುನಾಡಿನ ಒತ್ತಡಕ್ಕೆ ಮಣಿದು ಪ್ರತಿ ದಿನ 5 ಸಾವಿರ ಕ್ಯುಸೆಕ್ ನೀರು ಬಿಡುತ್ತಿರುವುದು ವಿಷಾದನೀಯ. ತಕ್ಷಣವೇ ನೀರು ನಿಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಹಾಗೂ ತಮಿಳುನಾಡು ಸರ್ಕಾರದ ವಿರುದ್ಧ ಜನಾಂದೋಲನ ಮಾಡಬೇಕಾಗುತ್ತದೆ. ತಮಿಳುನಾಡು ಗಡಿ ಬಂದ್ ಮಾಡಬೇಕಾಗುತ್ತದೆ ಎಂದು ಶ್ರೀನಿವಾಸಗೌಡ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಾ.ಮುರಳಿ, ನಿಜಧ್ವನಿಗೋವಿಂದರಾಜು, ಗು. ಪುರುಷೋತ್ತಮ, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಚಾ.ರಾ. ಕುಮಾರ್, ಅಂಬರೀಶ್, ತಾಂಡವಮೂರ್ತಿ, ನಾಗೇಶ್, ಇತರರು ಭಾಗವಹಿಸಿದ್ದರು.

ಜಿಲ್ಲಾ ಅರುಂಧತಿ ಕ್ರೆಡಿಟ್ ಆಪರೇಟಿವ್ ಸೊಸೈಟಿ ಬೆಳವಣಿಗೆಗೆ ಸಹಕರಿಸಿ

ಚಾಮರಾಜನಗರ, ಸೆ.3– ಉದ್ದೇಶಿತ ಜಿಲ್ಲಾ ಅರುಂಧತಿ ಕ್ರೆಡಿಟ್ ಆಪರೇಟಿವ್ ಸೊಸೈಟಿಯಲ್ಲಿ ಹೆಚ್ಚು ಸದಸ್ಯತ್ವ ಪಡೆದು ಬೆಳವಣಿಗೆಗೆ ಸಹಕರಿಸಬೇಕು ಎಂದು ಸಮುದಾಯದವರಲ್ಲಿ ಸಹಕಾರ ಸಂಘಗಳ ನಿವೃತ್ತ ಉಪ ನಿರ್ದೇಶಕ ಇರಸವಾಡಿ ಸಿ.ಮಹದೇವಯ್ಯ ಸಲಹೆ ನೀಡಿದರು.

ನಗರದ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಅರುಂಧತಿ ಕ್ರೆಡಿಟ್ ಆಪರೇಟಿವ್ ಸೊಸೈಟಿಯಲ್ಲಿ ಷೇರುದಾರರ ನೋಂದಾಯಿಸುವ ಸಂಬಂಧ ನಡೆದ ಸಂಘದ ಪ್ರಮೋಟರ್ಸ್‌ಗಳು, ಮುಖಂಡರ ಪೂರ್ವಭಾವಿ ಸಭೆಯಲ್ಲಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉದ್ದೇಶಿತ ಜಿಲ್ಲಾ ಅರುಂಧತಿ ಕ್ರೆಡಿಟ್ ಆಪರೇಟಿವ್ ಸೊಸೈಟಿಗೆ ಸ್ಥಾಪನೆಗಾಗಿ ಸಹಕಾರ ಇಲಾಖೆಗೆ ಅರ್ಜಿ ಸಲ್ಲಿಸಿದ್ದು, ಇಲಾಖೆಯಿಂದ ಅನುಮತಿ ದೊರೆತಿದೆ. ಈ ಸಂಬಂಧವಾಗಿ ಚಾಮರಾಜನಗರ ತಾಲೂಕಿನ ಜಿಲ್ಲಾ ಅರುಂಧತಿ ಕ್ರೆಡಿಟ್ ಆಪರೇಟಿವ್ ಸೊಸೈಟಿಯ ಪ್ರಮೋಟರ್ಸ್, ಮುಖಂಡರ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದರು.

ಸಭೆಯಲ್ಲಿ ಸಭೆಯಲ್ಲಿ ಮುಖ್ಯ ಪ್ರವರ್ತಕ ಅರಕಲವಾಡಿ ಜವರಯ್ಯ, ಸೀನಿಯರ್ ಆಡಿಟ್ ಆಫೀಸರ್ ರೇವಣ್ಣ, ನಗರಸಭಾ ಸದಸ್ಯ ಮಹದೇವಯ್ಯ, ಮೂಡಳ್ಳಿ ಎಚ್.ಮೂರ್ತಿ, ಇಗ್ಗಲೂರು ಹನುಮಂತರಾಜು, ಪ್ರೊ.ಲಿಂಗಣ್ಣ ಹರವೆ, ವಕೀಲರಾದ ಸಿದ್ದಯ್ಯ, ಚನ್ನಬಸವಯ್ಯ, ಸುಂದರ್, ನಿವೃತ್ತ ಶಿಕ್ಷಕ ಚಿಕ್ಕಮಾದಯ್ಯ, ರಾಮಯ್ಯ, ರಾಮಸಮುದ್ರ ಶಿವಕುಮಾರ್, ಎಚ್.ಲಿಂಗರಾಜು, ಮುಳ್ಳೂರು ಮಂಜು, ದ್ವಾರ್ಕಿ, ಬಿ.ಸಿಎಂ ಸಿದ್ದಯ್ಯ, ಶಿವಮಲ್ಲು, ಮಹದೇವಯ್ಯ, ಗುರುಲಿಂಗಯ್ಯ, ಉಪನ್ಯಾಸಕ ರಮೇಶ್ , ಕರ್ನಾಟಕ ಮಾದಿಗ ಮಹಾಸಭಾದ ಜಿಲ್ಲಾಧ್ಯಕ್ಷ ಶಿವಕುಮಾರ್, ಸಿದ್ದಪ್ಪ, ಶಂಕರ್, ಶಿವಕುಮಾರ್, ರಾಜು, ಚಿನ್ನಸ್ವಾಮಿ ಇತರರು ಭಾಗವಹಿಸಿದ್ದರು.



ರೋಟರಿ ಸಂಸ್ಥೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ



560 ಮಂದಿ ತಪಾಸಣೆ, 95 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆ

ಚಾಮರಾಜನಗರ, ಸೆ. 3– ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 560 ಮಂದಿ ತಪಾಸಣೆ ಮಾಡಿಸಿಕೊಂಡರು. 95 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಬುಧವಾರ ಅವರನ್ನು ಕೊಯಂಬತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು.

ರೋಟರಿ ಅಧ್ಯಕ್ಷ ಸಿ.ಎನ್.ಚಂದ್ರಪ್ರಭ ಜೈನ್ ಮಾತನಾಡಿ, ಕಣ್ಣಿನ ದೃಷ್ಟಿ ಎಲ್ಲರಿಗೂ ಮಹತ್ವದ್ದು, ಅದರಲ್ಲೂ ವಿಶೇಷವಾಗಿ ಮಹಿಳೆಯರು, ವಯೋವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ಪೊರೆಗೆ ತುತ್ತಾಗುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿದ್ದು ದಿನನಿತ್ಯ ಜೀವನದಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅವರಿಗೆ ಅನುಕೂಲ ಕಲ್ಪಿಸಲು ರೋಟರಿ ಸಂಸ್ಥೆಯು ಪ್ರತಿ ತಿಂಗಳು ಮೊದಲನೆಯ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸಿದ್ದು, ಇದರ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಶಿಬಿರದಲ್ಲಿ ಭಾಗವಹಿಸಿದ್ದ ಕುಶಾಲನಗರದ ವಿಕಲಚೇತನ ಜಬಿ ಉಲ್ಲಾ ಖಾನ್ ಹಿಂದೆ ಬಲ ಭಾಗದ ಕಣ್ಣನ್ನು ನಮ್ಮ ರೋಟರಿಯ ಶಿಬಿರದಲ್ಲಿ ಮಾಡಿಸಿದ್ದು ಅದರ ಪ್ರಯೋಜನದಿಂದ ಮತ್ತೆ ಎಡ ಭಾಗದ ಕಣ್ಣನ್ನು ಸಹ ಪೊರೆ ಆಪರೇಷನ್ ಮಾಡಿಸಲು ಸಹ ಬಂದಿರುತ್ತಾರೆ. ಇದೊಂದು ಸಂತಸಕರ ಸಂಗತಿಯಾಗಿದ್ದು, ರೋಟರಿ ಸಂಸ್ಥೆಯ ಉಚಿತ ಕಣ್ಣಿನ ತಪಾಸಣಾ ಶಿಬಿರ ಪ್ರಯೋಜನವನ್ನು, ಹೊರಗಡೆ ಜಿಲ್ಲೆಯವರು ಪ್ರಯೋಜನ ಪಡೆಯುತ್ತಿರುವುದು ತುಂಬಾ ಸಂತೋಷ ಉಂಟು ಮಾಡಿದೆ ಎಂದರು.

ಕಾರ್ಯಕ್ರಮದಲ್ಲಿ ಆರ್ಥಿಕ ತಜ್ಞ ಆರ್.ಎಂ. ಚಿಂತಾಮಣಿ, ರೋಟರಿ ಮಾಜಿ ಅಧ್ಯಕ್ಷ ಕೆಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಮಹಮ್ಮದ್ ಅಜೀಜ್ ದೀನ ಮುಂದಿನ ಸಾಲಿನ ಅಧ್ಯಕ್ಷ ರಾಮಸಮುದ್ರ ನಾಗರಾಜು, ರಾಮು, ಸಿ.ವಿ. ಶ್ರೀನಿವಾಸಶೆಟ್ಟಿ, ಮೇಜರ್ ಡೋನರ್ ಜಿ ಆರ್ ಅಶ್ವಥ್ ನಾರಾಯಣ್, ವಲಯ ಪ್ರತಿನಿಧಿಯಾದ ಚೈತನ್ಯ ಹೆಗಡೆ, ಹಾಗೂ ಇನ್ನರ್‌ವೀಲ್ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಪೂಜಾ ಸುಭಾಷ್, ಡಾ.ಪರಮೇಶ್ವರಪ್ಪ, ಸುಂದ್ರಪ್ಪ ಶಿಬಿರ ಪಿಆರ್‌ಓ ವಿಜಯಕಾಂತ್ ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು.

ನಾಳೆ ನಗರದಲ್ಲಿ ಶಿಕ್ಷಕರ ದಿನಾಚರಣೆ ಸಮಾರಂಭ

ಚಾಮರಾಜನಗರ, ಸೆ.3– ಜಿಲ್ಲಾಡಳಿತ, ಜಿಪಂ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆ.5ರಂದು ಬೆಳಗ್ಗೆ 10.30 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ. ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯ ವಿ. ಶ್ರೀನಿವಾಸ ಪ್ರಸಾದ್ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡುವರು.

ಮಲೆ ಮಹದೇಶ್ವರ ಬೆಟ್ಟದ ಅಡುಗೆ ಭಟ್ಟರಿಗೆ ಬೀಳ್ಕೊಡುಗೆ



ಹನೂರು, ಸೆ.3– ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ದಾಸೋಹ ಭವನದಲ್ಲಿ ಅಡುಗೆ ಭಟ್ಟರಾಗಿ 36 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿಯಾದ ಎನ್. ಬಸವಣ್ಣ ಅವರನ್ನು ಸನ್ಮಾನಿಸಿ, ಬೀಳ್ಕೊಡುಗೆ ನೀಡಲಾಯಿತು.

ಈ ಸಂದರ್ಭದಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಚಂದ್ರಶೇಖರ್, ದ್ವಿತೀಯ ದರ್ಜೆ ಸಹಾಯಕ ಸರಗೂರು ಮಹದೇವಸ್ವಾಮಿ, ನೌಕರರ ಸಂಘದ ಗೌರವಾಧ್ಯಕ್ಷ ಮಹದೇವಸ್ವಾಮಿ, ಲಾಡು ವಿಭಾಗದ ಮಹಾದೇವಸ್ವಾಮಿ, ದಾಸೋಹ ಭವನದ ಶಾಸ್ತ್ರಿ, ಜನಾರ್ಧನ್ ಸೇರಿದಂತೆ ಇನ್ನಿತರರು ಹಾಜರಿದ್ದರು.


ಟಿಇಟಿ-2023, ಡಿಫೆನ್ಸ್ ಪರೀಕ್ಷೆಯಲ್ಲಿ ಸಾವಿರಾರು ಅಭ್ಯರ್ಥಿಗಳು ಭಾಗಿ

● ಟಿಇಟಿ ಪರೀಕ್ಷೆಯಲ್ಲಿ 5,879 ಅಭ್ಯರ್ಥಿಗಳು ● ಡಿಫೆನ್ಸ್ ಪರೀಕ್ಷೆಯಲ್ಲಿ 1,552 ಅಭ್ಯರ್ಥಿಗಳು ● 12 ಅಭ್ಯರ್ಥಿಗಳಿಗೆ ಒಬ್ಬ ವೀಕ್ಷಕ ● ಮೇಲುಸ್ತುವಾರಿಗೆ 98 ಅಧಿಕಾರಿಗಳು

ಮೈಸೂರು, ಸೆ.3(ಬಿಎಲ್‌ಯು)- ಉದ್ಯೋಗಕ್ಕಾಗಿ ಚಾತಕ ಪಕ್ಷಿಗಳಂತೆ ಕಾಯುತ್ತಿದ್ದ ನಿರುದ್ಯೋಗಿಗಳಿಗೆ ಆಶಾಕಿರಣವಾದ ಹಲವು ವೃತ್ತಿಪರ ಅರ್ಹತಾ ಪರೀಕ್ಷೆಗಳು ಮೈಸೂರಿನಲ್ಲಿ ಇಂದು ನಡೆಯಿತು. ಮೈಸೂರಿನ ಹಲವು ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಟಿಇಟಿ(ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ) ಹಾಗೂ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯ ಪರೀಕ್ಷೆಯಲ್ಲಿ ಸಾವಿರಾರು ಅಭ್ಯರ್ಥಿಗಳು ಭಾಗಿಯಾಗಿದ್ದರು.

ಮೈಸೂರು ನಗರದ 35 ಪರೀಕ್ಷಾ ಕೇಂದ್ರಗಳಲ್ಲಿ ಟಿಇಟಿ ಹಾಗೂ 4 ಪರೀಕ್ಷಾ ಕೇಂದ್ರಗಳಲ್ಲಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಪರೀಕ್ಷೆಗಳು ನಡೆಯಿತು.

ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಭಾಗಿಯಾಗಲು 6,674 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಆದರೆ ಇವರಲ್ಲಿ 5,879 ಅಭ್ಯರ್ಥಿಗಳು ಮಾತ್ರ ಪರೀಕ್ಷೆಯಲ್ಲಿ ಭಾಗಿಯಾಗಿದ್ದರು. ಇಂದು ಬೆಳಗ್ಗೆ 9.30 ರಿಂದ 1.30 ಗಂಟೆ ತನಕ ನಡೆದ ಟಿಇಟಿ ಪರೀಕ್ಷೆಗಾಗಿ ಮೇಲುಸ್ತುವಾರಿ ವಹಿಸಲು 98 ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು. ಜಿಲ್ಲಾಧಿಕಾರಿಗಳ ನೇತೃತ್ವದ ಅಧಿಕಾರಿಗಳ ತಂಡದಲ್ಲಿ ಅಪರ ಜಿಲ್ಲಾಧಿಕಾರಿ, ಡಿಡಿಪಿಐ, ಮಾರ್ಗಾಧಿಕಾರಿ, ಬಿಇಒ, ಅಧೀಕ್ಷಕರು ಹಾಗೂ ಜಾಗೃತ ದಳದವರು ಮೇಲುಸ್ತುವಾರಿ ವಹಿಸಿದ್ದರು. ಪರೀಕ್ಷೆ ವೇಳೆ ಯಾವುದೇ ಲೋಪ ಆಗದಂತೆ ಅಧಿಕಾರಿಗಳು ಮುತುವರ್ಜಿ ವಹಿಸಿದ್ದರು.



ಟಿಇಟಿ ಪರೀಕ್ಷೆಯಲ್ಲಿ ಭಾಗಿಯಾಗಿದ್ದವರಿಗೆ 18 ರಿಂದ 35 ವರ್ಷದ ತನಕ ವಯೋಮಿತಿ ನಿಗದಿ ಮಾಡಲಾಗಿತ್ತು ಪದವಿಯಲ್ಲಿ ಶೇಕಡ 50 ಕ್ಕಿಂತ ಹೆಚ್ಚು ಅಂಕ ಗಳಿಸಿದವರಿಗೆ ಮಾತ್ರ ಪರೀಕ್ಷೆಗೆ ಅವಕಾಶ ಕಲ್ಪಿಸಲಾಗಿತ್ತು

ಇನ್ನು ಯುಪಿಎಸ್‌ಸಿ(ಕೇಂದ್ರ ಲೋಕಸೇವಾ ಆಯೋಗ) ಆಯೋಜಿಸಿದ್ದ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಮತ್ತು ಕಂಬೈನ್ಡ್ ಡಿಫೆನ್ಸ್ ಸರ್ವೀಸಸ್ ಎಕ್ಸಾಮಿನೇಷನ್ ಪರೀಕ್ಷೆಯಲ್ಲಿ 1,552 ಅಭ್ಯರ್ಥಿಗಳು ಭಾಗಿಯಾಗಿದ್ದರು. ಮೈಸೂರಿನ ಮಹಾರಾಜ ಪದವಿಪೂರ್ವ ಕಾಲೇಜು, ಮಹಾರಾಣಿ ಪದವಿ ಪೂರ್ವ ಕಾಲೇಜು, ಮರಿಮಲ್ಲಪ್ಪ ಕಾಲೇಜು ಹಾಗೂ ಒಂಟಿಕೊಪ್ಪಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪರೀಕ್ಷೆಗಳು ನಡೆಯಿತು.

ಪರೀಕ್ಷೆ ಸುಸೂತ್ರವಾಗಿ ನಡೆಯಲು ಒಬ್ಬ ಮುಖ್ಯಸ್ಥರು ಹಾಗೂ ಜಿಲ್ಲಾಧಿಕಾರಿ ಕಚೇರಿಯಿಂದ ನಿಯೋಜನೆಗೊಂಡಿದ್ದ ಒಬ್ಬ ಅಧಿಕಾರಿಯನ್ನು ನಿಯುಕ್ತಿಗೊಳಿಸಲಾಗಿತ್ತು. ಪರೀಕ್ಷೆ ಬರೆಯುತ್ತಿದ್ದ 12 ಅಭ್ಯರ್ಥಿಗೆ ಒಬ್ಬ ವೀಕ್ಷಕರನ್ನು ನೇಮಕ ಮಾಡಲಾಗಿತ್ತು.

ನಗರ ಪೊಲೀಸ್ ಆಯುಕ್ತ ರಮೇಶ್, ಪರೀಕ್ಷಾ ಕೇಂದ್ರದ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಪ್ರತಿಯೊಂದು ಪರೀಕ್ಷಾ ಕೇಂದ್ರದ ಬಳಿ ಪೊಲೀಸರು ಹದ್ದಿನ ಕಣ್ಣಿಟ್ಟಿದ್ದರು. ಯಾವುದೇ ಅಪರಿಚಿತ ವ್ಯಕ್ತಿ ಪರೀಕ್ಷಾ ಕೇಂದ್ರದ ಬಳಿ ಬರದಂತೆ ಎಚ್ಚರಿಕೆ ವಹಿಸಿದ್ದರು.



ನ್ಯಾಷನಲ್ ಸ್ಪೋರ್ಟ್ಸ್ ಫೆಡರೇಷನ್ ವತಿಯಿಂದ ನೇಪಾಳದಲ್ಲಿ ಆಯೋಜಿಸಿದ್ದ 19 ವರ್ಷದೊಳಗಿನ ಕಬಡ್ಡಿ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಭಾರತ ತಂಡ ರನ್ನರ್ ಅಪ್ ಪ್ರಶಸ್ತಿ ಪಡೆದಿದ್ದು, ಭಾರತ ತಂಡವನ್ನು ಪ್ರತಿನಿಧಿಸಿದ್ದ ಮೈಸೂರಿನ ಇಟ್ಟಿಗೆಗೂಡು ನಿವಾಸಿಗಳಾದ ರಾಜೇಂದ್ರ ಮತ್ತು ಹೇಮಂತ್ ಕುಮಾರ್ ಅವರನ್ನು ಸ್ಥಳೀಯರು ಅಭಿನಂದಿಸಿ, ಆತ್ಮೀಯವಾಗಿ ಬರಮಾಡಿಕೊಂಡರು. ಈ ಪಂದ್ಯಾವಳಿಯಲ್ಲಿ ಭಾರತ, ನೇಪಾಳ, ಪಾಕಿಸ್ತಾನ, ಕೊರಿಯಾ, ಶ್ರೀಲಂಕಾ, ಹಾಂಕಾಂಗ್ ಸೇರಿದಂತೆ 8 ರಾಷ್ಟ್ರಗಳು ಪಾಲ್ಗೊಂಡಿದ್ದವು.

ರಾಷ್ಟ್ರೀಯ ಶಿಕ್ಷಕರ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಶಿಕ್ಷಕರಿಗೆ 'ಗುರು ಸೇವಾ ರತ್ನ' ಪ್ರಶಸ್ತಿ ಪ್ರದಾನ



ದೀಪಾ ಎನ್. | ಅಕ್ಷಯ್ ಮಹಂತ್ | ವಿ।।ಎಸ್.ಕೃಷ್ಣಮೂರ್ತಿ | ಬಿ.ಶಾಂತರಾಮ್ | ಜಸೀಲಾ | ವಿ।।ಎಸ್.ಎನ್.ಮೇಘನಾರಾವ್ | ಅಶ್ವಿನಿಗೌಡ

ಮೈಸೂರು:ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ರಾಷ್ಟ್ರೀಯ ಶಿಕ್ಷಕರ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಶಿಕ್ಷಕರಿಗೆ 'ಗುರು ಸೇವಾ ರತ್ನ' ಪ್ರಶಸ್ತಿಯನ್ನು ಸೆ.5 ರಂದು ಬೆಳಗ್ಗೆ 11 ಗಂಟೆಗೆ ನಗರದ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ನೀಡಿ ಗೌರವಿಸಲಾವುದು.

ದೀಪಾ ಎನ್ (ಶಿಕ್ಷಣ ಕ್ಷೇತ್ರ), ಅಕ್ಷಯ್ ಮಹಂತ್ (ಕ್ರೀಡಾ ಕ್ಷೇತ್ರ), ವಿದ್ವಾನ್ ಎಸ್. ಕೃಷ್ಣಮೂರ್ತಿ (ಧಾರ್ಮಿಕ ಕ್ಷೇತ್ರ), ಯೋಗಾಚಾರ್ಯ ಬಿ.ಶಾಂತರಾಮ್ (ಯೋಗ ಕ್ಷೇತ್ರ), ಜಸೀಲಾ (ವೈದ್ಯಕೀಯ ಕ್ಷೇತ್ರ), ವಿದುಷಿ ಎಸ್.ಎನ್.ಮೇಘನಾ ರಾವ್ (ಕಲಾ ಕ್ಷೇತ್ರ), ಅಶ್ವಿನಿ.ಪಿ.ಗೌಡ (ಬ್ಯೂಟಿಷಿಯನ್ ಕ್ಷೇತ್ರ) ಇವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಶ್ರೀದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ತಿಳಿಸಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮಾಜಿ ಮೇಯರ್ ಸಂದೇಶಸ್ವಾಮಿ, ಆಯೂಬ್ ಖಾನ್, ಸಾಮಾಜಿಕ ಕಾರ್ಯಕರ್ತರಾದ ಗೌರಿ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲ್ ಪೆನ್‌ನಿಂದ ವಿಜ್ಞಾನಿಗಳ ಚಿತ್ರ ರಚನೆ

ಯು.ಜಿ.ಮೋಹನ್ ಕುಮಾರ್ ಹೆಸರು ಏಷ್ಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆ



ಮೈಸೂರು, ಸೆ.3(ಎಂಟಿವೈ)- ಬಾಲ್ ಪೆನ್‌ನಿಂದ ವಿಜ್ಞಾನಿಗಳ ಚಿತ್ರ ರಚಿಸಿರುವ ತಾಲೂಕಿನ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಶಿಕ್ಷಣ ಸಂಯೋಜಕರಾಗಿರುವ ಯು.ಜಿ. ಮೋಹನ್ ಕುಮಾರ್ ಆರಾಧ್ಯ ಅವರ ಹೆಸರು ಏಷ್ಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆಯಾಗಿದೆ ಎಂದು ಮೈಸೂರು ಸೈನ್ಸ್ ಫೌಂಡೇಷನ್ ಅಧ್ಯಕ್ಷ ಸಿ. ಕೃಷ್ಣೇಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಮೈಸೂರು ಸೈನ್ಸ್ ಫೌಂಡೇಷನ್ ಹಾಗೂ ರಾಜ್ಯ ವಿಜ್ಞಾನ ಪರಿಷತ್ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏಷ್ಯಾ ಖಂಡದ ವ್ಯಾಪ್ತಿಗೆ ಬರುವ ಎಲ್ಲಾ ದೇಶಗಳನ್ನೊಳಗೊಂಡ ವಿಜ್ಞಾನಿಗಳ ಚಿತ್ರವನ್ನು ಯು.ಜಿ. ಮೋಹನ್ ಕುಮಾರ್ ಆರಾಧ್ಯ ಲೇಖನಿಯಿಂದ ರಚಿಸಿದ್ದಾರೆ. ಚಿತ್ರ ರಚನೆಯಲ್ಲಿ ಸಾಧನೆ ಮಾಡಿರುವ ಕಾರಣ ಇವರ ಹೆಸರು ಏಷ್ಯಾ ಬುಕ್ ಆಫ್ ರೆಕಾರ್ಡ್ ಸೇರಿದೆ. ಇದಕ್ಕೂ ಮೊದಲು ಏಷ್ಯಾ ಬುಕ್ ಆಫ್ ರೆಕಾರ್ಡ್ ತಂಡವು ವಿವಿಧ ಆಯಾಮಗಳಲ್ಲಿ ವಿಜ್ಞಾನಿಗಳ ಚಿತ್ರ ರಚನೆಯ ಬಗ್ಗೆ ಸುದೀರ್ಘ ದಾಖಲೆಗಳನ್ನು ಪರಿಶೀಲಿಸಿ ಅಂತಿಮವಾಗಿ ಹೆಸರನ್ನು ಸೇರ್ಪಡೆ ಮಾಡಿದೆ. ಇವರು 700ಕ್ಕೂ ಹೆಚ್ಚು ಪ್ರಸಿದ್ಧ ವಿಜ್ಞಾನಿಗಳ ಭಾವಚಿತ್ರಗಳನ್ನು ರಚಿಸಿದ್ದು, ಈ ಸಂಖ್ಯೆ 1200ಅನ್ನು ದಾಟಲಿದೆ ಎಂದರು.

ಇದೇ ವೇಳೆ ಮೈಸೂರು ಸೈನ್ಸ್ ಫೌಂಡೇಷನ್ ಹಾಗೂ ರಾಜ್ಯ ವಿಜ್ಞಾನ ಪರಿಷತ್ ವತಿಯಿಂದ ಯು.ಜಿ. ಮೋಹನ್ ಕುಮಾರ್ ಆರಾಧ್ಯ ಅವರಿಗೆ ಶುಭ ಹಾರೈಸಲಾಯಿತು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಡಾ.ಶೇಖರ್ ನಾಯಕ್, ಉಪಾಧ್ಯಕ್ಷ ಹೆಚ್.ವಿ.ಮುರುಳೀಧರ್, ಮೈಸೂರು ಸೈನ್ಸ್ ಫೌಂಡೇಷನ್ ಕಾರ್ಯದರ್ಶಿ ಜಿ.ಬಿ.ಸಂತೋಷ್ ಕುಮಾರ್ ಇದ್ದರು.

ಜಿಂಬಾಬ್ವೆ ಕ್ರಿಕೆಟ್ ತಂಡದ ಮಾಜಿ ನಾಯಕ ಹೀತ್ ಸ್ಟ್ರೀಕ್ ನಿಧನ

ಹರಾರೆ, ಸೆ.3- ಜಿಂಬಾಬ್ವೆ ಕ್ರಿಕೆಟ್ ತಂಡದ ಮಾಜಿ ನಾಯಕ ಹೀತ್ ಸ್ಟ್ರೀಕ್



(49 ವರ್ಷ) ಭಾನುವಾರ ಬೆಳಗ್ಗೆ ನಿಧನರಾಗಿದ್ದಾರೆ. ಈ ಬಗ್ಗೆ ಸ್ವತಃ ಹೀತ್ ಸ್ಟ್ರೀಕ್ ಅವರ ಪತ್ನಿ ನಾಡಿನ್ ಸ್ಟ್ರೀಕ್ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದು, ಅವರ ನಿಧನವನ್ನು ಖಚಿತಪಡಿಸಿದ್ದಾರೆ. ಮೇ ತಿಂಗಳ ಆರಂಭದಲ್ಲಿ, ಸ್ಟ್ರೀಕ್ ಕ್ಯಾನ್ಸರ್ ವಿರುದ್ಧ ಹೋರಾಡುತ್ತಿದ್ದಾರೆ ಮತ್ತು ದಕ್ಷಿಣ ಆಫ್ರಿಕಾದ ಪ್ರಸಿದ್ಧ ಆಂಕೊಲಾಜಿಸ್ಟ್ ಒಬ್ಬರ ಅಡಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ವರದಿಯಾಗಿದೆ.

ಸಿದ್ದರಾಮಯ್ಯ ರಾಜಕೀಯ ಜೀವನದ ಸಾಧನೆ ಬಗ್ಗೆ ಚರ್ಚೆಗೆ ಸಿದ್ಧ

ಸೆ.6ರಂದು ಬಹಿರಂಗ ಚರ್ಚೆಗೆ ಪ್ರತಾಪ್ ಸಿಂಹಗೆ ಲಕ್ಷ್ಮಣ ಸವಾಲು

ಮೈಸೂರು, ಸೆ.3(ಬಿಎಲ್‌ಯು) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಜೀವನದ ಸಾಧನೆಗಳ ಬಗ್ಗೆ ಚರ್ಚಿಸಲು ನಾವು ಸಿದ್ಧರಿದ್ದು, ಸೆಪ್ಟಂಬರ್ 6ರಂದು ಬಹಿರಂಗ ಚರ್ಚೆಗೆ ಬರಲಿ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸಂಸದ ಪ್ರತಾಪ್ ಸಿಂಹ ಅವರಿಗೆ ಸವಾಲು ಹಾಕಿದ್ದಾರೆ.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಮಾಡಿರುವ ಕೆಲಸಗಳ ದಾಖಲೆಗಳನ್ನು ನಾವು ತರುತ್ತೇವೆ. ನಿಮ್ಮ ಸಾಧನೆ ಏನು ಎಂದು ನೀವು ದಾಖಲೆ ತನ್ನಿ, ಸೆಪ್ಟಂಬರ್ 6ರಂದು ನಿಮ್ಮ ಕಚೇರಿಯಲ್ಲೆ ಚರ್ಚೆ ಮಾಡಲು ನಾವು ಸಿದ್ಧರಿದ್ದೇವೆ ಎಂದು ಹೇಳಿದರು.

ನಿಮ್ಮ ಸುಳ್ಳು, ನಿಮ್ಮ ಡೋಂಗಿತನ ಎಲ್ಲರಿಗೂ ತಿಳಿದಿರುವ ವಿಚಾರ. ಈ ಹಿನ್ನೆಲೆ ನಿಮ್ಮನ್ನು ಸೋಲಿಸಿ ಎಂದು ಸಿದ್ದರಾಮಯ್ಯ ಕರೆ ನೀಡಿದ್ದಾರೆ. ಇದರಲ್ಲಿ ತಪ್ಪೇನಿದೆ ಎಂದು ಪ್ರತಾಪ್ ಸಿಂಹಗೆ ಕುಟುಕಿದರು.

ಗ್ರೇಟರ್ ಮೈಸೂರು ಮಾಡಲು ಸಿದ್ದರಾಮಯ್ಯ ಅಡ್ಡಗಾಲು ಹಾಕುತ್ತಿದ್ದಾರೆಂದು ಪ್ರತಾಪ್ ಸಿಂಹ ಸುಳ್ಳು ಪ್ರಚಾರ ಮಾಡುತ್ತಿದ್ದಾರೆ. ಆದರೆ ಗ್ರೇಟರ್ ಮೈಸೂರು ಮಾಡಲು ಕೆಲವು ಮಾನದಂಡಗಳಿವೆ. ಗ್ರೇಟರ್ ಮೈಸೂರು ಮಾಡಲು 200 ಕಿಲೋಮೀಟರ್ ವಿಸ್ತೀರ್ಣ ಇರಬೇಕು. ಆದರೆ ಮೈಸೂರು 128 ಕಿಲೋಮೀಟರ್ ವಿಸ್ತೀರ್ಣ ಹೊಂದಿದೆ. ಈ ಕುರಿತ ಸಾಮಾನ್ಯ ಜ್ಞಾನ ಕೂಡ ನಿಮಗೆ ಇಲ್ಲವೆ? ನಿಮ್ಮ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದಾಗ ಗ್ರೇಟರ್ ಮೈಸೂರು ನಿಮ್ಮ ನೆನಪಿಗೆ ಬರಲಿಲ್ಲವೆ ಎಂದು ಲಕ್ಷ್ಮಣ ಪ್ರತಾಪ್ ಸಿಂಹಗೆ ಪ್ರಶ್ನಿಸಿದರು.

ಮೈಸೂರು ನಗರ ಪಾಲಿಕೆ ಕೌನ್ಸಿಲ್ ಸಭೆಯನ್ನು ಮುಂದೂಡಲು ಸ್ಪಷ್ಟ ಕಾರಣವಿದೆ. ನಗರಾಭಿವೃದ್ಧಿ ಸಚಿವರ ಸಭೆ ಕಳೆದ 15 ದಿನದ ಹಿಂದೆಯೆ ನಿಗದಿ ಆಗಿತ್ತು. ಈ ಕಾರಣ ಅಂದು ಸಭೆ ಮುಂದೂಡಲಾಗಿತ್ತು. ಇದನ್ನು ತಿಳಿಯದ ಪ್ರತಾಪ್ ಸಿಂಹ ಕೈಯಲ್ಲಿ ಆಗದವರು ಮೈ ಪರಚಿಕೊಂಡರು ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ವಿರುದ್ಧ ಟೀಕೆ ಮಾಡಿರುವ ಶಾಸಕ ಜಿ.ಟಿ.ದೇವೇಗೌಡರ ಮಾತನ್ನು ಪ್ರತಾಪ್ ಸಿಂಹ ಸ್ಕ್ರಿಪ್ಟ್ ಮಾಡಿ ಕೊಟ್ಟಿದ್ದಾರೆ. ಅಷ್ಟಕ್ಕೂ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಜಿ.ಟಿ.ದೇವೇಗೌಡರ ಕೊಡುಗೆ ಏನು. ಸಿದ್ದರಾಮಯ್ಯ ಅವರು ಸಾಕಾರಗೊಳಿಸಿದ ಯೋಜನೆಗಳನ್ನು ಬಿಟ್ಟು, ಜಿ.ಟಿ. ದೇವೇಗೌಡರು ಕ್ಷೇತ್ರಕ್ಕೆ ಏನೂ ಮಾಡಿಲ್ಲ. ಈ ಬಗ್ಗೆ ಚರ್ಚೆ ಮಾಡಲು ಜಿ.ಟಿ.ದೇವೇಗೌಡರು ಪ್ರತಾಪ್ ಸಿಂಹ ಜೊತೆಗೆ ಬರಲಿ ಎಂದು ಲಕ್ಷ್ಮಣ ಸವಾಲು ಹಾಕಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಾವೇರಿ ನಿರ್ವಹಣಾ ಮಂಡಳಿ ರಚನೆ ಮಾಡಿದ್ದಾರೆ. ಕೇಂದ್ರ ಚೀಫ್ ಇಂಜಿನಿಯರ್ ಇದರ ಮುಖ್ಯಸ್ಥರಾಗಿರುತ್ತಾರೆ. ಜೊತೆಗೆ ಎಲ್ಲಾ ರಾಜ್ಯಗಳ ಇಂಜಿನಿಯರ್‌ಗಳು ಮಂಡಳಿಯಲ್ಲಿ ರುತ್ತಾರೆ. ಕಾವೇರಿ ನೀರು ಕೊಡು ಎಂದು ಹೇಳಿದವರು ನೀವೆ. ಈ ವಿಚಾರವನ್ನೆಲ್ಲಾ ಮರೆಮಾಚಿ ಸುಳ್ಳು ಪ್ರಚಾರ ಮಾಡುತ್ತಿರುವರು ನೀವೆ ಎಂದು ಕಿಡಿಕಾರಿದರು. ರಾಜ್ಯದಲ್ಲಿ 25 ಬಿಜೆಪಿ ಸಂಸದರಿದ್ದರೂ ನಿಮ್ಮದೆ ಸರ್ಕಾರದಿಂದ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲಿಲ್ಲ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಾವೇರಿ ನೀರಿನ ವಿಚಾರದಲ್ಲಿ ವಾಸ್ತವತೆ ತಿಳಿದರೂ ರಾಜಕಾರಣಕ್ಕಾಗಿ ಮಾತನಾಡುತ್ತಾರೆ ಎಂದು ಲಕ್ಷ್ಮಣ್ ಹೇಳಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ತಮಿಳುನಾಡಿಗೆ ಕಾವೇರಿ ನೀರು

ಸಂಸದರು, ಸಚಿವರು, ಶಾಸಕರ ಮನೆ ಮುಂದೆ ಪ್ರತಿಭಟನೆಗೆ ನಿರ್ಧಾರ

ಸರ್ವೋದಯ ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ

ಮೈಸೂರು, ಸೆ.3(ಎಂಟಿವೈ)- ಕಾವೇರಿ ನದಿ ನೀರಿನ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರದೆ ಮೌನವಹಿಸಿ, ರಾಜ್ಯದ ರೈತರ ಸಂಕಷ್ಟಕ್ಕೆ ಸ್ಪಂದಿಸದೇ ನಿರ್ಲಕ್ಷ್ಯ ವಹಿಸಿರುವ ಸಂಸದರು, ಸಚಿವರು ಹಾಗೂ ಶಾಸಕರ ಮನೆ ಮುಂದೆ ಸರ್ವೋದಯ ಕರ್ನಾಟಕ ಪಕ್ಷದ ವತಿಯಿಂದ ವಿಭಿನ್ನವಾಗಿ ಪ್ರತಿಭಟಿಸಲು ನಿರ್ಧರಿಸಲಾಗಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲದ ಛಾಯೆ ಆವರಿಸಿದೆ. ಮಳೆ ಕೊರತೆಯಿಂದ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಕೃಷಿ ಚಟುವಟಿಕೆಗೆ ರೈತರು ಸಿದ್ಧತೆ ಮಾಡಿಕೊಂಡಿದ್ದರೂ, ನೀರು ಬಿಡುಗಡೆ ಮಾಡದ ಕಾರಣ ಕೃಷಿ ಮುಂದುವರೆಸಲು ಸಾಧ್ಯವಾಗದೆ ತೊಂದರೆಗೀಡಾಗಿದ್ದಾರೆ. ಇಂತಹ ಸಂದರ್ಭದಲ್ಲೂ ತಮಿಳುನಾಡು ಕ್ಯಾತೆ ತೆಗೆದಿದ್ದು, ನ್ಯಾಯಾಲಯದ ಆದೇಶದ ಮೇರೆಗೆ ನಮ್ಮ ಜಲಾಶಯದಿಂದ ತಮಿಳುನಾಡಿಗೆ ನೀರು ಹರಿಸಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ರಾಜ್ಯ ಪ್ರತಿನಿಧಿಸುವ 28 ಸಂಸದರು ವಿಫಲರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಸಂಸದರು, ಸಚಿವರು ಹಾಗೂ ಶಾಸಕರ ಮನೆ ಮುಂದೆ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದರು.



ಕಾವೇರಿ ನ್ಯಾಯಾಧೀಕರಣ ಅಂತಿಮ ತೀರ್ಪಿನ ಕಲಂ 7ರಲ್ಲಿ ಕಾವೇರಿ ಜಲಾನಯನ ಪ್ರದೇಶಗಳ ರಾಜ್ಯಗಳು ಸಂಕಷ್ಟದ ಸಮಯದಲ್ಲಿ ನೀರು ಹಂಚಿಕೆ ಪ್ರಮಾಣವನ್ನು ಮಳೆಯಾಧಾರಿತವಾಗಿ ಬಗೆಹರಿಸಿಕೊಳ್ಳುವಂತೆ ಸ್ಪಷ್ಟ ತೀರ್ಪು ಇದ್ದರೂ ಸಹ ರಾಜ್ಯದಲ್ಲಿ ಅಧಿಕಾರ ಚುಕ್ಕಾಣಿ ಹಿಡಿಯುವ ಯಾವುದೇ ಸರ್ಕಾರವೂ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಬದಲಾಗಿ ತಮ್ಮ ರಾಜಕೀಯ ಹಿತಾಸಕ್ತಿಗಾಗಿ ರಾಜ್ಯದ ರೈತರು ಹಾಗೂ ಜನತೆಯನ್ನು ಬಲಿಪಶುಗಳನ್ನಾಗಿ ಮಾಡುತ್ತಿರುವುದನ್ನು ಖಂಡಿಸುವುದಾಗಿ ಹೇಳಿದರು.

ಕಾವೇರಿ ನೀರಿನ ಹಂಚಿಕೆ ವಿಷಯದಲ್ಲಿ ಕೇಂದ್ರದ ನೀರಾವರಿ ಕಾರ್ಯದರ್ಶಿಗಳ ಹಾಗೂ ಸಂಬಂಧಪಟ್ಟವರ ಜೊತೆ ರಾಜ್ಯದ ಪರಿಸ್ಥಿತಿಯ ಬಗ್ಗೆ ಮನವರಿಕೆ ಮಾಡುವಂತಹ ಯಾವುದೇ ಗಂಭೀರವಾದ ಪ್ರಯತ್ನವನ್ನೂ ಸಹ ನಮ್ಮ ಸಂಸದರು ಕೈಗೊಂಡಿಲ್ಲ. ಬರ ಪರಿಸ್ಥಿತಿಯ ಬಗ್ಗೆ ಮುಂದಾಲೋಚನೆ ಮಾಡಿಲ್ಲ ಎಂದು ಆರೋಪಿಸಿದರು.

ರಾಜ್ಯದಲ್ಲಿ ಪ್ರಸಕ್ತ ವರ್ಷ 130ಕ್ಕೂ ಹೆಚ್ಚಿನ ತಾಲೂಕುಗಳಲ್ಲಿ ಬರಗಾಲವಿದೆ ಎಂದು ಅಂಕಿ ಅಂಶಗಳು ಹೇಳುತ್ತಿದ್ದರೂ ಸಹ ರಾಜ್ಯ ಸರ್ಕಾರ ಬರಗಾಲವನ್ನು ಘೋಷಿಸಿ, ಬರ ನಿರ್ವಹಣೆಯ ಬಗ್ಗೆ ತುರ್ತು ಕ್ರಮ ಕೈಗೊಳ್ಳುವಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿದೆ. ಇದಕ್ಕೆ ರಾಷ್ಟ್ರೀಯ ವಿಪತ್ತು ಕ್ಷಿಪ್ರ ಕಾರ್ಯಪಡೆ (ಎನ್‌ಡಿಆರ್‌ಎಫ್) ಯೋಜನೆಯ ಪರಿಹಾರದೊಂದಿಗೆ ಸರ್ಕಾರವೂ ರೈತರ ನೆರವಿಗೆ ತುರ್ತಾಗಿ ಧಾವಿಸಬೇಕು ಎಂದು ಒತ್ತಾಯಿಸಿದರು. ರಾಜ್ಯ ಸರ್ಕಾರ ಕಾವೇರಿ ನೀರು ಸಲಹಾ ಸಮಿತಿ (ಐಸಿಸಿ) ಮುಂದೆ ಕಾವೇರಿ ಕೊಳ್ಳದ ರೈತರ ಬೆಳೆಗಳಿಗೆ ಕಟ್ಟು ನೀರಿನ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಸೂಚನಾ ಪತ್ರ ಹೊರಡಿಸಿರುತ್ತದೆ. ಈ ಸೂಚನೆಯಂತೆ ರೈತರು ಬೆಳೆ ಬೆಳೆದಿದ್ದು, ನೀರಿನ ಕೊರತೆ ಎದುರಾಗಿದೆ. ಸರ್ಕಾರ ತನ್ನ ಸೂಚನೆಗೆ ಬದ್ಧವಾಗಿ ನೀರು ನೀಡದಿದ್ದಲ್ಲಿ, ಪರಿಹಾರವಾಗಿ ನಮ್ಮ ರೈತರಿಗೆ ಪ್ರತಿ ಎಕರೆಗೆ 30,000 ರೂ. ಪರಿಹಾರ ಕೊಡಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಸ್ವಾಮಿಗೌಡ, ಪುನೀತ್, ನಾಗಣ್ಣ ಹಾಗೂ ಅಭಿಜಿತ್ ಇದ್ದರು.



ವಾರಭವಿಷ್ಯ

3.9.2023 ರಿಂದ 9.9.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಸಿಂಹ, ಚಂದ್ರ-ಮೀನ, ಮೇಷ, ವೃಷಭ, ಮಿಥುನ, ಕುಜ-ಕನ್ಯಾ, ಬುಧ-ಸಿಂಹ, ಗುರು-ಮೇಷ, ಶುಕ್ರ-ಕಟಕ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವೃತ್ತಿಪರ ವ್ಯವಹಾರಗಳಲ್ಲಿ ಅಲ್ಪ ಲಾಭವನ್ನು ಪಡೆಯುತ್ತೀರಿ. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆಯಿಂದ ಅಸಮಾಧಾನ ಉಂಟಾಗುತ್ತದೆ. ವಾರ ಮಧ್ಯಾನಂತರ ನಿಮ್ಮ ದೀರ್ಘ ಪರಿಶ್ರಮದ ಫಲವಾಗಿ ಇಷ್ಟ ಕಾರ್ಯಗಳು ಕೈಗೂಡುತವೆ. ಹೊಸ ವಸ್ತ್ರ, ಆಭರಣ ಕೊಳ್ಳುವುದರಿಂದ ಶ್ರೀಮತಿಗೆ ಸಂತೋಷ. ನಿರುದ್ಯೋಗಿಗಳು ಸಂದರ್ಶನದಲ್ಲಿ ಯಶಸ್ವಿಯಾಗುವರು.

ಶ್ರೀ ಗಣಪತಿ ಆರಾಧನೆ. ಶುಭ ಸಂಖ್ಯೆ-6.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದಾರಂಭಕ್ಕೆ ಗೆಳೆಯರೊಂದಿಗೆ ಭೋಜನ, ಮನರಂಜನಾ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ. ಸರ್ಕಾರಿ ಅಧಿಕಾರಿಗಳಿಂದ ನಿಮ್ಮ ಸಮಸ್ಯೆಗೆ ಪರಿಹಾರ ದೊರಕುವುದು. ಮನೆಯ ಹೊರಗೆ ಸಮಸ್ಯೆಗಳು ಎದುರಾದರೂ ಚಾಕಚಕ್ಯತೆಯಿಂದ ಪರಿಹಾರವಾಗುತ್ತವೆ. ವ್ಯಾಪಾರ ವಿಸ್ತರಣೆಯಲ್ಲಿನ ಅಡೆತಡೆಗಳು ನಿವಾರಣೆಯಾಗುತ್ತವೆ. ವಾರದ ಕಡೆಗೆ ಕೆಲವರ ನಡವಳಿಕೆಯಿಂದ ಮನಸ್ಸಿಗೆ ಅಶಾಂತಿ.

ಶ್ರೀದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8.



ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ನಿಮ್ಮ ಸುಗುಣಾದರ್ಶಗಳಿಂದ ಸಮಾಜದಲ್ಲಿ ಮನ್ನಣೆ ಗಳಿಸುವಿರಿ. ವಾರದಾರಂಭಕ್ಕೆ ಆಮೋದ-ಪ್ರಮೋದಗಳು. ಗುರುಬಲ ಇರುವ ಕಾರಣ ವೈಯಕ್ತಿಕವಾಗಿಯೂ, ಸಾಮಾಜಿಕವಾಗಿಯೂ ಉತ್ಕರ್ಷ ಸಾಧಿಸುವ ನಿಮ್ಮ ಪ್ರಯತ್ನಗಳು ಸಫಲವಾಗುವುದು. ಹಳೆಯ ಕಾಯಿಲೆಗಳಿಂದ ಬಿಡುಗಡೆ ಹೊಂದಿ ಆರೋಗ್ಯವು ಸುಧಾರಿಸುವುದು. ಧನ ಸಂಚಯ ಚೆನ್ನಾಗಿದೆ. ಸಾಲ-ಸೋಲಗಳು ತೀರುವಳಿ ಆಗುವುದು.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-5.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಅಷ್ಟಮದಲ್ಲಿ ಸ್ಥಿತನಿರುವ ಶನಿದೇವನಿಂದಾಗಿ ಜೀವನದ ಸಾಧಕ-ಬಾಧಕಗಳ ಅರಿವು ನಿಮ್ಮ ನಿಗೂಢವಾಗಿದೆ. ಈ ನಡುವೆ ನಿಮ್ಮ ರಾಶ್ಯಾಧಿಪತಿ ಚಂದ್ರನ ಶುಭ ಸಂಚಾರದ ಪರಿಣಾಮ ಸಾಮಾಜಿಕ ಅಡಚಣೆಗಳನ್ನು ನಿವಾರಿಸಲಿರುವನು. ಮಹಿಳಾ ಮಣಿಯರು ಅಲಂಕಾರಿಕ ವಸ್ತುಗಳ ಖರೀದಿಗೆ ಹೆಚ್ಚಿನ ಹಣ ವ್ಯಯಿಸುವರು. ಆರೋಗ್ಯದಲ್ಲಿ ಏರು-ಪೇರು ಉಂಟಾದೀತು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಸಂದರ್ಶನದಿಂದ ಮನಃಶ್ಯಾಂತಿ.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಶುಭ ಗೋಚರದಲ್ಲಿರುವ ಬೃಹಸ್ಪತಿಯ ಕರುಣೆಯಿಂದ ವಿಶಿಷ್ಟ ವ್ಯಕ್ತಿಗಳ ಸಂಪರ್ಕ ನಿಮಗಾಗುವುದು. ಇದು ನಿಮ್ಮ ಮುಂದಿನ ಯೋಜನೆಗಳ ಸಫಲತೆಗೆ ಸೋಪಾನವಾಗುವುದು. ಸರ್ಕಾರದಿಂದಲೂ ಸಹಾಯ, ಅನುಕೂಲಗಳು ಒದಗಿ ಬರಲಿದೆ. ಮನೆಯಲ್ಲಿ ಮಂಗಳ ಕಾರ್ಯಕ್ಕೆ ನಾಂದಿಯಾದೀತು. ನಿಮ್ಮವರಲ್ಲೇ ಉಂಟಾಗಿದ್ದ ಒಡಕುಗಳು ನಿವಾರಣೆ ಆಗುವುದು.


ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-2.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ಸಪ್ತಾಹದಲ್ಲಿ ಹೆಚ್ಚಿನ ಗ್ರಹಗಳು ನಿಮ್ಮ ಅನುಕೂಲಕ್ಕೆ ಇಲ್ಲದ ಕಾರಣ ತಾಳ್ಮೆಯಿಂದಲೂ, ಜಾಣ್ಮೆಯಿಂದಲೂ ಮುಂದಿನ ಹೆಜ್ಜೆಯನ್ನು ಇಡಬೇಕಿದೆ. ಸುಖದ ಬದುಕು ತನ್ನಿಂದ ತಾನೇ ಸೃಷ್ಟಿ ಆಗುವುದಿಲ್ಲ. ಅದಕ್ಕೆ ದೈವ ಕೃಪೆಯ ಜೊತೆಗೆ ಕಠಿಣ ಪರಿಶ್ರಮದ ಅಗತ್ಯವೂ ಇದೆ. ವಾರ ಮಧ್ಯೆ ಬುದ್ಧಿವಂತರ ಸಹವಾಸದಿಂದ ಹಣ ಸಂಪಾದನೆಯ ಹೊಸ ಮಾರ್ಗ ತೆರೆದುಕೊಳ್ಳಲಿದೆ.

ಶ್ರೀ ಕೃಷ್ಣಾಷ್ಟಕ ಪಠಿಸಿ. ಶುಭ ಸಂಖ್ಯೆ-5.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಮ್ಮ ರಾಶಿಯ ಮೇಲೆ ಗುರುದೃಷ್ಟಿ ಸಂಪೂರ್ಣವಿದ್ದು, ಅಲೆಯಂತೆ ಬಂದ ಕಷ್ಟಗಳು ಸೂರ್ಯನೆದುರಲಿ ಮಂಜು ಕರಗಿದಂತೆ ಮಾಯವಾಗುವುದು. ಕೈಗೊಂಡ ಮಹತ್ವದ ಕೆಲಸಗಳಲ್ಲಿ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು. ಸುವರ್ಣ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗುವುದು. ವಿವಾಹಾ ಕಾಂಕ್ಷಿಗಳಿಗೆ ಸೂಕ್ತ ವಧು-ವರ ದೊರೆಯುವ ಸಾಧ್ಯತೆ ಇರುತ್ತದೆ. ಜನ್ಮಸ್ಥಿತ ಕೇತು ಆಕಸ್ಮಿಕ ಅಪಘಾತ ಉಂಟು ಮಾಡಬಹುದು.

ಶ್ರೀ ದೇವೀ ಸ್ತುತಿ. ಶುಭ ಸಂಖ್ಯೆ-1.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದಾರಂಭಕ್ಕೆ ಪ್ರಭಾವಿ ವ್ಯಕ್ತಿಗಳ ಭೇಟಿಯಿಂದ ಕಾರ್ಯ ಸಾಧನೆ. ಶುಭ ಸಮಾಚಾರವೂ ಬಂದೀತು. ಗುರು ಬಲವಿಲ್ಲದ ಕಾರಣ ಇನ್ನೂ ಸ್ವಲ್ಪ ಸಮಯ ಹೊಸ ಯೋಜನೆಗಳಿಗೆ ಕಡಿವಾಣ ಹಾಕಿ. ನಿರೀಕ್ಷೆಯಂತೆ ಹಣ ಕೈ ಸೇರಿದರೂ ಬರಿಗೈ ಆಗಲು ಕ್ಷಣ ಮಾತ್ರ. ಗೃಹ ಕಲಹಗಳನ್ನು ಮನೆಯಲ್ಲೇ ಇತ್ಯರ್ಥ ಮಾಡಿಕೊಳ್ಳಿ. ಆರೋಗ್ಯ-ಸಮರ್ಪಕವಾಗಿರದೆ ವೈದ್ಯರ ಭೇಟಿ ಅನಿವಾರ್ಯವಾದೀತು.

ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಪ್ರಾರಂಭಕ್ಕೆ ಬಯಸಿದ್ದನ್ನು ಗಳಿಸಿಕೊಳ್ಳಲು ಗುರುಗ್ರಹದ ಕರುಣೆ ನಿಮ್ಮ ರಾಶಿಯ ಮೇಲಿದೆ. ಶುಭ ಸುದ್ದಿಯೊಂದು ಹೊತ್ತ ಓಲೆಯೊಂದು ಬರಲಿದೆ. ರೆಡಿಮೇಡ್ ವಸ್ತ್ರ ವಿನ್ಯಾಸಕಾರರಿಗೆ, ವ್ಯಾಪಾರಿಗಳಿಗೆ ಧನಾದಾಯದಲ್ಲಿ ವೃದ್ಧಿಯಾಗಲಿದೆ. ಅಪ್ರತಿಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್ ಆಗುವ ಯೋಗವಿದೆ. ಸ್ವಾಸ್ಥ್ಯದಲ್ಲಿ ವ್ಯತ್ಯಾಸ, ವೈದ್ಯರದರ್ಶನ.

ಶ್ರೀ ಅಶ್ವತ್ಥವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-9.



ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ಪ್ರಮುಖ ಕೆಲಸಗಳಲ್ಲಿ ನಿಮ್ಮ ಶ್ರಮಕ್ಕೆ ತಕ್ಕ ಫಲ ಕಾಣದೆ ನಿರಾಸೆಯನ್ನು ಅನುಭವಿಸುವಿರಿ. ಬಂಧು ಮಿತ್ರರೊಂದಿಗಿನ ವಿವಾದಗಳು ಸ್ವಲ್ಪ ಮಟ್ಟಿಗೆ ರಾಜಿಯಾಗುತ್ತವೆ. ಮನೆಯ ಹೊರಗೆ ಕೆಲಸದ ಒತ್ತಡ ಇರುತ್ತದೆ. ವ್ಯಾಪಾರ ವಿಸ್ತರಣೆಯ ಪ್ರಯತ್ನಗಳು ಮುಂದೂಡಲ್ಪಡುತ್ತವೆ. ವಾರ ಮಧ್ಯೆ ಆರೋಗ್ಯ ಸಮಸ್ಯೆ ಉಂಟಾಗಬಹುದು. ವಾರಾಂತ್ಯಕ್ಕೆ ಆತ್ಮೀಯರಿಂದ ಒಳ್ಳೆಯ ಸುದ್ದಿ ಸಿಗಲಿದೆ.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದಾರಂಭಕ್ಕೆ ಆಟೋಮೊಬೈಲ್ ಉದ್ಯಮಿಗಳಿಗೆ ಹೊಸ ಒಡಂಬಡಿಕೆಗಳು ಉಂಟಾಗುವುದರ ಜೊತೆಗೆ ಧನಲಾಭವನ್ನು ಹೊಂದುತ್ತಾರೆ. ವ್ಯಾಪಾರಸ್ಥರು ಬಂದ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ನೆರೆಹೊರೆಯಲ್ಲಿನ ಜನರೊಂದಿಗೆ ಸ್ಥಿರಾಸ್ತಿ ವಿವಾದಗಳು ಉಂಟಾಗಬಹುದು. ನಿರುದ್ಯೋಗಿಗಳಿಗೆ ಶ್ರಮಕ್ಕೆ ಯಾವುದೇ ಫಲಿತಾಂಶ ಕಾಣುವುದಿಲ್ಲ. ಆರೋಗ್ಯ ಕಾಪಾಡಿಕೊಳ್ಳಿ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-3.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸುವಿರಿ. ಸಮಾಜದ ಗಣ್ಯ ವ್ಯಕ್ತಿಗಳಿಂದ ಅಪರೂಪದ ಆಹ್ವಾನ ಬರುತ್ತದೆ. ಯಾವುದೇ ವ್ಯಾಪಾರ ವ್ಯವಹಾರವನ್ನು ಸ್ವಂತವಾಗಿ ಮಾಡಿ, ಪಾರ್ಟನರ್ ಬೇಡ. ನೂತನ ಗೃಹ ನಿರ್ಮಾಣದ ಪ್ರಯತ್ನಗಳು ಫಲಿಸಲಿದೆ. ವಾರದ ಕಡೆಗೆ ಅನಿರೀಕ್ಷಿತ ಖರ್ಚು-ವೆಚ್ಚಗಳು ಹೆಚ್ಚಾಗಿ, ಕೈ ಸಾಲ ಮಾಡಬೇಕಾಗುವುದು.

ಶ್ರೀ ರಾಘವೇಂದ್ರ ಉಪಾಸನೆ. ಶುಭ ಸಂಖ್ಯೆ-5.

ಮೈಸೂರು ಮಿತ್ರ

ಮಾಜಿ ಸಚಿವ ಸಾ.ರಾ. ಮಹೇಶರ ಕೋಟಿ ರೂ. ಅನುದಾನ

ಜೀರ್ಣೋದ್ಧಾರಗೊಂಡ ಶ್ರೀ ಸಿದ್ದೇಶ್ವರಸ್ವಾಮಿ ದೇವಾಲಯ

ಸಾವಿರಾರು ಭಕ್ತರು ಭಾಗಿ, ಗ್ರಾಮದಲ್ಲಿ ಹಬ್ಬದ ವಾತಾವರಣ



ತಿ.ನರಸೀಪುರ,ಸೆ.3– ಮಾಜಿ ಸಚಿವ ಸಾ.ರಾ. ಮಹೇಶ್ ಅವರ 1 ಕೋಟಿ ರೂ.ಗಳ ಅನುದಾನ ಹಾಗೂ ಭಕ್ತಾದಿಗಳ ದೇಣಿಗೆ ಸೇರಿ 2 ಕೋಟಿ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಗೊಂಡು ತಾಲೂಕಿನ ಚಿದರವಳ್ಳಿ ಗ್ರಾಮದಲ್ಲಿ ಪುನರ್ ಪ್ರತಿಷ್ಠಾಪನೆಗೊಂಡಿರುವ ಶ್ರೀ ಸಿದ್ದೇಶ್ವರ ಸ್ವಾಮಿ ದೇವಾಲಯವನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.

ಚಿದರವಳ್ಳಿ ಗ್ರಾಮದ 3.20 ಎಕರೆ ವಿಶಾಲವಾದ ಪ್ರದೇಶದಲ್ಲಿ ನೆಲೆಗೊಂಡಿರುವ ಶ್ರೀ ಸಿದ್ದೇಶ್ವರ ಸ್ವಾಮಿ ದೇವಸ್ಥಾನವು ಶಿಥಿಲಗೊಂಡ ಹಿನ್ನೆಲೆಯಲ್ಲಿ ಹೆಚ್ಚುವರಿಕೊಡ್ಡುವು ಗ್ರಾಮದ ಭಕ್ತಾದಿಗಳ ಕೋರಿಕೆಯ ಮೇರೆಗೆ ಅಂದಿನ ಪ್ರವಾಸೋದ್ಯಮ ಸಚಿವರಾಗಿದ್ದ ಸಾ.ರಾ.ಮಹೇಶ್ ದೇವಸ್ಥಾನದ ಅಭಿವೃದ್ಧಿಗಾಗಿ ಒಂದು ಕೋಟಿ ರೂಗಳ ಅನುದಾನ ಬಿಡುಗಡೆ ಮಾಡಿದ್ದರು. ಸಚಿವರ ಅನುದಾನ ಸೇರಿದಂತೆ ದೇವಸ್ಥಾನದ ಭಕ್ತಾದಿಗಳು ಒಕ್ಕೂಟ ಕಳಿಗಳ ಹಾಗೂ ಮತ್ತಿತರ ದೇಣಿಗೆಯಲ್ಲಿ ಸುಮಾರು 2 ಕೋಟಿ ರೂ.ಗಳ ವೆಚ್ಚದಲ್ಲಿ ದೇವಾಲಯ ಭವ್ಯವಾಗಿ ನಿರ್ಮಾಣಗೊಂಡಿದ್ದು ಇಂದು ಸಹಸ್ರಾರು ಭಕ್ತಾದಿಗಳ ಸಮ್ಮುಖ ಪುನರ್ ಪ್ರತಿಷ್ಠಾಪನೆಗೊಂಡು ಲೋಕಾರ್ಪಣೆಯಾಯಿತು.

ದೇವಾಲಯದ ಪ್ರತಿಷ್ಠಾಪನೆಯ ಹಿನ್ನೆಲೆಯಲ್ಲಿ ಶುಕ್ರವಾರದಿಂದಲೇ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ನವಗ್ರಹಪೂಜೆ, ಮಹಾಮಂಗಳಾರತಿ, ಅಷ್ಟದಿಗ್ಬಂಧನ, ಕಾರ್ಯಕ್ರಮಗಳು ನಡೆದವು.

ಶನಿವಾರ ಬೆಳಗ್ಗೆ ನವಗ್ರಹ ಪುರಸ್ಸಾರ, ಮೃತ್ಯುಂಜಯ ಹೋಮ, ವಾಸ್ತು ಹೋಮ, ಗ್ರಾಮದೇವತಾ ಹೋಮ, ಕಶಾಯಾಭಿಷೇಕ, ಇಂದು ಬೆಳಗ್ಗೆ ಮಹಾಗಣಪತಿ ಹೋಮ, ಸಪ್ತಮಾತೃಕಾ ಹೋಮ, ಪಂಚಾಮೃತ ಅಭಿಷೇಕ, ಕುಂಭಾಭಿಷೇಕ, ಮಹಾಮಂಗಳಾರತಿ ಕಾರ್ಯಕ್ರಮಗಳು ಸಾಂಗವಾಗಿ ನೆರವೇರಿದವು.

ದೇವಸ್ಥಾನದ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಚಿದರವಳ್ಳಿ ಗ್ರಾಮ ನವ ವಧುವಿನಂತೆ ಸಿಂಗಾರಗೊಂಡಿತ್ತು. ತಾಲೂಕು, ಜಿಲ್ಲೆ ಸೇರಿದಂತೆ ರಾಮನಗರ, ಬೆಂಗಳೂರು ಪಟ್ಟಣದಲ್ಲಿ ಭಕ್ತಾದಿಗಳು ಆಗಮಿಸಿ ಸಿದ್ದೇಶ್ವರ ಸ್ವಾಮಿಗೆ ಪೂಜೆ ಸಲ್ಲಿಸಿ ಭಕ್ತಿ ಭಾವ ಮೆರೆದರು. ದೇವಸ್ಥಾನದ ಟ್ರಸ್ಟ್ ವತಿಯಿಂದ 10 ಸಾವಿರ ಮಂದಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಚಂದ್ರಶೇಖರ್, ಸದಸ್ಯ ಮಹೇಶ್, ಮಾಜಿ ಸದಸ್ಯ ನಿಜಲಿಂಗಪ್ಪ(ನವೀನ್), ಯಜಮಾನರಾದ ಶಂಕರ, ನಂಜುಂಡಯ್ಯ, ರಾಮಚಂದ್ರ, ಮಹದೇವ, ಶಿವಣ್ಣ, ಸುಬ್ಬ ಮಾಧು, ಯುವ ಮುಖಂಡ ಮಹೇಶ್, ಸಿ.ಆರ್.ಸಿದ್ದರಾಜು, ರೇವಣ್ಣ, ಶ್ರೀನಿವಾಸ್, ಪುಟ್ಟಸ್ವಾಮಿಗೌಡ, ಚೆನ್ನೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ ಭಾಗವಹಿಸಿದ್ದರು.

ಬಾರದ ಜನಪ್ರತಿನಿಧಿಗಳು, ನಿರಾಶರಾದ ಗ್ರಾಮಸ್ಥರು

ಜೀರ್ಣೋದ್ಧಾರಗೊಂಡ ಸಿದ್ದೇಶ್ವರ ಸ್ವಾಮಿ ದೇವಸ್ಥಾನದ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸೇರಿದಂತೆ ಯತೀಂದ್ರ ಸಿದ್ದರಾಮಯ್ಯ, ಸುನೀಲ್ ಬೋಸ್ ಗೈರುಹಾಜರಾಗಿದ್ದು, ಗ್ರಾಮಸ್ಥರಲ್ಲಿ ಬೇಸರವನ್ನುಂಟು ಮಾಡಿತು. ಸಚಿವರು ಬರುತ್ತಾರೆಂಬ ಕಾರಣಕ್ಕೆ ಬೃಹತ್ ವೇದಿಕೆ ಸಿದ್ಧಪಡಿಸಲಾಗಿತ್ತು. ಅಲ್ಲದೇ ಮಹದೇವಪ್ಪರವರ ಅಹ್ವಾನ್ನಾಗಿ ಇದಕ್ಕೂ ಮೊದಲೇ ಆಗಬೇಕಿದ್ದ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಮುಂದೂಡಿ ಇಂದಿಗೆ ನಿಗದಿ ಪಡಿಸಲಾಗಿತ್ತು. ಆದರೆ ಕಾರ್ಯಕ್ರಮಕ್ಕೆ ಯಾವೊಬ್ಬ ಜನಪ್ರತಿನಿಧಿಯೂ ಬಾರದಿದ್ದರಿಂದ ಕಾರ್ಯಕ್ರಮ ಆಯೋಜಕರು ನಿರಾಶರಾದರಲ್ಲದೇ ಸಚಿವರ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಚಿದರವಳ್ಳಿ ಗ್ರಾಮ, ದೇವಾಲಯದ ಇತಿಹಾಸ

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲೂಕಿನ ಚಿದರವಳ್ಳಿ ಗ್ರಾಮ ಬಹುಪ್ರಖ್ಯಾತವಾದ ಗ್ರಾಮವಾಗಿದ್ದು, ಸಿದ್ದರ ಆಳ್ವಿಕೆ ನಡೆಸಿದ ಗ್ರಾಮ. ಸುತ್ತ ಕಾವೇರಿ–ಕಪಿಲಾ ನದಿ ಸಂಗಮವಾಗಿ ಹರಿಯುತ್ತದೆ. ಸಂಗಮ ನದಿಯ ದಡದಲ್ಲಿ ಅಗಸ್ತ್ಯೇಶ್ವರ, ಭಿಕ್ಷೇಶ್ವರ ಹಾಗೂ ಉಗ್ರ ನರಸಿಂಹ ದೇವಾಲಯವಿದ್ದು ದಕ್ಷಿಣ ಕಾಶಿ ಎಂದೇ ಪ್ರಖ್ಯಾತವಾಗಿದೆ. ಸಮೀಪದಲ್ಲಿರುವ ಸೋಮನಾಥಪುರ ಗ್ರಾಮದ ಸೋಮನಾಥ ದೇವಾಲಯ ಸೇರಿದಂತೆ ಮತ್ತೊಂದು ದಿಕ್ಕಿಗೆ ತಲಕಾಡಿನಲ್ಲಿರುವ ಪಂಚಲಿಂಗೇಶ್ವರ ದೇವಾಲಯಗಳು, ಮುಡುಕುತೊರೆ ಮಲ್ಲಿಕಾರ್ಜುನ ಸೇರಿದಂತೆ ಚಿದರವಳ್ಳಿ ಗ್ರಾಮದ ಪಕ್ಕದಲ್ಲೇ ಇರುವ ವಡ್ಗಲ್ ರಂಗನಾಥಸ್ವಾಮಿ, ಉಕ್ಕಲಗೆರೆ ಮಲ್ಲಿಕಾರ್ಜುನ ಸ್ವಾಮಿ ಸೇರಿದಂತೆ ಸ್ವಗ್ರಾಮದಲ್ಲಿ ನೆಲೆಸಿರುವ ದೇವರ ಊರು ಎಂದೇ ಪ್ರಖ್ಯಾತವಾಗಿರುವ ಚಿದರವಳ್ಳಿಯಲ್ಲಿ ಗಣಪತಿ, ಸೋಮೇಶ್ವರ, ಮಾರಮ್ಮ, ಸತ್ಯನಾರಾಯಣ, ಸತ್ಯ ನಾರಾಯಣ ಸ್ವಾಮಿ, ಗುಜ್ಜಮ್ಮ, ಚೌಡಮ್ಮ, ಬೀರೇಶ್ವರ, ಚಿಕ್ಕಮ್ಮ, ಮಾಸೆಯಮ್ಮ ಹಾಗೂ ಮಾಸ್ತಮ್ಮ ದೇವಾಲಯಗಳ ಮಧ್ಯೆ ನೆಲೆಸಿರುವ ಸಿದ್ದೇಶ್ವರ ಸ್ವಾಮಿ, ಲಕ್ಷಾಂತರ ಭಕ್ತಾದಿಗಳಿಗೆ ಅಭಯ ಆಶೀರ್ವಾದ ನೀಡುತ್ತಿರುವ ದೇವಾಲಯವಾಗಿದೆ.

ತಾಯಿ ಚಾಮುಂಡೇಶ್ವರಿ ದಸರಾ ಅವಧಿಯಲ್ಲಿ ಪಟ್ಟಕ್ಕೆ ಕೂರುವ ವೇಳೆ ಸಿದ್ದೇಶ್ವರ ಸ್ವಾಮಿಯನ್ನು ಪಟ್ಟಕ್ಕೆ ಕೂರಿಸಿ ನವರಾತ್ರಿಗಳ ವಿಜೃಂಭಣೆಯ ಪೂಜೆಗಳ ನಂತರ ಪಕ್ಕದಲ್ಲಿರುವ ಬನ್ನಿಮಂಟಪಕ್ಕೆ ಹೋಗಿ ಪೂಜೆ ಸಲ್ಲಿಸಿ ಚಿದರವಳ್ಳಿ ದಸರಾ ಉತ್ಸವ ರಾಜ ಬೀದಿಯಲ್ಲಿ ನಡೆಯುವ ಪ್ರತೀತಿ ಇದೆ.ಅಲ್ಲದೇ ಪ್ರತಿ ಯುಗಾದಿ ಹಬ್ಬದ ಹಿಂದಿನ ದಿನ ಅಮಾವಾಸ್ಯೆ ದಿನ ಗ್ರಾಮದಲ್ಲಿ ಉತ್ಸವ ನಡೆಸಿ ನಂತರ ಟಿ.ನರಸೀಪುರ ಕಾವೇರಿ ಕಪಿಲಾ ಸಂಗಮಗಳ ಸಂಗಮವಾದ ದಕ್ಷಿಣ ಕಾಶಿಯಲ್ಲಿ ರಾತ್ರಿ ನೆಲೆಸಿ ಮುಂಜಾನೆ ಹೂಹೊಂಬಾಳೆ ಸುತ್ತ ಗ್ರಾಮಕ್ಕೆ ವಾದ್ಯಗಳ ಸಮೇತ ಹಿಂದಿರುಗುವ ಪ್ರತೀತಿ ಈಗಲೂ ಇದೆ.

ಕಾರು ಅಪಘಾತದಲ್ಲಿ ಹುಣಸೂರು ಅಬಕಾರಿ ಡಿವೈಎಸ್‌ಪಿ ತಂದೆ ಸಾವು



ಹುಣಸೂರು: ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ತೆರಳಿದ್ದ ಹುಣಸೂರು ಅಬಕಾರಿ ಡಿವೈಎಸ್‌ಪಿ ಕೆ.ಟಿ.ವಿಜಯ ಕುಮಾರ್ ಅವರ ಕಾರು ಅಪಘಾತವಾಗಿ ಅವರ ತಂದೆ ಮೃತಪಟ್ಟಿದ್ದು, ಡಿವೈಎಸ್‌ಪಿ ಸೇರಿದಂತೆ ಕುಟುಂಬದ ಮೂವರಿಗೆ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಜಯಕುಮಾರ್ ತಂದೆ ಗಿರಿಗೌಡ(80) ಮೃತಪಟ್ಟವರು. ತೀವ್ರವಾಗಿ ಗಾಯಗೊಂಡಿರುವವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕುಟುಂಬ ಸಮೇತ ತಿರುಪತಿಗೆ ತೆರಳಿ ದೇವರ ದರ್ಶನ ಮಾಡಿ ಶುಕ್ರವಾರ ಬೆಂಗಳೂರಿಗೆ ಹಿಂತಿರುಗುತ್ತಿದ್ದ ವೇಳೆ ಆಂಧ್ರಪ್ರದೇಶದ ಪುಲಮನೂರು ಬಳಿಯ ಹೆದ್ದಾರಿಯಲ್ಲಿ ಮಧ್ಯರಾತ್ರಿ 1.30 ರ ವೇಳೆ ಲಾರಿಯೊಂದನ್ನು ಹಿಂದಿಕ್ಕುವ ಸಮಯದಲ್ಲಿ ಅಪಘಾತ ಸಂಭವಿಸಿ ಕಾರು ಸಂಪೂರ್ಣ ಜಖಂಗೊಂಡಿದೆ. ಅವಘಡದಲ್ಲಿ ಕಾರಿನ ಮುಂಭಾಗದಲ್ಲಿ ಕುಳಿತಿದ್ದ ತಂದೆ ಗಿರಿಗೌಡ ಸ್ಥಳದಲ್ಲೇ ಸಾವನ್ನಪ್ಪಿದ್ದು, ಹಿಂಬದಿಯಲ್ಲಿ ಕುಳಿತಿದ್ದ ವಿಜಯಕುಮಾರ್ ತೀವ್ರವಾಗಿ ಗಾಯಗೊಂಡಿದ್ದು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರು ಚಾಲನೆ ಮಾಡುತ್ತಿದ್ದ ಅಬಕಾರಿ ಇನ್ಸ್‌ಪೆಕ್ಟರ್ ಲೋಕೇಶ್, ಕಾರಿನಲ್ಲಿದ್ದ ವಿಜಯಕುಮಾರ್ ಅವರ ತಾಯಿ ಮತ್ತು ಅಕ್ಕ ಘಟನೆಯಲ್ಲಿ ಯಾವುದೇ ಗಾಯವಿಲ್ಲದೆ ಪಾರಾಗಿದ್ದಾರೆ.

ಅಂತ್ಯಸಂಸ್ಕಾರ: ಅಪಘಾತದಲ್ಲಿ ಮೃತಪಟ್ಟ ಗಿರಿಗೌಡ ಅವರ ಅಂತ್ಯಸಂಸ್ಕಾರ ಸ್ವಗ್ರಾಮ ಮದ್ದೂರು ತಾಲೂಕಿನ ಕೆಸ್ತೂರಿನಲ್ಲಿ ಭಾನುವಾರ ನಡೆಯಿತು.

ಅವಿಶ್ವಾಸಕ್ಕೆ ಸೋಲು: ರಾಜೀನಾಮೆಗೆ ಸದಸ್ಯರ ನಿರ್ಧಾರ

ತಿ.ನರಸೀಪುರ.ಸೆ.3– ಆಲಗೂಡು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೀರಭದ್ರಪ್ಪನವರ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾದ ಬೆನ್ನಲ್ಲೇ ಸಂಘದ ಸದಸ್ಯರು ಸಾಮೂಹಿಕ ರಾಜೀನಾಮೆ ಸಲ್ಲಿಸಲು ಮುಂದಾಗಿದ್ದಾರೆ. ರಾಜೀನಾಮೆ ನೀಡುವ ವಿಷಯವನ್ನು ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿಯಾಗಿದ್ದ ಹೆಚ್.ಬಿ. ಚಿಕ್ಕನಂಜಯ್ಯ ಬಹಿರಂಗ ಪಡಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹೆಳವರಹುಂಡಿ ಗ್ರಾಮದಲ್ಲಿ ಶುಕ್ರವಾರ ಸಂಘದ ಅಧ್ಯಕ್ಷ ಬಿ.ವೀರಭದ್ರಪ್ಪರವರನ್ನು ಪದಚ್ಯುತಗೊಳಿಸಲು ಕರೆಯಲಾಗಿದ್ದ ಸಭೆಯಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿದೆ. ಆಗಸ್ಟ್ 14 ರಂದು 7 ಮಂದಿ ನಿರ್ದೇಶಕರು ಸಹಿ ಮಾಡಿದ ಪತ್ರವನ್ನು ಮೈಸೂರಿನ ಸಹಾಯಕ ಸಂಘಗಳ ನಿಬಂಧಕರಿಗೆ ಸಲ್ಲಿಸಿದ್ದೆವು. ಅಲ್ಲದೆ 7 ಮಂದಿ ನಿರ್ದೇಶಕರ ಜೊತೆ ಮತ್ತಿಬ್ಬರು ನಮಗೆ ಬೆಂಬಲ ವ್ಯಕ್ತಪಡಿಸಿದ್ದರು. ಆದರೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಇಬ್ಬರು ಅಡ್ಡ ಮತದಾನ ಮಾಡಿದ್ದರಿಂದ ನಮಗೆ ಸೋಲುಂಟಾಗಿದೆ. ನಿಯಮದನ್ವಯ ವೀರಭದ್ರಪ್ಪ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ಆದರೆ ಅವರ ಮೇಲೆ ನಮಗೆ ವಿಶ್ವಾಸವಿಲ್ಲ, ಹಾಗಾಗಿ ನಾವು ಅವರು ಕರೆಯುವ ಯಾವುದೇ ಸಭೆ, ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಿಲ್ಲ ಎಂದರು.

ಸಂಘದ ಅಧ್ಯಕ್ಷ ವೀರಭದ್ರಪ್ಪ ಅವರ ಮೇಲೆ ನಮಗೆ ವಿಶ್ವಾಸ ಇಲ್ಲದ ಹಿನ್ನೆಲೆಯಲ್ಲಿ ನಾವೆಲ್ಲರೂ ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಲು ನಿರ್ಧರಿಸಿದ್ದೇವೆ. ಮುಂದೆ ಸಂಘದ ವತಿಯಿಂದ ಸಾಲ ಸೌಲಭ್ಯ ಕೊಡುವ ಕಾರ್ಯಕ್ರಮ ಇದ್ದು ರೈತರಿಗೆ ಸಕಾಲದಲ್ಲಿ ಸಾಲ ದೊರಕಿಸಿ ಕೊಟ್ಟ ನಂತರ ರಾಜೀನಾಮೆ ಸಲ್ಲಿಸಲು ತೀರ್ಮಾನಿಸಲಿದ್ದೇವೆ ಎಂದ ಅವರು, ರಾಜೀನಾಮೆಗೆ ಸ್ಪಷ್ಟ ಕಾರಣ ಹೇಳದೆ ಅವರ ಮೇಲೆ ವಿಶ್ವಾಸ ಇಲ್ಲ.ಮೀಟಿಂಗ್‌ನಲ್ಲಿ ಅವರೊಂದಿಗೆ ಕೂರಲು ಇಷ್ಟವಿಲ್ಲ ಎಂದಷ್ಟೇ ಹೇಳಿದರು. ಒಟ್ಟಿನಲ್ಲಿ 9 ನಿರ್ದೇಶಕರು ರಾಜೀನಾಮೆ ಸಲ್ಲಿಸುವ ನಿರ್ಧಾರದೊಂದಿಗೆ ಮುಂದಿನ ರಾಜಕೀಯ ಬೆಳವಣಿಗೆ ಬಗ್ಗೆ ತೀವ್ರ ಕುತೂಹಲ ಮೂಡಿದೆ.

ರಾಜ್ಯಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನ



ನಂಜನಗೂಡು: ತಾಲೂಕಿನ ಹೆಡತಲೆ ಸರ್ಕಾರಿ ಪ್ರೌಢಶಾಲೆಯ ಗಣಿತ ವಿಷಯದ ಸಹಶಿಕ್ಷಕ ಹರ್ಷ 2023ರ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಇವರು 16 ವರ್ಷ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಈಗಾಗಲೇ ಮಂಜೇಗೌಡ, ನೇಗಿಲಯೋಗಿ, ಸಾಧನರತ್ನ ಪ್ರಶಸ್ತಿಗಳಿಸಿದ್ದಾರೆ. ಮೈಸೂರು ಜಿಲ್ಲಾ ಉಪನಿರ್ದೇಶಕ ಪಾಂಡು.ಹೆಚ್.ಕೆ ಹಾಗೂ ತಾಲೂಕು ಬಿ.ಇ.ಓ ಶಿವಲಿಂಗಯ್ಯ. ಬಿ ಆರ್.ಸಿ ಬಾಲರಾಜು ಹಾಗೂ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಬಸವಣ್ಣ, ಸ್ನೇಹಿತರಾದ ರಮೇಶ್, ಕಿರಣ್ ಮಹೇಶ್, ಸತೀಶ್. ಎಸ್.ದಳವಾಯಿ ಅಭಿನಂದನೆ ಸಲ್ಲಿಸಿದ್ದಾರೆ.

ಹುಣಸೂರು ತಾಲೂಕಿನ ತಿಪಲಪುರ ಗ್ರಾಮದಲ್ಲಿ ನಡೆದ ನಾಟಿ ಕೋಳಿ, ಮುದ್ದೆ ತಿನ್ನುವ ಸ್ಪರ್ಧೆಯಲ್ಲಿ ಹೆಚ್.ಡಿ. ಕೋಟೆ ತಾಲೂಕಿನ ಕೋಲುಗಾಲ ಗ್ರಾಮದ ನಿವಾಸಿಯಾದ ಶಿವಮಲ್ಲು (ಬಲತುದಿ) 15 ನಿಮಿಷದಲ್ಲಿ 8 ಮುದ್ದೆ ತಿಂದು ಪ್ರಥಮ ಬಹುಮಾನ ಗಳಿಸಿದ್ದಾರೆ.



ಹೆಚ್.ಡಿ.ಕೋಟೆಯಲ್ಲಿ ರೇಬಿಸ್ ನಿಯಂತ್ರಣ ಜಾಥಾಕ್ಕೆ ಚಾಲನೆ



ಹೆಚ್.ಡಿ.ಕೋಟೆ, ಸೆ.3– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳ ಕಚೇರಿ ಮೈಸೂರು, ಜಿಲ್ಲಾ ಸರ್ವೇಕ್ಷಣಾ ಘಟಕ ಮೈಸೂರು ಹಾಗೂ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಹೆಚ್.ಡಿ.ಕೋಟೆ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ರಾಷ್ಟ್ರೀಯ ರೇಬಿಸ್ ನಿಯಂತ್ರಣ ಜಾಥಾಕ್ಕೆ ಹಸಿರು ನಿಶಾನೆ ತೋರುವುದರ ಮೂಲಕ ಚಾಲನೆ ನೀಡಲಾಯಿತು.

ಈ ವೇಳೆ ಮಾತನಾಡಿದ ಜಿಲ್ಲಾ ರೋಗ ವಾಹಕ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಿದಂಬರ್, ಇದು ವೈರಾಣುವಿನಿಂದ ಹರಡುವ ರೋಗ, ರೇಬಿಸ್ ಸೋಂಕಿರುವ ಪ್ರಾಣಿಗಳಾದ ಮುಂಗೂಸ್, ಕುದುರೆ, ಹಸು, ಕುರಿ, ಟಗರು, ನಾಯಿ, ನರಿ ಈ ಪ್ರಾಣಿಗಳ ಕಡಿತ ಹಾಗೂ ಜೊಲ್ಲಿನ ಸಂಪರ್ಕದಿಂದ ಪ್ರಮುಖವಾಗಿ ಹರಡುವ ಸೋಂಕು ಇದಾಗಿದೆ ಎಂದರು.

ಕೆಲವು ಸಂದರ್ಭ ಪ್ರಾಣಿಗಳು ತೆರೆದ ಚರ್ಮ ಮೇಲೆ ನೆಕ್ಕುವುದು, ಪರಚುವುದರಿಂದಲೂ ರೇಬಿಸ್ ರೋಗ ಹರಡುತ್ತದೆ ಎಂದು ಅವರು ವಿವರಿಸಿದರು.

ಸೋಂಕನ್ನು ಹಗುರವಾಗಿ ಕಾಣದೆ, ನಾಯಿಗಳಿಗೆ ತಪ್ಪದೇ ಚುಚ್ಚುಮದ್ದನ್ನು ಹಾಕಿಸುವ ಮೂಲಕ ರೇಬಿಸ್ ಸೋಂಕನ್ನು ತಡೆಗಟ್ಟಲು ಸಹಕಾರ ಅತ್ಯಗತ್ಯ ಎಂದರು.

ರೇಬಿಸ್ ಸೋಂಕು ತಡೆಗಟ್ಟುವ ಚುಚ್ಚುಮದ್ದನ್ನು ತೆಗೆದುಕೊಳ್ಳಬೇಕು. ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಒಂದು ವರ್ಷದೊಳಗಿನ ಮಕ್ಕಳು ಮತ್ತು ವಯಸ್ಕರು ಸಹ ರೇಬಿಸ್ ವಿರುದ್ಧದ ಲಸಿಕೆ ತೆಗೆದುಕೊಳ್ಳಬಹುದು. ಹಾಗೆಯೇ ನಾಯಿ ಹಚ್ಚಿದ ಗಾಯಕ್ಕೆ ಮಣ್ಣು, ವೀಳ್ಯದೆಲೆ, ಅರಿಶಿನ, ಸುಣ್ಣ, ಎಣ್ಣೆಯಂತಹ ವಸ್ತುಗಳನ್ನು ಹಾಕಬಾರದು ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯ ಅಧಿಕಾರಿ ಡಾ:ರವಿಕುಮಾರ್, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸೋಮಣ್ಣ, ಚರ್ಮರೋಗ ತಜ್ಞ ಡಾ. ಸಹನಾ, ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯದ ಆಡಳಿತ ವೈದ್ಯಾಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು.



ಜಯಪುರ ಹೋಬಳಿ ವ್ಯಾಪ್ತಿಯ ಶ್ರೀರಾಂಪುರ ಗ್ರಾಮದ ಬಸವೇಶ್ವರ ನವಚೇತನ ವಿಶೇಷ ಮಕ್ಕಳ ಶಾಲೆಗೆ ಶೆಲ್ಟರ್ ಅಳವಡಿಸಲು ಸಮಾಜ ಸೇವಕ ಎಸ್.ಶ್ರೀಕಾಂತ್ 35 ಸಾವಿರ ರೂ. ನೆರವು ನೀಡಿದರು. ಇದೇ ವೇಳೆ ಶ್ರೀಕಾಂತ್ ಅವರನ್ನು ಶಾಲೆಯ ಅಧ್ಯಕ್ಷ ಮಾಕಿ ಮರೀಗೌಡ ಅಭಿನಂದಿಸಿದರು.

ಕ್ರೀಡೆಯಿಂದ ಉತ್ತಮ ಆರೋಗ್ಯ



ಮಲ್ಲುಂಡಿ, ಸೆ.3– ಕ್ರೀಡೆಯಿಂದ ಮನುಷ್ಯನಿಗೆ ಉತ್ತಮ ಆರೋಗ್ಯ ಸಿಗುತ್ತದೆ ಎಂದು ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ಅಭಿಪ್ರಾಯಪಟ್ಟಿದ್ದಾರೆ.

ನಂಜನಗೂಡು ತಾಲೂಕಿನ ಹರತಲೆ ಗ್ರಾಮದಲ್ಲಿ ಚಿಕ್ಕರಂಗನಾಯಕ ಅಭಿಮಾನಿ ಬಳಗದ ವತಿಯಿಂದ ಅಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದ ತಂಡಕ್ಕೆ ಬಹುಮಾನ ವಿತರಿಸಿ, ನೂತನ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರಿಗೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಮನುಷ್ಯನ ಆರೋಗ್ಯದಿಂದ ಇರಬೇಕಾದರೆ ವ್ಯಾಯಾಮ ಮುಖ್ಯ. ಅದೇ ರೀತಿ ಕ್ರೀಡೆಯೂ ಕೂಡ ಒಂದು ವ್ಯಾಯಾಮವಾಗಿದೆ ಎಂದರು.

ಯಾವುದೇ ತಂಡಗಳು ಸೋತರೂ ಸೋಲನ್ನೇ ಗೆಲುವು ಎಂದು ಸ್ವೀಕರಿಸಿದಾಗ ಮಾತ್ರ ಆಟದಲ್ಲಿ ಮುಂದೆ ಬರಲು ಸಾಧ್ಯ. ಗ್ರಾಮೀಣ ಭಾಗಗಳಲ್ಲಿ ಇಂತಹ ಕ್ರೀಡೆಗಳು ನಡೆದರೆ ಪ್ರತಿಯೊಬ್ಬರಿಗೂ ಕ್ರೀಡೆಯ ಮಹತ್ವ ತಿಳಿಯುತ್ತದೆ. ಪ್ರತಿಯೊಬ್ಬ ಮನುಷ್ಯ ಆರೋಗ್ಯವಾಗಿರಬೇಕಾದರೆ ಇಂತಹ ಕ್ರೀಡೆ ಮುಖ್ಯವಾಗಿದೆ ಎಂದು ತಿಳಿಸಿದರು.

ಬಿಜೆಪಿ ಮುಖಂಡ ಸಿ.ಸೋಮಣ್ಣ ಸಂಘದ ತಾಲೂಕು ಅಧ್ಯಕ್ಷ ಬಂಗಾರನಾಯಕ, ಗ್ರಾಪಂ ಸದಸ್ಯ ಗೋವಿಂದರಾಜು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಲತಾ, ರಾಜಪ್ಪ, ಗರುಪ್ರಸಾದ್, ಮನು, ಶಿವಲಿಂಗ, ರಂಗಸ್ವಾಮಿ, ಶಿವು ಸೇರಿದಂತೆ ಪ್ರಮುಖರು ಹಾಜರಿದ್ದರು.

ಹುಣಸೂರು ನಗರಸಭೆಯಲ್ಲಿ ಖಾಸಗಿ ವ್ಯಕ್ತಿಗಳ ಕಾರುಬಾರು!

ಅಕ್ರಮಗಳ ತಡೆಯಲು ಕಟ್ಟುನಿಟ್ಟಿನ ಕ್ರಮಕ್ಕೆ ಆಗ್ರಹ

ಹುಣಸೂರು, ಸೆ.3– ಹುಣಸೂರು ನಗರಸಭೆಯಲ್ಲಿ ಸಿಸಿ ಕ್ಯಾಮರಾ ಕಣ್ಗಾವಲಿನ ನಡುವೆಯೂ ಖಾಸಗಿ ವ್ಯಕ್ತಿಗಳ ಕಾರುಬಾರು ಜೋರಾಗಿದ್ದು, ಇದರಿಂದ ಸಾರ್ವಜನಿಕರು ಆತಂಕಕ್ಕೀಡಾಗಿದ್ದಾರೆ ಎಂದು ತಾಲೂಕು ಅಲ್ಪಸಂಖ್ಯಾತರ ಒಕ್ಕೂಟದ ಅಧ್ಯಕ್ಷ ಇಂಟಕ್ ರಾಜು ಗಂಭೀರ ಆರೋಪ ಮಾಡಿದ್ದಾರೆ.

ಭದ್ರತೆ ಜೊತೆಗೆ ಪಾರದರ್ಶಕ ಸೇವೆ ಕಲ್ಪಿಸುವ ಉದ್ದೇಶದಿಂದ ನಗರಸಭೆಯಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಆದರೆ ಇಲ್ಲಿ ಕಾರುಬಾರು ನಡೆಸುತ್ತಿರುವ ಖಾಸಗಿ ವ್ಯಕ್ತಿಗಳಿಗೆ ಸಿಸಿ ಕ್ಯಾಮರಾದ ಭಯವೇ ಇಲ್ಲ. ಕಚೇರಿ ಸಮಯದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯ ಸ್ಥಳದಲ್ಲಿ ವಿರಾಜಮಾನವಾಗಿ ಕುಳಿತು, ದಾಖಲಾತಿಗಳ ಹುಡುಕಾಟ, ಪರಿಶೀಲನೆ ನಡೆಸುತ್ತಾರೆ. ಇಷ್ಟೇ ಅಲ್ಲದೆ ದಾಖಲಾತಿಗಳನ್ನು ತಿದ್ದುವ ಕೃತ್ಯವೂ ನಡೆದಿದೆ. ಇದು ಸಾರ್ವಜನಿಕರ ಆತಂಕಕ್ಕೆ ಪ್ರಮುಖ ಕಾರಣವಾಗಿದೆ. ಅಕ್ರಮಗಳು ಎಗ್ಗಿಲ್ಲದೆ ನಡೆಯುತ್ತಿದ್ದರೂ ಪೌರಾಯುಕ್ತರು ಮೌನ ವಹಿಸಿದ್ದಾರೆ. ಸಿಸಿ ಕ್ಯಾಮರಾ ಪರಿಶೀಲಿಸಿ, ಕ್ರಮ ವಹಿಸುವ ಪ್ರಯತ್ನಕ್ಕೂ ಮುಂದಾಗಿಲ್ಲ ಎಂದು ತಿಳಿಸಿದ್ದಾರೆ.



ನಗರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಶಾಮೀಲಾಗದೆ ಖಾಸಗಿ ವ್ಯಕ್ತಿಗಳು ಈ ರೀತಿ ಅಕ್ರಮ ನಡೆಸಲು ಸಾಧ್ಯವಿಲ್ಲ. ಸರ್ಕಾರಿ ಕಚೇರಿಯಲ್ಲಿ ಗೌಪ್ಯ ದಾಖಲೆಗಳನ್ನು ಹೆಕ್ಕಿ ತೆಗೆದು, ತಮಗೆ ಬೇಕಾದ ರೀತಿಯಲ್ಲಿ ತಿದ್ದುವುದು ಅಥವಾ ಬದಲಾಯಿಸಲು ಕಚೇರಿ ಉದ್ಯೋಗಿಗಳು ಕೈ ಜೋಡಿಸದೆ ಇರಲಾರರು. ಸರ್ಕಾರಿ ಕಚೇರಿಯಲ್ಲಿ ನಿರ್ಬಂಧಿತ ಪ್ರದೇಶಗಳಿಗೆ ಖಾಸಗಿ ವ್ಯಕ್ತಿಗಳಿಗೆ ಅವಕಾಶ ನೀಡಿದ್ದೇ ದೊಡ್ಡ ತಪ್ಪು. ಅಲ್ಲದೆ ದಾಖಲೆಗಳ ಪರಿಶೀಲನೆ ಹಾಗೂ ತಿದ್ದುಪಡಿ ಮಾಡುತ್ತಾರೆ ಎಂದರೆ ಏನರ್ಥ?. ಅಕ್ರಮಗಳಿಗೆ ಸಹಕರಿಸಿದ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ದಾಖಲೆಗಳೇ ನಾಪತ್ತೆಯಾಗಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಹುಣಸೂರು ನಗರಸಭೆ ಕರ್ಮಕಾಂಡದ ಬಗ್ಗೆ ಜಿಲ್ಲಾಧಿಕಾರಿಗಳು ಗಮನ ಹರಿಸಿ, ಅಕ್ರಮಗಳ ತಡೆಗೆ ಕಟ್ಟುನಿಟ್ಟಿನ ಆದೇಶ ಹೊರಡಿಸಬೇಕು.

ಖಾಸಗಿ ವ್ಯಕ್ತಿಗಳ ಉಪಟಳ, ಸಾರ್ವಜನಿಕರಿಂದ ಹಣ ವಸೂಲಿ ಮಾಡುವ ಅಧಿಕಾರಿ ಹಾಗೂ ಸಿಬ್ಬಂದಿಗೆ ತಕ್ಕ ಶಾಸ್ತಿ ಮಾಡದಿದ್ದರೆ, ಮಹತ್ವದ ದಾಖಲೆಗಳೇ ನಾಪತ್ತೆಯಾಗಬಹುದು. ಅದೆಷ್ಟೋ ಜನರಿಗೆ ಮಹಾಮೋಸವಾಗಬಹುದು. ನಗರಸಭೆಯ ಆಡಳಿತ ವ್ಯವಸ್ಥೆ ಸಂಪೂರ್ಣ ಹಾಳಾಗುವ ಮುನ್ನ ಸೂಕ್ತ ಕ್ರಮ ವಹಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಮಿಸ್ಟೇಕ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡ್ರೀಮ್ ಗರ್ಲ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೌಶಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಖುಷಿ (ತೆ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ಜೈಲರ್ (ತ): ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಕಿಂಗ್ ಆಫ್ ಕೋಥಾ (ಮ): ರಾ.10.25ಕ್ಕೆ.
ಸ್ಕ್ರೀನ್ 2	ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಬೆ.9.50ಕ್ಕೆ, ಜೈಲರ್ (ಕ): ಮ.1ಕ್ಕೆ, ಗದರ್ 2 (ಹಿಂ): ಸಂ.4.10ಕ್ಕೆ, ಡ್ರೀಂ ಗರ್ಲ್ (ಹಿಂ): ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	ರಾಮಚಂದ್ರ ಬಾಸ್ & ಕೋ (ಮ): ಬೆ.10ಕ್ಕೆ, ಗ್ರ್ಯಾನ್ ಟುರಿಸ್ಮೋ (ಇಂ): ಮ.1.30ಕ್ಕೆ, ರಾ.7.20ಕ್ಕೆ, ಗಾಂಡೀವಧಾರಿ ಅರ್ಜುನ (ತೆ): ಸಂ.4.30ಕ್ಕೆ, ಅಖೇಲಿ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟೋಬಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹಿಟ್ನೆ ಹೆಬ್ಬಾಗಿಲು ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಜಯಭೇರಿ



ಕಂಪಲಾಪುರ: ಸಮೀಪದ ಹಿಟ್ನೆ ಹೆಬ್ಬಾಗಿಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಜಯಭೇರಿ ಬಾರಿಸಿದೆ. 12 ಸ್ಥಾನಗಳಲ್ಲಿ 9 ರಲ್ಲಿ ಜೆಡಿಎಸ್ ಬೆಂಬಲಿಗರು ಜಯಗಳಿಸಿದ್ದು, 3 ಸ್ಥಾನಗಳಲ್ಲಿ ಕಾಂಗ್ರೆಸ್ ಗೆದ್ದಿದೆ.

ಸಾಲಗಾರರ ಕ್ಷೇತ್ರದಲ್ಲಿ ಒಟ್ಟು 685 ಮತದಾರರಿದ್ದು 11 ಸ್ಥಾನ, ಸಾಲಗಾರರಲ್ಲದ ಕ್ಷೇತ್ರದಲ್ಲಿ 608 ಮತದಾರರಿದ್ದು 1 ಸ್ಥಾನವಿದೆ. ಸಾಲಗಾರರ ಕ್ಷೇತ್ರದಿಂದ ಸಾಮಾನ್ಯ– ಕುಮಾರ ಹೆಚ್.ಎಸ್(365), ಮಹದೇವ ಹೆಚ್.ಪಿ (339), ಅನಿಲ್‌ಕುಮಾರ್ ಹೆಚ್.ಪಿ.(308), ಈರೇಗೌಡ(191), ಚಂದ್ರ(277). ಹಿಂ.ವ 'ಅ' ವಿನೋದ್‌ಕುಮಾರ್ ಹೆಚ್.ಎಂ.(413), ಹಿಂ.ವ.'ಬಿ' ಹರೀಶ್. ಕೆ.ಕೆ.(383). ಮಹಿಳಾ ಮೀಸಲು– ಕಾವೇರಮ್ಮ (329), ಪಾರ್ವತಿ (342)ಪ.ಜಾತಿ, ಮಹದೇವ ಹೆಚ್.ಡಿ(259), ಪ.ಪಂ ಮಹೇಶ್‌ನಾಯಕ (278). ಸಾಲಗಾರರಲ್ಲದ ಕ್ಷೇತ್ರದಿಂದ ಅಮೃತೇಶ್ 318 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಚುನಾವಣಾಧಿಕಾರಿಯಾಗಿ ಹಿತೇಂದ್ರ ಕರ್ತವ್ಯ ನಿರ್ವಹಿಸಿದರು. ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಯರಾಂ ಹಾಜರಿದ್ದರು.



ವರುಣ ವಿಧಾನಸಭಾ ಕ್ಷೇತ್ರದ ಹಳೆ ಕೆಂಪಯ್ಯನಹುಂಡಿಗೆ ಭೇಟಿ ನೀಡಿದ್ದ ಬಿಜೆಪಿ ಯುವ ಮುಖಂಡ ದಿಲೀಪ್ ಅವರನ್ನು ಅಂದಾನಿಗೌಡ (ಜೋಗಿ), ಮುಖಂಡರಾದ ನಿಶಾಂತ್, ಕುಪ್ಪೆಗಾಲ ಬಾಬು ಇತರರು ಸನ್ಮಾನಿಸಿದರು.

ಸಮಸ್ಯೆಗಳಿಂದ ಹೊರಬರಲು ಚಿಂತನ–ಮಂಥನ ನಡೆಸಬೇಕಿದೆ

ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳ ಸಲಹೆ



ಮೈಸೂರು, ಸೆ.3(ಎಸ್‌ಪಿಎನ್)– ಕಾಲ ಬದಲಾದಂತೆ ಸಮಸ್ಯೆಗಳ ಸ್ವರೂಪಗಳು ಬದಲಾಗುತ್ತಿವೆ. ಇದರಿಂದ ವಿಪ್ರ ಸಮುದಾಯವೂ ಕೂಡ ಹೊರತಾಗಿಲ್ಲ. ಹಾಗಾಗಿ ಹೊಸ ಹೊಸ ಸಮಸ್ಯೆಗಳಿಂದ ವಿಪ್ರ ಸಮುದಾಯ ಹೊರ ಬರುವ ಬಗ್ಗೆ ಚಿಂತನ–ಮಂಥನ ನಡೆಸಬೇಕಿದೆ ಎಂದು ಉಡುಪಿ ಪೇಜಾವರ ಅಧೋಕ್ಷಜ ತೀರ್ಥ ಪೀಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಅಭಿಪ್ರಾಯಪಟ್ಟರು.

ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿನ ಟಿ.ಕೆ.ಬಡಾವಣೆಯ ಶ್ರೀ ಕೃಷ್ಣಧಾಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಸಭಾ ವತಿಯಿಂದ ರಾಜ್ಯ ಮಟ್ಟದ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶವನ್ನು ಅ.8ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದು, ಇದರ ಪೂರ್ವಭಾವಿಯಾಗಿ ನಡೆದ ಮೈಸೂರಿನ ಉದ್ಯಮಿಗಳು ಮತ್ತು ವ್ಯಾಪಾರಸ್ಥರ ಸಭೆಯಲ್ಲಿ ಭಾಗವಹಿಸಿ ಶ್ರೀ ಗಳು ಮಾತನಾಡಿದರು.

ಪುರಾಣ, ಇತಿಹಾಸ ಕಾಲಘಟ್ಟದಿಂದಲೂ ವಿಪ್ರ ಸಮುದಾಯ ಅನೇಕ ಸಮಸ್ಯೆಗಳನ್ನು ಕಂಡಿದೆ. ಆದರೆ, ಆಧುನಿಕ ಯುಗದಲ್ಲಿ ಸಮಸ್ಯೆಗಳ ಸ್ವರೂಪ ಬದಲಾಗಿದೆ. ನಮ್ಮಲ್ಲಿ ಕೇವಲ ಪಾಠ–ಪ್ರವಚನಗಳು, ಧಾರ್ಮಿಕ ಕಾರ್ಯಕ್ರಮಗಳು ಸೇರಿದಂತೆ ಇತರೆ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದಾರೆ. ಆದರೆ, ಇವರೆಲ್ಲಾ ಒಗ್ಗೂಡಿಸುವುದೇ ದೊಡ್ಡಸವಾಲಿನ ವಿಷಯ ಎಂದು ತಿಳಿಸಿದರು.

ಹಾಗಾಗಿ ಎಲ್ಲರೂ ಒಗ್ಗೂಡಿ ವಿಪ್ರ ಸಮುದಾಯದಲ್ಲಿನ ಬಡವರಿಗೆ ಮಾರ್ಗದರ್ಶನ ನೀಡಿ, ಅವರನ್ನು ಮುಖ್ಯವಾಹಿನಿಗೆ ತರುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚಿಂತನೆ ನಡೆಸಿ, ಬೆಂಗಳೂರಿನಲ್ಲಿ ಅ.8ರಂದು ಬೃಹತ್ ಸಮಾವೇಶ ಹಮ್ಮಿಕೊಂಡಿದ್ದು, ಈ ಸಮಾವೇಶ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ ಎಂದು ತಿಳಿಸಿದರಲ್ಲದೆ, ನಮ್ಮ ಅವಮಾನಕ್ಕೂ ನಾವೇ ಕಾರಣ, ನಮ್ಮ ಏಳಿಗೆಗೂ ನಾವೇ ಕಾರಣ ಎಂದು ಭಗವದ್ಗೀತೆಯಲ್ಲಿ ಉಲ್ಲೇಖವಾಗಿದೆ ಇತರ ಬೇರೆ ಸಮುದಾಯಗಳನ್ನು ನಮ್ಮ ಜೊತೆ ಕರೆದುಕೊಂಡು ಹೋಗಬೇಕು ಎಂದು ತಿಳಿ ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷರೂ ಆದ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಮಾತನಾಡಿ, ಬೆಳಗಾವಿಯಲ್ಲಿ ದೊಡ್ಡದೊಡ್ಡ ಕೈಗಾರಿಕೆಗಳನ್ನು ವಿಪ್ರರು ಸ್ಥಾಪಿಸಿದ್ದಾರೆ. ಈಗಾಗಲೇ ಇವರೆಲ್ಲರನ್ನು ಒಗ್ಗೂಡಿಸಿ ಸಭೆ ಮಾಡಲಾಗಿದೆ. ಖ್ಯಾತ ಉದ್ಯಮಿಗಳು ನಮ್ಮ ಪ್ರಯತ್ನಕ್ಕೆ ಸಾಥ್ ನೀಡುತ್ತಿದ್ದಾರೆ. ಹಾಗಾಗಿ ಮೈಸೂರಿನ ವಿಪ್ರ ಸಮುದಾಯದ ಉದ್ಯಮಿಗಳು, ವ್ಯಾಪಾರಸ್ಥರು ಅ.8ರಂದು ಬೆಂಗಳೂರಿನಲ್ಲಿ ನಡೆಯುವ ಸಮಾವೇಶಕ್ಕೆ ಹೆಚ್ಚಿನ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ನಮ್ಮ ಸಮುದಾಯದಲ್ಲಿನ ಯುವಕರಿಗೆ ವಿವಿಧ ರೀತಿಯ ಕೌಶಲ್ಯಗಳನ್ನು ಗುರುತಿಸಿ ತರಬೇತಿ ನೀಡುವ ಕುರಿತು ಮಹಸಭಾದಲ್ಲಿ ಗಂಭೀರ ಚಿಂತನೆಗಳು ನಡೆಯುತ್ತವೆ. ಇದಕ್ಕಾಗಿ ವೆಬ್ ಪೋರ್ಟಲ್ ಸ್ಥಾಪಿಸಲಾಗಿದೆ ಇದರಲ್ಲಿ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡು ಇದರ ಉಪಯೋಗ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ವಿಪ್ರ ಸಮುದಾಯದಲ್ಲೂ ಬಡವರಿದ್ದಾರೆ. ಅಂತಹ ಯುವಕರ ನೆರವಿಗೆ ಧಾವಿಸುವುದು ನಮ್ಮ–ನಿಮ್ಮೆಲ್ಲರ ಕರ್ತವ್ಯವಾಗಿದೆ. ನನ್ನ ಇತಿ–ಮಿತಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳಿಗೆ, ಯುವಕರಿಗೆ ಉದ್ಯೋಗ ಕೊಡಿಸುವ ಬಗ್ಗೆ ನೆರವಾಗುತ್ತಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಸಾಧ್ಯವಾದಷ್ಟು ಬಡವರ ನೆರವಿಗೆ ಧಾವಿಸಿ, ನನ್ನ ಕೈಲಾದಷ್ಟು ಸಹಾಯ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಯುವ ಉದ್ಯಮಿ ನಿಶಾಂತ್ ಮಾತನಾಡಿ, ಬ್ರಾಹ್ಮಣ ಸಮುದಾಯದ ಯುವಕರು, ನಾನಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವುದು ಸಂತೋಷ ಸಂಗತಿ. ಆದರೆ, ಕೆಲವರಿಗೆ ಕೌಶಲ್ಯ ಕೊರತೆಯಿಂದಾಗಿ ಹೋಟೆಲ್ ಉದ್ಯಮ, ಪುರೋಹಿತ ವೃತ್ತಿಗಳಲ್ಲಿ ಪ್ರಸ್ತುತ ಸಂದರ್ಭದಲ್ಲಿ ಗುರುತಿಸಿಕೊಳ್ಳಲು ಆಗುತ್ತಿಲ್ಲ. ಇಂತಹ ಯುವಕರಿಗೆ ತಮ್ಮ ಕುಲ ಕಸುಬುಗಳ ಬಗ್ಗೆ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ತರಬೇತಿ ಆಯೋಜಿಸುವ ಬಗ್ಗೆ ಬ್ರಾಹ್ಮಣ ಮಹಾಸಭಾ ಚಿಂತಿಸಬೇಕು ಎಂದು ಸಲಹೆ ನೀಡಿದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ರಾಜ್ಯ ಉಪಾಧ್ಯಕ್ಷ ಹಾಗೂ ರಾಜ್ಯ ವ್ಯಾಪಾರ ಮತ್ತು ವಾಣಿಜ್ಯೋದ್ಯಮದ ವಿಭಾಗದ ಉಸ್ತುವಾರಿಗಳಾದ ರೂಪಶಾಸ್ತ್ರಿ, ಪುಷ್ಪ ಅಯ್ಯಂಗಾರ್, ಉದ್ಯಮಿಗಳಾದ ರವಿಶಾಸ್ತ್ರಿ, ಎಂ.ಕೆ.ಪುರಾಣಿಕ್, ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ರಾಕೇಶ್‌ಭಟ್, ಕೆ.ಎಂ. ನಿಶಾಂತ್, ಕಡಕೋಳ ಜಗದೀಶ್, ಸಚಿಂದ್ರ, ಚಕ್ರಪಾಣಿ, ಹಾಗೂ ಮೈಸೂರು ನಗರದ ವಿಪ್ರ ಮುಖಂಡರು ಹಾಜರಿದ್ದರು.

ಮಹಿಳೆಯ ಸರ ಅಪಹರಣ

ಮೈಸೂರು, ಸೆ.3(ಎಸ್‌ಬಿಡಿ)– ಮಹಿಳೆಯ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಸಿದ್ಧಾರ್ಥನಗರದಲ್ಲಿ ಭಾನುವಾರ ಸಂಜೆ ನಡೆದಿದೆ.

ಸಿದ್ಧಾರ್ಥನಗರ ತ್ಯಾಗ ಮಾರ್ಗದ ನಿವಾಸಿ ಎನ್.ಎಸ್.ರತ್ನಾ(63) ಸರ ಕಳೆದುಕೊಂಡವರಾಗಿದ್ದು, ಅವರು ನೀತಿ ಮಾರ್ಗದಲ್ಲಿರುವ ಸ್ನೇಹಿತೆ ಮನೆಗೆ ಹೋಗಿ ಸಂಜೆ ಸುಮಾರು 7 ಗಂಟೆ ಸಮಯದಲ್ಲಿ ವಾಪಸ್ಸಾಗುತ್ತಿದ್ದಾಗ ತ್ಯಾಗ ಮಾರ್ಗದ ಜಂಕ್ಷನ್‌ನಲ್ಲಿ ಸುಮಾರು 20–25 ವರ್ಷದ ಇಬ್ಬರು ಯುವಕರು ದ್ವಿಚಕ್ರ ವಾಹನ ನಿಲ್ಲಿಸಿಕೊಂಡಿದ್ದರು. ಹಿಂಬದಿಯಲ್ಲಿ ಕುಳಿತಿದ್ದವನು ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ. ರತ್ನಾ ಅವರು ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಆತ ಹಿಂಭಾಗದಿಂದ ಬಂದು ಏಕಾಏಕಿ 80 ಗ್ರಾಂ ಸರ ಕಿತ್ತುಕೊಂಡು, ದ್ವಿಚಕ್ರ ವಾಹನಕ್ಕೆ ಹತ್ತಿಕೊಂಡ. ಕ್ಷಣಾರ್ಧದಲ್ಲಿ ಇಬ್ಬರೂ ವಿನಯ ಮಾರ್ಗದ ಕಡೆಗೆ ಪರಾರಿಯಾದರು ಎಂದು ರತ್ನಾ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಖದೀಮರ ಪತ್ತೆಗೆ ಶೋಧ ಮುಂದುವರೆಸಿದ್ದಾರೆ.

ಏಷ್ಯಾಕಪ್; ಇಂದು ಇಂಡಿಯಾ–ನೇಪಾಳ್ ಮುಖಾಮುಖಿ

ಶ್ರೀಲಂಕಾ(ಪಲ್ಲೇಕೆಲೆ), ಸೆ3–ಮಳೆಯಿಂದಾಗಿ ಪಾಕಿಸ್ತಾನದ ವಿರುದ್ಧ ಟೈ ಮಾಡಿಕೊಂಡ ಭಾರತ ಇಂದು ನೇಪಾಳ ತಂಡದ ಎದುರು ನಾಕ್‌ಔಟ್ ಪಂದ್ಯವಾಡಲಿದೆ. ಇಂದು ಉಭಯ ತಂಡಗಳಿಗೂ ಮಾಡು ಇಲ್ಲವೇ ಮಡಿ ಪಂದ್ಯವಾಗಿದ್ದು, ಸೋತ ತಂಡ ಟೂರ್ನಿಯಿಂದ ಹೊರಬೀಳಲಿದೆ. ಶ್ರೀಲಂಕಾದ ಪಲ್ಲೇಕೆಲೆ ಕ್ರೀಡಾಂಗಣದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ಪಂದ್ಯ ಆರಂಭವಾಗಲಿದೆ. ವೈಯಕ್ತಿಕ ಕಾರಣಗಳಿಂದ ಸ್ಟಾರ್ ಬೌಲರ್ ಜಸ್ಪ್ರೀತ್ ಬೂಮ್ರಾ ಭಾರತಕ್ಕೆ ವಾಪಸ್ಸಾಗಿದ್ದಾರೆ. ಇನ್ನುಳಿದಂತೆ ಭಾರತದ ಆಡುವ 11 ರ ಬಳಗ ಯಥಾವತ್ತಾಗಿ ಮುಂದುವರಿಸುವ ಸಾಧ್ಯತೆ ಇದೆ.

ಸೆ.7ಕ್ಕೆ ಸ್ಪರ್ಧಾತ್ಮಕ ಪರೀಕ್ಷಾ ಕಾರ್ಯಾಗಾರ

ಮೈಸೂರು, ಸೆ.3(ಸಿಎನ್)– ಮೈಸೂರಿನ ವಿಜಯ ಐಎಎಸ್, ಕೆಎಎಸ್ ತರಬೇತಿ ಕೇಂದ್ರದಿಂದ ವಿಜಯನಗರ 2ನೇ ಹಂತದಲ್ಲಿರುವ ಸಂಸ್ಥೆಯ ಕಚೇರಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯ ಉಚಿತ ಕಾರ್ಯಾಗಾರ ಸೆ.7ರ ಸಂಜೆ 5ಕ್ಕೆ ನಡೆಯಲಿದೆ. ಈ ಕಾರ್ಯಾಗಾರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಡಿಸಿಪಿ ಎಂ.ಮುತ್ತುರಾಜು, ಕಾರ್ಮಿಕ ಇಲಾಖೆ ಸಹಾಯಕ ಆಯುಕ್ತ ನಾಜಿಯಾ ಸುಲ್ತಾನ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.ಸಂ. 7676171798 /8970550627 ಸಂಪರ್ಕಿಸಿ.

ಸಂಸ್ಥೆಯ ಹೆಸರಿನಲ್ಲಿ 1,000 ಕೋಟಿ ವೈಯಕ್ತಿಕ ಖರ್ಚು

ಜೆಟ್ ಏರ್ವೇಸ್ ಸಂಸ್ಥಾಪಕ ಗೋಯಲ್ ವಿರುದ್ಧ ಪ್ರಕರಣ

ನವದೆಹಲಿ, ಸೆ.3–ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೊಳಗಾಗಿರುವ ಜೆಟ್ ಏರ್ವೇಸ್ ಸಂಸ್ಥಾಪಕ ನರೇಶ್ ಗೋಯಲ್ ವಿರುದ್ಧ ಸಂಸ್ಥೆಯ ಹೆಸರಿನಲ್ಲಿ 1,000 ಕೋಟಿ ರೂಪಾಯಿ ಮೊತ್ತದ ಅನುಮಾನಾಸ್ಪದ ವೈಯಕ್ತಿಕ ಖರ್ಚು ಮಾಡಿರುವ ಪ್ರಕರಣ ದಾಖಲಿಸಲಾಗಿದೆ.

ಇ.ಡಿ ತನಿಖೆಯ ಪ್ರಕಾರ, ಗೋಯಲ್ ಹಾಗೂ ಅವರ ಕುಟುಂಬ ಸದಸ್ಯರು ದಾಖಲೆ, ಲೆಕ್ಕವಿಲ್ಲದ ವಹಿವಾಟುಗಳ ಮೂಲಕ ಬ್ಯಾಂಕ್‌ನಲ್ಲಿದ್ದ ಹಣವನ್ನು ವಿದೇಶಿ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿದ್ದಾರೆ. ಜೆಟ್ ಏರ್ವೇಸ್ ದುಬೈ, ಐರ್ಲೆಂಡ್ ಹಾಗೂ ಇನ್ನಿತರ ಟ್ಯಾಕ್ಸ್ ಹೆವನ್ ದೇಶಗಳಲ್ಲಿರುವ ವಿದೇಶಿ ಸಂಸ್ಥೆಗಳಿಗೆ ಫಂಡ್‌ಗಳನ್ನು ವರ್ಗಾವಣೆ ಮಾಡಿದೆ ಎಂದು ಇ.ಡಿ ಹೇಳಿದೆ.

ಚಾರ್ಟರ್ಡ್ ಅಕೌಂಟೆಂಟ್‌ಗಳು ಮತ್ತು ಸಲಹೆಗಾರರು ಸೇರಿದಂತೆ ಹಲವು ಸ್ಥಳಗಳಲ್ಲಿ ಜುಲೈ 19ರಂದು ಇ.ಡಿ ಶೋಧ ಕಾರ್ಯಾಚರಣೆ ನಡೆಸಿದ್ದು, ಜೆಟ್ ಏರ್‌ವೇಸ್‌ನಿಂದ ಹಲವಾರು ವರ್ಷಗಳಿಂದ ದೊಡ್ಡ ಪಾವತಿಗಳನ್ನು ಮಾಡಲಾಗಿದೆ. ಜಾರಿ ನಿರ್ದೇಶನಾಲಯವು ದೊಡ್ಡ ಪ್ರಮಾಣದ ದೋಷಾರೋಪಣೆಯ ದಾಖಲೆಗಳನ್ನು ಸಂಗ್ರಹಿಸಿದೆ ಎಂದು ಹೇಳಿದೆ. ಕೆನರಾ ಬ್ಯಾಂಕ್‌ಗೆ 538 ಕೋಟಿ ರೂಪಾಯಿ ನಷ್ಟ ಉಂಟು ಮಾಡಿದ್ದಕ್ಕಾಗಿ ಜೆಟ್ ಏರ್‌ವೇಸ್, ನರೇಶ್ ಗೋಯಲ್ ಮತ್ತು ಇತರರ ವಿರುದ್ಧ ಸಿಬಿಐ ದಾಖಲಿಸಿದ ಎಫ್‌ಐಆರ್ ಆಧಾರದ ಮೇಲೆ ಇಡಿ ತನಿಖೆಯನ್ನು ಪ್ರಾರಂಭಿಸಿತು. ಎಫ್‌ಐಆರ್‌ನಲ್ಲಿ ಗೋಯಲ್ ಮತ್ತು ಇತರರು ವಂಚನೆ, ಕ್ರಿಮಿನಲ್ ಪಿತೂರಿ, ಕ್ರಿಮಿನಲ್ ನಂಬಿಕೆಯ ಉಲ್ಲಂಘನೆ ಮತ್ತು ಕ್ರಿಮಿನಲ್ ದುರ್ನಡತೆ ಆರೋಪಿಸಲಾಗಿದೆ.

ಗೋಯಲ್ ಅವರಿಗೆ ಎರಡು ಬಾರಿ ಸಮನ್ಸ್ ನೀಡಲಾಗಿತ್ತು, ಆದರೆ ಅವರು ಇಡಿ ಮುಂದೆ ಹಾಜರಾಗಲು ವಿಫಲರಾಗಿದ್ದರು.

ಕೈಗಾರಿಕೆಗಳಿಗೆ ಭೂಮಿ ನೀಡಿದ ಕುಟುಂಬಗಳಿಗೆ ಉದ್ಯೋಗಕ್ಕೆ ಆದ್ಯತೆ

ಕೆಐಎಡಿಬಿ ಸಿಇಓ ಡಾ. ಮಹೇಶ್ ಸಲಹೆ

ಮೈಸೂರು, ಸೆ. 3(ಆರ್‌ಕೆ)– ಕೈಗಾರಿಕೆಗಳಿಗೆ ಭೂಮಿ ನೀಡಿದ ರೈತರ ಕುಟುಂಬದ ಸದಸ್ಯರಿಗೆ ಕಂಪನಿಗಳು ಉದ್ಯೋಗಾವಕಾಶ ಒದಗಿಸುವ ಬಗ್ಗೆ ಆದ್ಯತೆ ಮೇಲೆ ಕ್ರಮ ವಹಿಸುವಂತೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಮಹೇಶ್ ಅವರು ಮಂಡಳಿಯ ಪ್ರಾದೇಶಿಕ ಕಚೇರಿ ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ.



ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಕೆಐಎಡಿಬಿ ಪ್ರಾದೇಶಿಕ ಕಚೇರಿಗೆ ಶನಿವಾರ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕಡಕೊಳ, ಇಮ್ಮಾವು, ಅಡಕನಹಳ್ಳಿ ಸೇರಿದಂತೆ ಹಲವು ಕೈಗಾರಿಕಾ ಪ್ರದೇಶಕ್ಕೆ ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಕೈಗಾರಿಕಾ ನಿವೇಶನ ರಚಿಸಿ ಹಂಚಿಕೆ ಮಾಡಿದ ನಂತರ ಸ್ಥಾಪನೆಯಾದ ಕಂಪನಿಗಳು ಭೂಮಿ ಕಳೆದುಕೊಂಡವರ (ಲ್ಯಾಂಡ್ ಲೂಸರ್) ಕುಟುಂಬದ ಅರ್ಹ ಸದಸ್ಯರಿಗೆ ಉದ್ಯೋಗ ಒದಗಿಸಿಕೊಡಲು ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕೆಂದು ಅವರು ತಿಳಿಸಿದರು.

ಇತ್ತೀಚೆಗೆ ಕಡಕೊಳ ಕೈಗಾರಿಕಾ ಪ್ರದೇಶದ ಅಡಿಕೆ ಹಾಳೆ ತಯಾರಿಕಾ ಘಟಕವೊಂದನ್ನು ಉದ್ಘಾಟಿಸಲೆಂದು ಮುಖ್ಯಮಂತ್ರಿಗಳು ತೆರಳಿದಾಗ ಕೆಲ ರೈತು ಭೂಮಿ ಕಳೆದುಕೊಂಡ ಕುಟುಂಬದ ಒಬ್ಬನಿಗೆ ಕಂಪನಿಗಳಲ್ಲಿ ಉದ್ಯೋಗ ಕೊಡಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದಾರೆ. ಈ ಸಂಬಂಧ ಅಧಿಕಾರಿಗಳು ಕಂಪನಿ ಮುಖ್ಯಸ್ಥರೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳುವಂತೆಯೂ ಡಾ. ಮಹೇಶ್ ತಿಳಿಸಿದರು.

ನಂತರ ಹೆಬ್ಬಾಳು, ಕೈಗಾರಿಕಾ ಪ್ರದೇಶ, ಇಮ್ಮಾವು, ಕಡಕೊಳ, ಅಡಕನಹಳ್ಳಿ ಕೈಗಾರಿಕಾ ಬಡಾವಣೆಗೂ ಭೇಟಿ ನೀಡಿದ ಅವರು, ರಸ್ತೆ, ನೀರು ಸರಬರಾಜು, ವಿದ್ಯುತ್ ಸೌಲಭ್ಯ, ಸ್ವಚ್ಛತೆ ಸೇರಿದಂತೆ ಕೈಗಾರಿಕೆಗಳಿಗೆ ಮೂಲ ಸೌಲಭ್ಯ ಕಲ್ಪಿಸಿರುವ ಸಂಬಂಧ ಖುದ್ದು ಪರಿಶೀಲನೆ ನಡೆಸಿ ಗುಂಡಿ ಬಿದ್ದ ರಸ್ತೆಗಳು, ಅಲ್ಲಲ್ಲಿ ಕಟ್ಟಡ ತ್ಯಾಜ್ಯಗಳನ್ನು ಸುರಿದಿರುವುದೂ ಸೇರಿದಂತೆ ಸಮಸ್ಯೆಗಳ ಇತ್ಯರ್ಥಗೊಳಿಸುವಂತೆಯೂ ಕೆಐಎಡಿಬಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರು ಕೈಗಾರಿಕೆಗಳ ಸಂಘದ ಉಪಾಧ್ಯಕ್ಷ ಪಿ. ವಿಶ್ವನಾಥ್, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್, ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ ಪ್ರಿಯದರ್ಶಿನಿ, ಅಭಿವೃದ್ಧಿ ಅಧಿಕಾರಿ ಸುಷ್ಮಾ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಈಶ ಔಟ್‌ರೀಚ್ ಗ್ರಾಮೋತ್ಸವ ಕ್ರೀಡಾ ಉತ್ಸವ

ಉಡುಪಿ, ಕೊಡಗು ವಾಲಿಬಾಲ್ ತಂಡ ಅಂತಿಮ ಸುತ್ತಿಗೆ ಪ್ರವೇಶ

- ದಕ್ಷಿಣ ಭಾರತದ ವಾಲಿಬಾಲ್ ತಂಡಗಳ ನಡುವೆ ಸೆಣಸಾಟ
- ಸೆ. 23 ರಂದು ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ನಡೆಯುವ ಪಂದ್ಯಗಳು
- ವಾಲಿಬಾಲ್ ಅಂತಿಮ ಪಂದ್ಯಗಳಲ್ಲಿ ಕ್ರೀಡಾ ಸೆಲೆಬ್ರಿಟಿಸ್ ಭಾಗಿ ಸಾಧ್ಯತೆ



ಮೈಸೂರು, ಸೆ.3(ಸಿಎನ್)–ಈಶ ಔಟ್‌ರೀಚ್ ವತಿಯಿಂದ ನಡೆದ 'ಗ್ರಾಮೋತ್ಸವ ಕ್ರೀಡಾ ಉತ್ಸವದ 15ನೇ ಆವೃತ್ತಿಯು ಮೊದಲ ಬಾರಿಗೆ ಮೈಸೂರು ಮತ್ತು ಚಿಕ್ಕಬಳ್ಳಾಪುರದಲ್ಲಿ ಇಂದು(ಸೆ.3) ಯಶಸ್ವಿಯಾಗಿ ಮುಕ್ತಾಯವಾಗಿವೆ. ಗ್ರಾಮೋತ್ಸವದ ವಿಭಾಗೀಯ ಪಂದ್ಯಗಳು ರಾಜ್ಯದ 14 ಕ್ಲಸ್ಟರ್ ಮಟ್ಟದಲ್ಲಿ ನಡೆದಿದ್ದು, ರಾಜ್ಯಾದ್ಯಂತ ನಡೆದ ಪುರುಷರ ವಾಲಿಬಾಲ್ ಪಂದ್ಯಗಳು ಮುಕ್ತಾಯಗೊಂಡಿವೆ. ರಾಜ್ಯಾದ್ಯಂತ ಏಕಕಾಲಕ್ಕೆ ನಡೆದ ಪಂದ್ಯಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ವಾಲಿಬಾಲ್ ತಂಡಗಳು ಸೆ.23 ರಂದು ತಮಿಳುನಾಡಿನ ಕೊಯಮತ್ತೂರಿನ ಈಶಾ ಯೋಗ ಕೇಂದ್ರದಲ್ಲಿ ದಕ್ಷಿಣ ಭಾರತದ ತಂಡಗಳ ನಡುವೆ ಪ್ರಶಸ್ತಿಗಾಗಿ ಸೆಣಸಾಡಲಿವೆ.

ಮೈಸೂರಿನ ಜೆಪಿ ನಗರದ ಪುಟ್ಟರಾಜು ಗವಾಯಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ವಾಲಿಬಾಲ್ ಪಂದ್ಯವನ್ನು ಚಾಮರಾಜನಗರ ತಹಸೀಲ್ದಾರ್ ಎ.ಮಂಜುನಾಥ್ ಉದ್ಘಾಟನೆ ಮಾಡಿದರು. ಭಾರತೀಯ ರೈಲ್ವೆ ಕಚೇರಿ ಅಧೀಕ್ಷಕ ಬಿ.ವಿನೋದ್ ಮಾದೇಗೌಡ ಅವರು ಗೆದ್ದ ತಂಡಗಳಿಗೆ ನಗದು ಬಹುಮಾನ ವಿತರಿಸಿದರು.

ಹಲವು ಜಿಲ್ಲೆಯಲ್ಲಿ ಪಂದ್ಯಾವಳಿ: ಮೈಸೂರು, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಕೊಡಗು, ಶಿವಮೊಗ್ಗ ಹಾಗೂ ದಕ್ಷಿಣ ಕನ್ನಡ ಸೇರಿದಂತೆ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಏಕಕಾಲಕ್ಕೆ ವಾಲಿಬಾಲ್ ಪಂದ್ಯಗಳನ್ನು ಆಡಿವೆ.

ಉಡುಪಿ, ಕೊಡಗು ತಂಡಗಳ ಆಯ್ಕೆ: ಉಡುಪಿಯ ಪಲ್ಲಿ ಫ್ರೆಂಡ್ಸ್ ಪ್ರಥಮ ಸ್ಥಾನ ಪಡೆದರೆ, ಕೊಡಗಿನ ಸಿಗ್ನೇಚರ್ ಬಾಯ್ಸ್ ದ್ವಿತೀಯ, ಮಡಿಕೇರಿಯ ರಾಯಲ್ ಫ್ರೆಂಡ್ಸ್ ತಂಡ ತೃತೀಯ, ಚಾಮರಾಜನಗರದ ಮಾಂಬಳ್ಳಿ ತಂಡ ಚತುರ್ಥ ಸ್ಥಾನ ಪಡೆದಿವೆ. ಪಲ್ಲಿ ಫ್ರೆಂಡ್ಸ್ ಹಾಗೂ ಸಿಗ್ನೇಚರ್ ಬಾಯ್ ವಾಲಿಬಾಲ್ ತಂಡಗಳು ಕೊಯಮತ್ತೂರಿನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಕಣಕ್ಕೆ ಇಳಿಯಲಿವೆ.

ಅಂತಿಮ ಪಂದ್ಯಗಳಿಗೆ ಕ್ರೀಡಾ ಸೆಲೆಬ್ರಿಟಿಸ್: ಈ ವರ್ಷದ ಆವೃತ್ತಿಯನ್ನು ಆರು ದಕ್ಷಿಣ ಭಾರತದ ರಾಜ್ಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಸಲಾಗಿದೆ. ಅಂತಿಮ ಸುತ್ತಿನ ಪಂದ್ಯಗಳು ಕೊಯಮತ್ತೂರಿನ ಈಶ ಯೋಗ ಕೇಂದ್ರದಲ್ಲಿ ಮುಕ್ತಾಯಗೊಳ್ಳಲಿವೆ, ಅಲ್ಲಿ ಎರಡು ತಂಡಗಳು ದೊಡ್ಡ ನಗದು ಬಹುಮಾನಕ್ಕಾಗಿ ಸ್ಪರ್ಧಿಸಲಿವೆ. ಈಶ ಗ್ರಾಮೋತ್ಸವ ತನ್ನ ಹಿಂದಿನ ಆವೃತ್ತಿಗಳಲ್ಲಿ ಸಚಿನ್ ತೆಂಡೂಲ್ಕರ್, ಮಿಥಾಲಿ ರಾಜ್, ಪಿವಿ ಸಿಂಧು, ಶಿಖರ್ ಧವನ್ ಮತ್ತು ವೀರೇಂದ್ರ ಸೆಹ್ವಾಗ್ ಅವರಂತಹ ಹಲವಾರು ಕ್ರೀಡಾ ಸೆಲೆಬ್ರಿಟಿಗಳು ಭಾಗವಹಿಸುವ ಸಾಧ್ಯತೆಯಿದೆ.

ಕಾರ್ಯಕ್ರಮಕ್ಕೂ ಮುನ್ನ ಚೆಂಡೆ ವಾದನ, ಕಂಸಾಳೆ, ಡೊಳ್ಳು ಕುಣಿತ ಸಾಂಸ್ಕೃತಿಕ ಪ್ರದರ್ಶನ ನೋಡುಗರ ಮನಸೆಳೆಯಿತು. ಈ ವೇಳೆ ಈಶಾ ಫೌಂಡೇಷನ್ ಮೈಸೂರು ಪದಾಧಿಕಾರಿಗಳು, ವಿದ್ಯಾರ್ಥಿಗಳು ಸೇರಿದಂತೆ ಕ್ರೀಡಾಸಕ್ತರು ನೆರೆದಿದ್ದರು.

ಸರ್ಜಿಕಲ್ ಸ್ಟ್ರೈಕ್ ನೇತೃತ್ವ ವಹಿಸಿದ್ದ ನಿವೃತ್ತ ಸೇನಾಧಿಕಾರಿಗೆ ಮಣಿಪುರದ ಟಾಸ್ಕ್



ಇಂಫಾಲ, ಸೆ.3– ಕಳೆದ ಹಲವು ತಿಂಗಳುಗಳಿಂದ ಹಿಂಸಾಚಾರದಿಂದ ನಲುಗಿ ಹೋಗಿರುವ ಮಣಿಪುರದಲ್ಲಿ ಶಾಂತಿ ಸ್ಥಾಪನೆಯ ಟಾಸ್ಕ್ ಅನ್ನು ಮಹತ್ವದ ವ್ಯಕ್ತಿಗೆ ಕೇಂದ್ರ ಸರ್ಕಾರ ನೀಡಿದೆ.

ಈ ಹಿಂದೆ ಮ್ಯಾನ್ಮಾರ್ ನೆಲದಲ್ಲಿ ಸರ್ಜಿಕಲ್ ಸ್ಟ್ರೈಕ್ ಕಾರ್ಯಾಚರಣೆ ನೇತೃತ್ವ ವಹಿಸಿದ್ದ ನಿವೃತ್ತ ಸೇನಾಧಿಕಾರಿ ಕರ್ನಲ್ (ನಿವೃತ್ತ) ನೆಕ್ಟರ್ ಸಂಜೆನ್ಬಮ್ ಅವರನ್ನು ಐದು ವರ್ಷಗಳ ಅಧಿಕಾರಾವಧಿಗೆ ಮಣಿಪುರ ಪೊಲೀಸ್ ಇಲಾಖೆಯಲ್ಲಿ ಹಿರಿಯ ಸೂಪರಿಂಟೆಂಡೆಂಟ್ (ಯುದ್ಧ) ಆಗಿ ನೇಮಿಸಿದೆ. 2015 ರಲ್ಲಿ ಮ್ಯಾನ್ಮಾರ್‌ನಲ್ಲಿ ಭಾರತದ ಸರ್ಜಿಕಲ್ ಸ್ಟ್ರೈಕ್‌ಗಳಲ್ಲಿ ಇದೇ ಅಧಿಕಾರಿ ಕರ್ನಲ್ (ನಿವೃತ್ತ) ನೆಕ್ಟರ್ ಸಂಜೆನ್ಬಮ್ ಪ್ರಮುಖ ಪಾತ್ರ ವಹಿಸಿದ್ದರು. ಈಗ ಕಳೆದ ಎರಡು ತಿಂಗಳಲ್ಲಿ 170 ಕ್ಕೂ ಹೆಚ್ಚು ಜೀವಗಳನ್ನು ಬಲಿ ಪಡೆದ ರಾಜ್ಯದಲ್ಲಿನ ಅಶಾಂತಿಯನ್ನು ನಿಭಾಯಿಸಲು ಮಣಿಪುರ ಸರ್ಕಾರಕ್ಕೆ ಸಹಾಯ ಮಾಡಲಿದ್ದಾರೆ.

ಹಸಿರು ನಮ್ಮ ಉಸಿರು

ಅರಣ್ಯ ಭವನದಲ್ಲಿ ದಸರಾ ಗಜಪಡೆ ರಿಲ್ಯಾಕ್ಸ್



ಮೈಸೂರು, ಸೆ.3(ಎಸ್‌ಬಿಡಿ)– ಮೈಸೂರು ಅರಣ್ಯ ಭವನದ ಆವರಣದಲ್ಲಿರುವ ದಸರಾ ಆನೆಗಳು ಸದ್ಯ ರಿಲ್ಯಾಕ್ಸ್ ಮೂಡ್‌ನಲ್ಲಿವೆ.

ದಸರಾ ಗಜಪಡೆಯ ಮೊದಲ ತಂಡದಲ್ಲಿ ಕ್ಯಾಪ್ಟನ್ ಅಭಿಮನ್ಯು ಸೇರಿ 9 ಆನೆಗಳನ್ನು ಸೆ.1ರಂದು ಸಾಂಪ್ರದಾಯಿಕವಾಗಿ ನಾಗರಹೊಳೆ ವೀರನಹೊಸಹಳ್ಳಿಯಿಂದ ಮೈಸೂರಿನ ಅರಣ್ಯ ಭವನದ ಆವರಣಕ್ಕೆ ಕರೆತರಲಾಗಿದೆ. ಮೊದಲ ದಿನ ಗಜಪಡೆ ವೀಕ್ಷಣೆಗೆ ಹೆಚ್ಚು ಜನರಿಗೆ ಅವಕಾಶ ನೀಡಲಿಲ್ಲ. ಏಕಾಏಕಿ ಹೆಚ್ಚಿನ ಜನಸಂದಣಿ ಕಾಣಿಸಿದರೆ ಆನೆಗಳು ವಿಚಲಿತವಾಗಬಹುದು ಎಂಬ ಕಾರಣಕ್ಕೆ ನಿರ್ಬಂಧಿಸಲಾಗಿತ್ತು. ಆದರೆ ಶನಿವಾರ ಮತ್ತು ಭಾನುವಾರ ಹಲವರಿಗೆ ಅವಕಾಶ ನೀಡಲಾಯಿತಾದರೂ ಏಕಕಾಲಕ್ಕೆ ಹೆಚ್ಚು ಜನ ಹೋಗದಂತೆ ಸಿಬ್ಬಂದಿ ನಿರ್ವಹಣೆ ಮಾಡಿದರು.

ವಿಶ್ರಾಂತಿಯಲ್ಲಿರುವ ಅಂಬಾರಿ ಆನೆ ಅಭಿಮನ್ಯು, ಭೀಮ, ಮಹೇಂದ್ರ, ಅರ್ಜುನ, ಧನಂಜಯ, ಗೋಪಿ, ಕಂಜನ್, ವಿಜಯ ಹಾಗೂ ವರಲಕ್ಷ್ಮೀ ಆನೆಗಳನ್ನು ಮಾವುತರು ಹಾಗೂ ಕಾವಾಡಿಗಳು ಆರೈಕೆ ಮಾಡುತ್ತಿದ್ದಾರೆ. ಸದ್ಯ ಕುಸುಕಿ ಜೊತೆಗೆ ಹಸಿ ಮತ್ತು ಒಣ ಹುಲ್ಲನ್ನು ಆನೆಗಳಿಗೆ ನೀಡಲಾಗುತ್ತಿದೆ. ನಿತ್ಯ ಒಂದೆರಡು ಬಾರಿ ಆನೆಗಳಿಗೆ ಸ್ನಾನ ಮಾಡಿಸಲಾಗುತ್ತಿದೆ. ಮೊದಲ ಬಾರಿ ಕರೆತಂದಿರುವ ಕಂಜನ್ ಕೂಡ ಎಲ್ಲಾ ಆನೆಗಳಂತೆ ಆರಾಮವಾಗಿದೆ.

ಸೆ.5ಕ್ಕೆ ಅರಮನೆಗೆ: ಅರಣ್ಯ ಭವನದ ಆವರಣದಲ್ಲಿರುವ ಗಜಪಡೆ ಸೆ.5ಕ್ಕೆ ಅರಮನೆ ಅಂಗಳ ಪ್ರವೇಶಿಸಲಿದೆ. ಅಂದು ಮಧ್ಯಾಹ್ನ 12.01ರಿಂದ 12.51ರ ಅಭಿಜಿನ್ ಲಗ್ನದಲ್ಲಿ ಅರಮನೆ ಜಯಮಾರ್ತಾಂಡ ದ್ವಾರದಲ್ಲಿ ಸಾಂಪ್ರದಾಯಿಕವಾಗಿ ಗಜಪಡೆಯನ್ನು ಸ್ವಾಗತಿಸಲಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪನವರು ಹಲವು ಗಣ್ಯರೊಂದಿಗೆ ಗಜಪಡೆಗೆ ಪೂಜೆ ಸಲ್ಲಿಸಿ, ಬರಮಾಡಿಕೊಳ್ಳಲಿದ್ದಾರೆ. ಈಗಾಗಲೇ ಅರಮನೆ ಅಂಗಳದಲ್ಲಿ ಆನೆಗಳ ವಾಸ್ತವ್ಯಕ್ಕೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಮಾವುತರು ಹಾಗೂ ಕಾವಾಡಿಗಳ ಕುಟುಂಬದವರ ವಾಸ್ತವ್ಯಕ್ಕೂ ಅನುಕೂಲ ಮಾಡಿಕೊಡಲಾಗಿದೆ. ಕುಟುಂಬದೊಂದಿಗೆ ಆಗಮಿಸುವ ಮಕ್ಕಳಿಗೆ ತಾತ್ಕಾಲಿಕ ಶಾಲೆಯನ್ನೂ ಆರಂಭಿಸಲಾಗುತ್ತದೆ. ಆನೆಗಳಿಗೆ ವಿಶೇಷ ಆಹಾರ ನೀಡಿ ತಯಾರಿ ಮಾಡುವುದರ ಜೊತೆಗೆ ಮೆರವಣಿಗೆ ತಾಲೀಮು ನಡೆಸಲಾಗುತ್ತದೆ.

ಒಟ್ಟಾರೆ ಗಜಪಡೆಯ ಮೊದಲ ತಂಡದ ಆಗಮನದೊಂದಿಗೆ ಮೈಸೂರಲ್ಲಿ ದಸರಾ ಸಂಭ್ರಮ ಮನೆ ಮಾಡುತ್ತಿದೆ. ದಸರಾ ಪ್ರಮುಖ ಆಕರ್ಷಣೆ ಜಂಬೂಸವಾರಿಯಲ್ಲಿ ಭಾಗಿಯಾಗುವ ಆನೆಗಳನ್ನು ವೀಕ್ಷಿಸಿ, ಫೋಟೋ ಕ್ಲಿಕ್ಕಿಸಿಕೊಳ್ಳಲು ಸಹಸ್ರಾರು ಮಂದಿ ಕಾತುರರಾಗಿದ್ದಾರೆ. ಗಜಪಡೆ ಅರಮನೆ ಅಂಗಳಕ್ಕೆ ಆಗಮಿಸಿದ ಬಳಿಕ ಅಲ್ಲಿಗೆ ಜನ ತಂಡೋಪತಂಡವಾಗಿ ಆಗಮಿಸುವ ನಿರೀಕ್ಷೆ ಇದೆ. ಇನ್ನು ಸರ್ಕಾರದ ನಿರ್ದೇಶನದಂತೆ ಮೈಸೂರು ಜಿಲ್ಲಾಡಳಿತ ಅದ್ಧೂರಿ ದಸರಾಗೆ ಎಲ್ಲಾ ರೀತಿಯ ಸಿದ್ಧತೆ ನಡೆಸಿದೆ.

